To admit Scheduled Caste Students to all Hostels in the State.

Q.—481. Sri C. M. ARUMUGAM (Kolar Gold Fields—Scheduld Caste).—

Will the Government be pleased to state:—

whether they intend to issue instructions to throw open other Hostels in the State to Scheduled Caste students?

A.—Sri V. VENKATAPPA (Minister for Education).—

Instructions have been issued by the Director of Public Instruction to admit Scheduled Caste students in General Hostels.

To start Tamil Training School for Tamilians.

Q.—482. Sri C. M. ARUMUGHAM (Kolar GoldFields—Scheduled Caste).—

Will the Government be pleased to state:—

whether they will consider starting a Tamil Training School at K.G.F. (Higher and Secondary Grade) to provide adequate educational facilities to the increasing Tamilian population?

A.—Sri V. VENKATAPPA (Minister for Education).

The reply is in the negative.

To construct an artificial harbour at Bhatkal.

Q.—486. Sri C. M. ARUMUGHAM (Kolar Gold Fields—Scheduled Caste).—

Will the Government be pleased to state:—

whether there is any proposal to construct an artificial harbour at Bhatkal for import and export facilities for Mysore State?

A.—Sri B. VAIKUNTA BALIGA (Minister for Labour and Legal Affairs).—

Construction of Harbours (Major Ports), is the responsibility of the Government of India. There is at present no proposal to develop Bhatkal as a Major Port.

BUDGET FOR 1957-58—DEMANDS FOR GRANTS.

Demand No. 23—Agriculture, Horticulture and Fisheries.

40. *Agriculture.*

Mr. SPEAKER.—Motion moved:

"That a sum not exceeding Rs. 2,05,23,000 be granted to the Government to defray the charges which will come in course of payment during the year ending 31st day of March 1958, in respect of 'Agriculture'".

Demand No. 24—Rural Development.

No. 40-A Rural Development.

Mr. SPEAKER.—Motion moved:

"That a sum not exceeding Rs. 1,26,72,000 be granted to the Government to defray the charges which will come in course of payment during the year ending 31st day of March 1958, in respect of 'Rural Development'".

Demand No. 25—Veterinary

41. *Veterinary*

Mr. SPEAKER.—Motion moved:

"That a sum not exceeding Rs. 70,82,300 be granted to the Government to defray the charges which will come in course of payment during the year ending 31st day of March 1958, in respect of 'Veterinary'".

*ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ನಾನೀಗ "ವ್ಯವಸಾಯ, ಪಶು ವೈದ್ಯ ಮತ್ತು ಗ್ರಾಮಾಭಿವೃದ್ಧಿ" ಈ ಬಾಬುಗಳಮೇಲೆ ಮಾತನಾಡಬೇಕೆಂದು ನಿಂತಿದ್ದೇನೆ. ಈ ಮೂರು ಬಾಬುಗಳಿಗೂ ಸಂಬಂಧಪಟ್ಟ ಡಿಮ್ಯಾಂಡ್‌ಗಳನ್ನು ನಾನು ವಿರೋಧಿಸುತ್ತಾ ಸರ್ಕಾರದವರ ಗಮನಕ್ಕೆ ಕೆಲವು ವಿಚಾರಗಳನ್ನು ತರಬೇಕೆಂದು ಈಗ ಆಶಿಸಿದ್ದೇನೆ. ನಮ್ಮದೇಶ . . . .

ಅಧ್ಯಕ್ಷರು.—ತಾವು ಭಾಷಣವನ್ನು ಹತ್ತು ನಿಮಿಷಗಳೊಳಗೇ ಮುಗಿಸಬೇಕು.

(ಸಭೆಯಲ್ಲಿ ಕೆಲವು ಸದಸ್ಯರು ಪ್ರತಿಯೊಬ್ಬ ಸದಸ್ಯರಿಗೂ ಮಾತನಾಡಲು 15 ನಿಮಿಷಗಳ ಅವಕಾಶ ಕೊಡಬೇಕೆಂದು ಸೂಚನೆ ಕೊಟ್ಟರು.)

ಅಧ್ಯಕ್ಷರು.—ಆಗಬಹುದು. ಆ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಬಿ. ಚಾಮಯ್ಯ.—ಸ್ವಾಮಿ, ನಮ್ಮ ದೇಶ ವ್ಯವಸಾಯಗಾರರ ದೇಶ. ಈ ದಿವಸ ಹೊಸ ಮೈಸೂರು ರಾಜ್ಯದ ಪ್ರಜಾ ಸಂಖ್ಯೆ ಸುಮಾರು ಎರಡು ಕೋಟಿ ಇರಬಹುದು. ಇದರಲ್ಲಿ ಶೇಕಡ 80 ರಷ್ಟು ಪ್ರಜೆಗಳು ವ್ಯವಸಾಯಗಾರರು. ಹೀಗೆ ನಮ್ಮ ದೇಶದಲ್ಲಿ ಜನರು ಈ ಹೊತ್ತು ನೂರಕ್ಕೆ 80 ಜನರಂತೆ ವ್ಯವಸಾಯದ ಕಸುಬಿನಿಂದ ಜೀವನ ಮಾಡುತ್ತಿರುತ್ತಾರೆ. ಆದುದರಿಂದ ನಮ್ಮ ಸರ್ಕಾರ ವ್ಯವಸಾಯದ ವಿಚಾರಕ್ಕೆ ಮತ್ತು ಇದರ ಅಭಿವೃದ್ಧಿಗೆ ಹೆಚ್ಚು ಗಮನ ಕೊಡಬೇಕಾದುದು ಅತ್ಯವಶ್ಯಕ. ಈ ಕಸುಬನ್ನು ಉತ್ತಮ ಮಟ್ಟಕ್ಕೇರಿಸಲು ಸರ್ಕಾರದವರು ಸಾಕಷ್ಟು ಶ್ರಮವಹಿಸಿ ಕೆಲಸ ಮಾಡುವುದಲ್ಲದೆ-ದೇಶದಲ್ಲಿರತಕ್ಕ ವ್ಯವಸಾಯಗಾರರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯನೀಡಲು ಸರ್ಕಾರದವರು ಮುಂದೆ ಬರಬೇಕಾದ್ದು ಅತ್ಯಗತ್ಯವೆಂದು ನಾನು ಈ ಸಂದರ್ಭದಲ್ಲಿ ಅವರಿಗೆ ತಿಳಿಸಲಿಚ್ಛಿಸುತ್ತೇನೆ. ಆ ಉದ್ದೇಶದಿಂದಲೇ ಈ ದಿವಸ ಸರ್ಕಾರದವರು ಈ ವ್ಯವಸಾಯದ ಇಲಾಖೆಗೆ 2,05,23,000 ರೂ. ಗಳನ್ನು ಈ ಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಆದರೆ ಈ ಮೊಬಲಗಿನಲ್ಲಿ ಬಹುಭಾಗ ಯಾವ ಯಾವುದೋ ಕಾರ್ಯಗಳಿಗಾಗಿ ಖರ್ಚಾಗಿ ಹೋಗುತ್ತಿದೆ. ನಮ್ಮ ದೇಶದಲ್ಲಿ—ಎಂದರೆ ನಾನಿರತಕ್ಕ ಪ್ರಾಂತ್ಯದಲ್ಲಿ ಈಗ ಬತ್ತದ ಬೆಳೆಯನ್ನು ಹೆಚ್ಚಾಗಿ ತೆಗೆಯಲಾಗುತ್ತಿದೆ ಈ ಬೆಳೆಯನ್ನು ಉತ್ತಮಗೊಳಿಸಲು ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಈ ದಿವಸ ನಮ್ಮ ಪ್ರಾಂತ್ಯದಲ್ಲಿ ಸರ್ಕಾರದವರು ರೈತರಿಗೆ ಜಪಾನ್ ಮಾದರಿ ಬತ್ತದ ಬೆಳೆಯನ್ನು ತೆಗೆಯಬೇಕೆಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ಅದಕ್ಕಾಗಿ ಅವರೇನೂ ಒಂದು ಸರಿಯಾದ ವ್ಯವಸ್ಥೆ ಮಾಡಿದಂತೆ ಕಂಡುಬರಲಿಲ್ಲ. ಇದರ ಪ್ರಚಾರಕ್ಕಾಗಿ ಸರಿಯಾದ ಒಂದು ವ್ಯವಸ್ಥೆ ಮಾಡಬೇಕು. ಇದುವರೆಗೂ ಜನರಿಗೆ ಅಷ್ಟಾಗಿ ಈ ವಿಚಾರ ಗೊತ್ತಿಲ್ಲ. ಇಲಾಖಾ ಜನರು ಎಕರೆಯೊಂದಕ್ಕೆ ಜಪಾನ್ ಮಾದರಿ ಕಲ್ಟಿವೇಷನ್ನಿನಿಂದ 40-50 ಪಲ್ಲ ಬತ್ತವನ್ನು ಬೆಳೆಯಬಹುದೆಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ನಾನೂ ಸಹ ಒಬ್ಬ ರೈತನೇ; ಆದರೆ ತಮ್ಮ ಇಲಾಖಾ ಅಧಿಕಾರಿಗಳ ಹೇಳಿಕೆಯಂತೆ ಎಕರೆಯೊಂದಕ್ಕೆ 40-50 ಪಲ್ಲ ಬತ್ತವನ್ನು ಬೆಳೆಯುವುದಕ್ಕೆ ಇಲ್ಲಿಯವರೆಗೂ ನನಗಂತೂ ಸಾಧ್ಯವಾಗಿಲ್ಲ. ತಮ್ಮ ಇಲಾಖೆಯ ಜನರು-ಎಂದರೆ ತಾಲ್ಲೂಕ್ ಲೆವೆಲ್‌ನಲ್ಲಿ ಕೆಲಸ ಮಾಡುತ್ತಿರುವ ವ್ಯವಸಾಯದ ಇನ್ಸ್‌ಪೆಕ್ಟರುಗಳೂ—ಫೀಲ್ಡ್‌ಮೆನ್‌ಗಳೂ ಮತ್ತು ಅವರಮೇಲಿನ ಅಸಿಸ್ಟೆಂಟ್ ಡೈರೆಕ್ಟರುಗಳೂ ಜನರಿಗೆ ಸರಿಯಾದ ಮಾರ್ಗದಲ್ಲಿಸಾಕಷ್ಟು ಪ್ರಚಾರಮಾಡುತ್ತಿಲ್ಲ. ಮೊದಲು ಅವರಿಗೆ ಸರಿಯಾದ ಮಾರ್ಗದಲ್ಲಿ ಸಹಾಯಮಾಡಲು ಅವರಿಗೇ ವಿಚಾರಗಳು ಸರಿಯಾಗಿಗೊತ್ತಿಲ್ಲ. ಈ ಜಪಾನ್ ಮಾದರಿ ವ್ಯವಸಾಯದ ಬಗ್ಗೆ ಏನೇನು ರಿಸರ್ಚ್ ನಡೆದಿದೆ ಎಂಬುದು ಅವರಿಗೇ ಗೊತ್ತಿಲ್ಲ. ಅವರಿಗೆ ಗೊತ್ತಿದ್ದರೆ ಅಲ್ಲಲ್ಲೇ ಪ್ರಚಾರ ಕಾರ್ಯ ಕೈಕೊಂಡು ರೈತರಿಗೆ ಸರಿಯಾಗಿ ತಿಳಿವಳಿಕೆ ಕೊಡುವ ವ್ಯವಸ್ಥೆ ಮಾಡಬೇಕು. ಇಷ್ಟೇ ಬಿತ್ತನೆ ಮಾಡಬೇಕು; ಇಷ್ಟೇ ಗೊಬ್ಬರ ಹಾಕಬೇಕು ಎಂದು ರೈತರಿಗೆ ಗೊತ್ತಾಗುವಂತೆ ಮಾಡಬೇಕು. ತಾವೀಗ ಅನೇಕ ಕಡೆಗಳಲ್ಲಿ ಕೃಷ್ಣರಾಜಸಾಗರದ ಕೆಳಗೆ, ವಾಣೀವಿಲಾಸ ಸಾಗರದ ಕೆಳಗೆ, soil survey ನಡೆಸಿ ಭೂಗುಣ ತಿಳಿದಿದ್ದೀರಿ. ಇದರಮೇಲೆ, ಎಂಥ ಗೊಬ್ಬರವನ್ನು ಎಷ್ಟು ಪ್ರಮಾಣದಲ್ಲಿ ಹಾಕಬೇಕೆಂಬುದನ್ನು ನಿರ್ಧರಿಸಿ ರೈತರಿಗೆ ತಿಳಿಯುವಂತೆ ಮಾಡಬೇಕು ಇಲ್ಲದಿದ್ದರೆ, ವಿದ್ಯಾಭ್ಯಾಸ ಇಲ್ಲದ ಜನರಿಗೆ ಬೇಗ ನಿಮ್ಮ ಸುಧಾರಣೆಗಳು ಗೊತ್ತಾಗುವುದಿಲ್ಲ. ಅದಕ್ಕಾಗಿ ಹಸ್ತಪತ್ರಿಕೆಗಳನ್ನು ಹಂಚುವುದರ ಮೂಲಕ ಮತ್ತು ಇತರ ಪ್ರಚಾರ ಕಾರ್ಯಗಳ ಮುಖೇನ ಈ ವ್ಯವಸಾಯದ ವಿಷಯದಲ್ಲಿ ರೈತರಿಗೆ ಸೂಕ್ತ ಸಲಹೆಗಳನ್ನು ಕೊಡುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಸಲಹೆ ಏನೆಂದರೆ, ಈಗ ತಾವು ಪ್ರತಿಯೊಂದು ಸಾರಿಯೂ ಇಷ್ಟಿಷ್ಟು ಎಕರೆ ಜಮೀನಿನಲ್ಲಿ ಜಪಾನ್ ಪದ್ಧತಿ ಅನುಸರಿಸಲಾಗಿದೆ, ಇಷ್ಟು ಪಲ್ಲ ಬೆಳೆಯಲಾಯಿತು ಎಂದು ಒಂದು ಹೇಳಿಕೆಯನ್ನು ಕೊಡುವುದರಲ್ಲೇ ತೃಪ್ತರಾಗಿದ್ದೀರಿ. ಇಷ್ಟು ಮಾಡಿದರೆ ಸಾಲದು. ನೀವು ಎಲ್ಲೆಲ್ಲಿ ನಿಮ್ಮ ಇಲಾಖೆಯ ಮೂಲಕ ಜಪಾನ್ ಮಾದರಿ ಬೆಳವಣಿಗೆಗೆ ಏರ್ಪಾಡು ಮಾಡುತ್ತಿದ್ದೀರೋ ಅಲ್ಲೆಲ್ಲಾ, ಈ ಪದ್ಧತಿಯಲ್ಲಿ ತರಪೇತು ಹೊಂದಿರುವ ನಾಟಿಹಾಕುವ ಹೆಂಗಸರ ತಂಡವೊಂದನ್ನು ಏರ್ಪಾಡು ಮಾಡಿಡಬೇಕು. ಇದರಿಂದಾಗಿ ತಮಗೇನೂ ಖರ್ಚಾಗುವುದಿಲ್ಲ. ನಾಟಿ ಮಾಡಿಸಿಕೊಳ್ಳುವ ರೈತರು ತಮಗೆ ಖರ್ಚು ಕೊಟ್ಟು ಅವರನ್ನು ಕೆಲಸಕ್ಕೆ ಕರೆದುಕೊಳ್ಳುತ್ತಾರೆ. ಹಾಗಿಲ್ಲದೆ ಅನುಭವಸ್ಥರಲ್ಲದ ಹೆಂಗಸರನ್ನು ಕಟ್ಟಿಕೊಂಡು ನಾಟಿ ಹಾಕಿಸುವುದರಿಂದ ನಿರೀಕ್ಷಿಸಿದ ಪ್ರಯೋಜನ ಲಭಿಸುವುದಿಲ್ಲ. ಆದ್ದರಿಂದ ಎಲ್ಲ ಕಡೆಯಲ್ಲೂ ಕಡ್ಡಾಯವಾಗಿ ನಾಟಿಹಾಕುವ ಹೆಂಗಸರ ತಂಡವೊಂದನ್ನು ಸಂಬಳ ಕೊಟ್ಟು ಇಟ್ಟಿದ್ದರೆ, ರೈತರಿಗೆ ಬಹಳ ಅನುಕೂಲವಾಗುತ್ತದೆ. ನೀವು ಕೊಡುವ ಸಂಬಳ ರೈತರಿಂದ ಸಲೀಸಾಗಿ ವಸೂಲಾಗುತ್ತದೆ. ಇದನ್ನು ಮಾಡುವುದಾದರೆ ನೀವು ಹೇಳುವ ಜಪಾನ್ ಮಾದರಿ ವ್ಯವಸಾಯಕ್ರಮ ಯಶಸ್ವಿಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಖಂಡಿತವಾಗಿ ಅದು ಫಲಪ್ರದವಾಗುತ್ತದೆ. ಮತ್ತು ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೂ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಅಮೇಲೆ, ನಾನು ಪತ್ರಿಕೆಯನ್ನು ನೋಡಿದೆ; ಕೇಂದ್ರ ಸರ್ಕಾರದವರು ಗೊಬ್ಬರದ ಸರಬರಾಯಿಯ ಬಗ್ಗೆ ನಮ್ಮ ಸರ್ಕಾರಕ್ಕೆ ಗ್ರ್ಯಾಂಟ್‌ಕೊಟ್ಟಿದ್ದಾರೆ, ಎಂದು. ಆದರೆ, ನಾನು ಇಲಾಖೆಯವರನ್ನು ವಿಚಾರಿಸಿದ್ದರಲ್ಲಿ 'ಗೊಬ್ಬರವಿನ್ನೂ ಸರಬರಾಯಿಯಾಗಿಲ್ಲ, ನಾವೇನು ಮಾಡೋಣ' ಎಂದು ಫೀಲ್ಡ್ ಇನ್ಸ್‌ಪೆಕ್ಟರುಗಳು ಹೇಳುತ್ತಿದ್ದಾರೆ. ಹೀಗೆ ಸರಿಯಾದ ಕಾಲದಲ್ಲಿ ವ್ಯವಸಾಯದ ಕಾಲಕ್ಕೆ ಮುಂಚೆ ಗೊಬ್ಬರ ಬರದೆ ಹೋದರೆ ಪ್ರಯೋಜನವೇನು ? ಈ ವಿಚಾರದಲ್ಲಿ ತಕ್ಕ ವ್ಯವಸ್ಥೆ ಮಾಡಿ ತಮ್ಮ ಕಾಲದಲ್ಲಾದರೂ ರೈತರು ಹೆಚ್ಚಿಗೆ ಬೆಳೆದು ಹೆಚ್ಚಿಗೆ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ರೈತರ ಕಷ್ಟವೇನೆಂದರೆ, ನಮ್ಮ ರೈತರು ಬಹಳ ಬಡತನದಲ್ಲಿದ್ದಾರೆ, ಅವರಿಗೆ ವ್ಯವಸಾಯಕ್ಕೆ ಬೇಕಾದ ಮುಟ್ಟುಗಳನ್ನು ಎತ್ತುಗಳನ್ನು, ಕೊಂಡುಕೊಳ್ಳುವುದಕ್ಕೆ ತಕಾವಿಸಾಲಗಳನ್ನು ಸುಲಭವಾಗಿ ಕೊಡುವುದ ಮೂಲಕ ಸಹಾಯ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ಚಾಮಯ್ಯ)

ಹಳ್ಳಿಗಾಡಿನಲ್ಲಿ ಕಂಪೋಸ್ಟ್ ಗೊಬ್ಬರವನ್ನು ತಯಾರುಮಾಡುವುದಕ್ಕೆ ತಾವು ಏರ್ಪಾಡು ಮಾಡಬೇಕು ಅಲ್ಲೀಗ nightsoil ಎಲ್ಲಾ waste ಆಗುತ್ತಿದೆ. ಅಲ್ಲದೆ ಹಳ್ಳಿಗಳ ಆರೋಗ್ಯ ಕೂಡ ಹಾಳಾಗುತ್ತಿದೆ. ಇದಕ್ಕೇನಾದರೂ ವ್ಯವಸ್ಥೆಮಾಡಿ ಹಳ್ಳಿಯ ಜನರು ಖರೀದಿಯ ಮೂಲಕ ಕೊಂಡುಕೊಳ್ಳುವ ಏರ್ಪಾಡು ಮಾಡಿದರೆ, ರೈತರಿಗೆ ವ್ಯವಸಾಯಕ್ಕೆ ಬಂದಿರುವ ಗೊಬ್ಬರದ ಅಭಾವವನ್ನು ಹೋಗಲಾಡಿಸಿದಂತಾಗುತ್ತದೆ. ರೈತರಿಗೀಗ ಗೊಬ್ಬರ ಸಿಕ್ಕುವುದೇ ಕಷ್ಟವಾಗಿದೆ. ಅದರಲ್ಲೂ ನಮ್ಮ ಪ್ರಾಂತ್ಯದಲ್ಲಿ ಗೊಬ್ಬರವಿಲ್ಲದೆ ಮೈಸೂರಿನಿಂದ ತರಿಸುತ್ತಿದ್ದರು. ಈಗ ಅಲ್ಲಿಯೂ ಇದಕ್ಕೆ ವಿಪರೀತಧಾರಣೆ. ರೈತರು ಅದನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ ತಾಲ್ಲೂಕಿನಲ್ಲೂ ಮತ್ತು ಹಳ್ಳಿಗಳಲ್ಲೂ ಕಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಏರ್ಪಾಡು ಮಾಡಿದರೆ, ರೈತರು ಕೊಂಡು ಕೊಂಡು ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಮಾಡುತ್ತೀರೆಂದು ನಂಬಿದ್ದೇನೆ.

ಆಮೇಲೆ, ಜಪಾನೀ ಪದ್ಧತಿ ನಮ್ಮ ದೇಶದಲ್ಲಿ ಹೆಚ್ಚಿಗೆ ಅಭಿವೃದ್ಧಿಗೆ ಬರುವಂತೆ ಮಾಡಬೇಕಾದರೆ, ಹೋಬಳಿಗಳಲ್ಲಿ demonstration ಫಾರಮ್ಮುಗಳನ್ನು ಏರ್ಪಡಿಸುವ ಯೋಚನೆ ಮಾಡಬೇಕು. ಇದರಿಂದಾಗಿ ತಮಗೆ ಹೆಚ್ಚೇನೂ ಖರ್ಚಾಗುವುದಿಲ್ಲ. ಆದರೆ ರೈತರು ನಿಮ್ಮ ಪ್ರದರ್ಶನವನ್ನು ನೋಡಿಕೊಂಡು ಹೆಚ್ಚಿಗೆ ಬೆಳೆ ಬೆಳೆಯಲು ಅವಕಾಶವಾಗುತ್ತದೆ. ಇದನ್ನು ಕಡ್ಡಾಯವಾಗಿ ತಾವು ಮಾಡಲೇಬೇಕೆಂದು ನನ್ನ ಆಶಯ. ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿಲ್ಲದಿದ್ದರೆ ತಾಲ್ಲೂಕ್ ಹೆಡ್‌ಕ್ವಾರ್ಟರುಗಳಲ್ಲಾದರೂ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿಕೊಡುವುದು ಅವಶ್ಯಕ. ಈಗ ಮಂಡ್ಯದ ಫಾರಂನಲ್ಲಿ ಮತ್ತು ನಾಗನಹಳ್ಳಿ ಫಾರಂನಲ್ಲಿ ರೀಸರ್ಚ್ ಮಾಡುವ ಏರ್ಪಾಡು ಮಾಡಿದ್ದೀರಿ. ಇದರಿಂದಾಗಿ ಬಹಳ ಪ್ರಯೋಜನವಿದೆ. ಈ ಸಂದರ್ಭದಲ್ಲಿ ಒಂದು ವಿಚಾರ ನಾನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹಿಂದಿನಿಂದ ಕೊಯಮತ್ತೂರು ಸಣ್ಣ ಎಂಬ ಬತ್ತ ಜಾರಿಗೆ ಬಂದಿದೆ. ಈಚೀಚೆಗೆ ಆ ಭತ್ತ ಹಿಂದಕ್ಕೆ ಹೋಗುತ್ತಿದೆ. ಹೆಚ್ಚಿಗೆ ಬೆಳೆ ಬರುತ್ತಿಲ್ಲ. ಆದ್ದರಿಂದ ಪ್ಯಾಡಿಬ್ರೀಡಿಂಗ್ ಸ್ಟೇಷನವರು ಇದಕ್ಕೆ ಬದಲಾಗಿ ಬೇರೆ ಯಾವುದಾದರೂ ಜಾತಿಯ ಬತ್ತವನ್ನು ಕಂಡು ಹಿಡಿಯಬೇಕೆಂದು ಹೇಳುತ್ತೇನೆ. ಕೊಯಮತ್ತೂರು ಸಣ್ಣದಷ್ಟು ಉತ್ತಮವಾದ ಬೇರೆ ಜಾತಿಯ ಬತ್ತವನ್ನು ಮುತುವರ್ಜಿವಹಿಸಿ ಕಂಡು ಹಿಡಿಯುವುದು ಈಗ ಬಹಳ ಅವಶ್ಯಕವೆಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ನಮ್ಮ ಸಂಸ್ಥಾನದಲ್ಲಿ ಅನೇಕ ಫಾರಮ್ಮುಗಳನ್ನು ಏರ್ಪಾಡು ಮಾಡುವುದು ಅವಶ್ಯಕ. ಮಂಡ್ಯ ಫಾರಮ್ಮಿನಿಂದಾಗಿ ಅಲ್ಲಿನ ರೈತರಿಗೆ ಬಹಳ ಮಟ್ಟಿಗೆ ಅನುಕೂಲವುಂಟಾಗಿದೆ. ಬತ್ತ ಬೆಳೆಯುವುದಕ್ಕೇ ಅಲ್ಲ ಕಬ್ಬಿನ ಬೆಳೆಗೂ ಅನುಕೂಲವುಂಟಾಗಿದೆ. ಇದೇ ರೀತಿಯ ಅನುಕೂಲವನ್ನು ಇನ್ನೂ ಅನೇಕ ಕಡೆಗಳಲ್ಲಿ ಏರ್ಪಡಿಸಬೇಕೆಂದು ನಾನು ಹೇಳುತ್ತೇನೆ.

ಆ ಮೇಲೆ ಬಿತ್ತನೆಯ ಸಂಬಂಧದಲ್ಲಿ, ಉತ್ತಮ ಜಾತಿಯ ಬಿತ್ತನೆಗಳನ್ನು ಸರಬರಾಯಿ ಮಾಡಬೇಕಲ್ಲದೆ ಅದು ಸಕಾಲದಲ್ಲಿ ಬರುವಂತೆ ಮಾಡಬೇಕು. ವ್ಯವಸಾಯದ ಕಾಲಕ್ಕೆ ಸರಿಯಾಗಿ ಒಳ್ಳೆಯ ಬಿತ್ತನೆಗಳು ಸಿಕ್ಕದೆ ರೈತರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಮ್ಮ ಇಲಾಖೆಯ ಇನ್‌ಸ್ಪೆಕ್ಟರುಗಳ ಮೂಲಕ ಸಕಾಲದಲ್ಲಿ ಬಿತ್ತನೆಗಳನ್ನೊದಗಿಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಗುಳಗಳ ವಿಚಾರ. ಹಿಂದೆ ಆರಾಣೆ ಇದ್ದುದು ಈಗ ಒಂದು ರೂಪಾಯಿಯಾಗಿದೆ. ಹೀಗಾದರೆ ರೈತರಿಗೆ ಎಷ್ಟು ಕಷ್ಟ! ರೈತರು ಉಪಯೋಗಿಸುವ ಮುಟ್ಟುಗಳಿಗೆ ಖರೀದಿಯನ್ನು ಕಡಮೆ ಮಾಡಿದ ಹೊರತು ಗತ್ಯಂತರವಿಲ್ಲ. ಆದ್ದರಿಂದ ಇದನ್ನು ಕಡಮೆ ಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಾಲೇಜುಗಳ ವ್ಯವಸ್ಥೆಯ ವಿಷಯ ಹೆಬ್ಬಾಳ್ ಫಾರಮ್ಮಿನಲ್ಲಿ ಈಗೊಂದು ಅಗ್ರಿಕಲ್ಚರಲ್ ಕಾಲೇಜಿದೆ. ಅಲ್ಲಿ ಸರಿಯಾದ ಲ್ಯಾಬೊರೇಟರಿ ವ್ಯವಸ್ಥೆ ಮಾಡಿ ಅಲ್ಲಿರತಕ್ಕ ಹುಡುಗರಿಗೆ ಒಳ್ಳೆಯ ತರಪೇತುಕೊಡುವ ಏರ್ಪಾಡುಮಾಡಬೇಕಾದ್ದು ಅವಶ್ಯಕ. ಇದರಿಂದ ನಮ್ಮ ದೇಶದ ವ್ಯವಸಾಯಕ್ಕೆ ಹೆಚ್ಚಿನ ಸಹಾಯವಾಗುತ್ತದೆಂಬುದರಲ್ಲಿ ಅನುಮಾನವಿಲ್ಲ. ಇದೇ ರೀತಿಯಲ್ಲಿ ಮಂಡ್ಯದಲ್ಲೂ ಒಂದು ಕಾಲೇಜನ್ನು ಏರ್ಪಾಡು ಮಾಡುವ ಯೋಚನೆ ಮಾಡಿದ್ದರು. ಯಾವುದೋ ಕಾರಣದಿಂದ ಹೋಯಿತು. ಈಗ ಮತ್ತೆ ಈ ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಂಡು ವ್ಯವಸಾಯಕ್ಕೆ ಬಹಳ ಪ್ರೋತ್ಸಾಹವಿರುವ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವ್ಯವಸಾಯಗಾರರಿರುವ ಮಂಡ್ಯದಲ್ಲಿ ವ್ಯವಸಾಯದ ಕಾಲೇಜೊಂದನ್ನು ಏರ್ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವ್ಯವಸಾಯದ ಇಲಾಖೆಗೆ ಬರಬೇಕಾದ ಬಾಕಿಗಳು ಬೇಕಾದಷ್ಟಿವೆಯೆಂದು ನಾನು ಕೇಳಿದ್ದೇನೆ. ಸುಮಾರು 70–80 ಲಕ್ಷ ರೂಪಾಯಿಗಳವರೆಗೂ ಬಾಕಿಗಳಿವೆಯೆಂದು ಗೊತ್ತಾಗಿದೆ. ಮಲ್ಟಿಪರ್ಪಸ್ ಸೊಸೈಟಿಯಿಂದಲೇ ಸುಮಾರು 16 ಲಕ್ಷ ರೂಪಾಯಿಗಳು ಬರಬೇಕಾಗಿವೆ. ಇಷ್ಟೊಂದು ಹಣವನ್ನು ಬಿಟ್ಟು ಬಿಟ್ಟು ಡಿಫಿಸಿಟ್ ಬಡ್ಜೆಟ್ ತಯಾರು ಮಾಡಿಕೊಂಡು ಬೇರೆಯವರನ್ನು ದುಡ್ಡಿಗಾಗಿ ಹಿಂಸೆ ಮಾಡುವುದು ಏಕೆ? ಯಾವ ದಾಕ್ಷಿಣ್ಯಕ್ಕಾಗಿ ಇಷ್ಟೊಂದು ಭಾರಿ ಮೊತ್ತವನ್ನು ವಸೂಲು ಮಾಡದೆ ಬಿಡುವುದು? ಸರ್ಕಾರದ ದುಡ್ಡನ್ನು, ಸಾರ್ವಜನಿಕರ ದುಡ್ಡನ್ನು ಯಾವುದೋ ಕಾರಣದ ಮೇಲೆ ಯಾವುದೋ ಒಂದು ಸಂಸ್ಥೆಯ ಅಥವಾ ವ್ಯಕ್ತಿಯ ಪರವಾಗಿ ಬಿಟ್ಟುಬಿಡುವುದು ಸರಿಯಾದ ನೀತಿಯಲ್ಲ. ಆದ್ದರಿಂದ ಆದಷ್ಟು ಬೇಗನೆ ಈ ಹಣವನ್ನು ವಸೂಲು ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಂಡು ಜನರಿಗೆ ಅದರಿಂದ ಪ್ರಯೋಜನವುಂಟಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಅನಿಮಲ್ ಹಸ್ಬೆಂಡರಿ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ತಾವು ಹಳ್ಳಿಕಾರ ಮತ್ತು ಅಮೃತ ಮಹಲ್ ತಳಿಗಳನ್ನು ಎಲ್ಲ ಕಡೆಗೂ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಹಳ್ಳಿಕಾರ ದನಗಳು ಬಹಳ ಒಳ್ಳೆಯವು. ಯಾರಿಂದಲೋ ಕೊಂಡುಕೊಂಡು ಒಂದು ರೂಪಾಯಿಗೆ ನಾಲ್ಕು ರೂಪಾಯಿ ಕೊಟ್ಟು ನಮಗೆ ಒದಗಿಸುವುದು ಸರಿಯಾದ ತಳಿ ಅಲ್ಲ. ವೆಟರ್ನರಿ ಇನ್ಸ್ಪೆಕ್ಟರು, ವೆಟರ್ನರಿ ಡಾಕ್ಟರು ಬಹಳ ಸೊಗಸಾಗಿದೆ ಎಂದು ಹೇಳಿದರೆ ಸಾಕು. ಅದನ್ನು ರೈತರಿಗೆ ಒದಗಿಸುತ್ತೀರಿ. ತಮ್ಮ ಹೆಸರುಘಟ್ಟದ ಫಾರಂನಲ್ಲೋ, ಅಜ್ಜಂಪರದ ಫಾರಂನಲ್ಲೋ ಸರಿಯಾದ ವ್ಯವಸ್ಥೆ ಮಾಡಿ ಹಳ್ಳಿಕಾರ ತಳಿಯನ್ನು ನಮ್ಮ ಜನಗಳಿಗೆ ಕೊಡುವ ಹಾಗೆ ಏರ್ಪಾಡು ಮಾಡಬೇಕು. ಇದರಿಂದ ದನಗಳ ಅಭಿವೃಧಿಯಾಗುವುದಲ್ಲದೆ ಹಾಲು ಕರೆಯುವುದೂ ಕೂಡ ಹೆಚ್ಚಾಗುತ್ತ

ಆ ರೀತಿ ಮಾಡಿ ಜನಗಳಿಗೆ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಎಲ್ಲಾ ಕಡೆಯೂ ಮಾಡಬೇಕು. ಒಳ್ಳೆಯ ತಳಿ ಸಿಕ್ಕದೇ ಇರುವುದರಿಂದ ಹಳ್ಳಿಗಳಲ್ಲಿ ತಳಿ ಕೆಟ್ಟುಹೋಗುತ್ತಾ ಇದೆ. ಅದನ್ನು ಎಲ್ಲಾ ಕಡೆಯೂ ಒದಗಿಸುವ ಹಾಗೆ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ವ್ಯವಸಾಯ, ರೂರಲ್ ಡೆವಲಪ್‌ಮೆಂಟ್ ಮತ್ತು ವೆಟರ್ನರಿ ಈ ಮೂರು ಇಲಾಖೆಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬೇಡಿಕೆಯನ್ನು ಸ್ವಾಗತಿಸುತ್ತ ಈ ದೇಶದ ಹೆಚ್ಚಿನ ಜನಗಳ ಅವಶ್ಯಕತೆಗೆ ಬೇಕಾಗಿರತಕ್ಕ ಮೊಬಲಗು ಸಾಲದು ಎಂದು ಮೊದಲನೆಯದಾಗಿ ಹೇಳಬೇಕಾಗಿದೆ. ಇವೊತ್ತಿನ ದಿವಸ ಈ ಇಲಾಖೆಯ ಜವಾಬ್ದಾರಿಯನ್ನು ಒಬ್ಬ ರೈತರಮಗ ಮಂತ್ರಿಯಾಗಿ ಹೊಂದಿರತಕ್ಕದ್ದು ಬಹಳ ಸಂತೋಷಕರವಾದ ಸಂಗತಿ. ಈ ದೇಶದ 70 ಭಾಗದ ಜನಗಳ ಆಗುಹೋಗುಗಳು ಇವೊತ್ತು ಈ ವ್ಯವಸಾಯದ ಇಲಾಖೆಯ ಒಂದು ಜವಾಬ್ದಾರಿಯ ಮೇಲೆ ನಿಂತಿದೆ. ದುರಾದೃಷ್ಟವಶಾತ್ ಇಷ್ಟು ವರ್ಷಗಳ ಕಾಲ ಈ ವ್ಯವಸಾಯದ ಇಲಾಖೆ ಕೆಲಸ ಮಾಡುತ್ತ ಇದ್ದರೂ ಸಹ ದೇಶದಲ್ಲಿ ರೈತಾಪಿ ಜನರಿಗೆ ಈ ಇಲಾಖೆಯ ಹೆಚ್ಚಿನ ಸಂಪರ್ಕವಿಲ್ಲದೇ ಇರುವುದು ಬಹಳ ಶೋಚನೀಯವಾಗಿದೆ. ಇದರ ಮೂಲಕಾರಣವೇನೆಂಬುದನ್ನು ಸಹ ಸರ್ಕಾರದವರು ಬಹುಮಟ್ಟಿಗೆ ವಿಮರ್ಶೆ ಮಾಡಬೇಕು. ಇವತ್ತಿನ ದಿವಸ ಪರದೇಶಗಳಲ್ಲಿ ಎಂದರೆ ಅಮೆರಿಕಾ ಮತ್ತು ಇತರ ದೇಶಗಳಲ್ಲಿ ವ್ಯವಸಾಯಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ವ್ಯವಸಾಯಾಭಿವೃದ್ಧಿಗೆ ಯಾವ ಒಂದು ಅಂತಸ್ತನ್ನು ಇಡಬೇಕೋ, ಏನೊಂದು ಪ್ರಾಮುಖ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತಾಇದ್ದಾರೆ. ಇಂಡಿಯ ದೇಶದಲ್ಲಿ ಈ ವ್ಯವಸಾಯಗಾರ ಎನ್ನತಕ್ಕವನ ಒಂದು ಕೂಗು ಈ ದೇಶದಲ್ಲಿ ಯಾವತ್ತು ಆಹಾರದ ಅಭಾವ ಬಂತೋ ಅವತ್ತಿನಿಂದ ಸೃಷ್ಟಿಯಾಗಿದೆ. ಬಹಳ ದಿವಸದಿಂದ ಈ ವ್ಯವಸಾಯದ ಜವಾಬ್ದಾರಿಯನ್ನು ಹೊತ್ತುಕೊಂಡು ಯಾರ ಕಣ್ಣಿಗೂ ಬೀಳದೇ ಇದ್ದ ರೈತ ಆಕರ್ಷಿತನಾಗಿ, ಆಹಾರಾಭಾವ ಬಂದು, ಅದನ್ನು ಸುಧಾರಿಸಬೇಕೆಂದು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರಗಳು ಕಣ್ಣುಬಿಟ್ಟು ಆ ಇಲಾಖೆ ಮತ್ತು ಕಸುಬಿನ ಜನಗಳ ಮೇಲ್ಮೆಗೆ ಕೆಲಸ ಮಾಡುತ್ತಾ ಇದ್ದಾರೆ. ಇವೊತ್ತಿನ ದಿವಸ ಈ ಇಲಾಖೆ ಮಾಡಬೇಕಾದ ಕೆಲಸ ಇನ್ನೂ ಹೆಚ್ಚಾಗಿದೆ. ಮೂಲ ತತ್ವ ಏನಿದೆ ಆ ತತ್ವ ದೃಷ್ಟಿಯಲ್ಲಿ ವ್ಯವಸಾಯದ ಇಲಾಖೆ ಮತ್ತು ವ್ಯವಸಾಯಗಾರರ ಪರಿಸ್ಥಿತಿ ಏನೆಂಬುದು ಒಂದು ಜಿಜ್ಞಾಸೆಯ ವಿಷಯವಾಗಿದೆ. ಇವೊತ್ತಿನ ದಿವಸ ಈ ಕೆಲಸದ ಮೇಲೆ ನಿರತರಾಗಿರತಕ್ಕ ವ್ಯವಸಾಯಗಾರರಿಗೆ ಪೂರ್ಣವಾಗಿ ಈ ಕೆಲಸವನ್ನು ಆಶ್ರಯಿಸುವುದೇ ಬಿಡುವುದೇ ಎಂಬ ವಿಷಯವೂ ಸಹ, ಈಗ ಇರತಕ್ಕ ಭೂಸುಧಾರಣೆ ವಗೈರೆ ತತ್ವಗಳಿಂದ, ಮನಸ್ಸಿನಲ್ಲಿ ಬಹಳ ಜಿಗುಪ್ಸೆಯಾಗುತ್ತಾ ಇದೆ. ಎಷ್ಟೋ ಜನ, ರೈತಾಪಿ ಜನರು ಬೇರೆ ಕಾರ್ಯಗಳನ್ನು ಯಾವ ರೀತಿ ಆಕರ್ಷಣೀಯವಾಗಿ ಮಾಡಿ ರೆಗ್ಯುಲೇಟೆಡ್ ಆಗಿ ಮಾಡುತ್ತಾ ಇದ್ದಾರೆಯೋ ಆ ರೀತಿ ಮಾಡಿ ಕೆಲಸಮಾಡುವುದಕ್ಕೆ ಈಗಿರತಕ್ಕ ಭೂಸುಧಾರಣೆಯ ಒಂದು ಕಷ್ಟದಿಂದ ಹಿಂದು ಮುಂದು ನೋಡುತ್ತಾ ಇದ್ದಾರೆ. ಸೀಲಿಂಗ್ ಲಿಮಿಟ್ ವಗೈರೆ ತತ್ವಗಳಿಂದ, ಮನುಷ್ಯನಿಗೆ ಸ್ವಾಭಾವಿಕವಾಗಿ ಏಕೆ ಇಷ್ಟು ಪ್ರಯತ್ನ ಮಾಡಿ ಸಹಸ್ರಾರು ರೂಪಾಯಿ ಇದರ ಮೇಲೆ ಖರ್ಚು ಮಾಡಿ ಕಷ್ಟಪಡಬೇಕು, ಇದರಿಂದ ಮುಂದೆ ಏನಾಗುತ್ತದೆಯೋ ಏನೋ ಎಂಬ ಜಿಜ್ಞಾಸೆ ಬರುತ್ತದೆ. ಇವೊತ್ತಿನ ದಿವಸ, ಚೈನಾ, ರಷ್ಯಾ ದೇಶಗಳಲ್ಲಿ ನೋಡಿದರೆ ಅಲ್ಲೂ ಸಹ ಅವರು ವ್ಯವಸಾಯಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಅಲ್ಲಿ ಸಣ್ಣ ಸಣ್ಣ ವ್ಯವಸಾಯದ ಹಿಡುವಳಿ ಪದ್ಧತಿ ಮಾಡಬೇಕೆಂದು ಏನಿದೆ ಅದನ್ನು ಅವರು ಒಪ್ಪುವುದಿಲ್ಲ. ದೊಡ್ಡ ದೊಡ್ಡ ಪ್ಲಾಟ್‌ಗಳನ್ನಿಟ್ಟುಕೊಂಡು ಟ್ರಾಕ್ಟರು ಮತ್ತು ಯಂತ್ರೋಪಕರಣಗಳ ಸಹಾಯದಿಂದ ವ್ಯವಸಾಯದ ಕೆಲಸವನ್ನು ಮಾಡುತ್ತಾರೆ. ನಮ್ಮಲ್ಲಿ ವರ್ಷೇ ವರ್ಷೇ ಫ್ರಾಗ್ಮೆಂಟೇಷನ್‌ದಿಂದ ವ್ಯವಸಾಯದ ಸ್ಥಿತಿ ಕಷ್ಟಕ್ಕೆ ಬರುತ್ತಾಇದೆ. ಆ ಕೆಲಸ ಎಷ್ಟು ಸುಖವಾಗಿ ಎಷ್ಟು ಲಾಭದಾಯಕವಾಗಿ ನಡೆಯಬೇಕೋ, ಅಷ್ಟು ಲಾಭ ದಾಯಕವಾಗಿ ನಡೆಯುತ್ತಿಲ್ಲ. ಮತ್ತು ಈ ಒಂದು ಕಸುಬಿಗೆ ಕೇಂದ್ರ ಸರ್ಕಾರದವರು ಸಹ ಲಕ್ಷಾಂತರ ರೂಪಾಯಿಗಳ ಸಬ್‌ಸಿಡಿ, ಗ್ರಾಂಟು ವಗೈರೆ ಕೊಡುತ್ತಾ ಇದ್ದಾರೆ. ಈ ಕೆಲಸ ಬಹಳ ಮುಖ್ಯವಾದದ್ದು ಎಂದು ತಿಳಿದುಕೊಂಡಿದ್ದಾರೆ. ಇದು ದೇಶದ ಎಲ್ಲ ಜನರ ಜೀವನವನ್ನು ನಡೆಸುವ ಒಂದು ಕಸುಬಾಗಿದೆ. ಅವರು ಸಾಕಾದಷ್ಟು ಸಹಾಯ ಒದಗಿಸುವ ಪ್ರಯತ್ನ ಮಾಡುತ್ತಾ ಇದ್ದರೂ ಸಹ ಮತ್ತೊಂದು ಕಡೆ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಈ ರೀತಿ ಒಂದು ಕಷ್ಟ ಬಂದಿದೆ. ಪ್ಲಾನಿಂಗ್ ಕಮಿಷನ್ ನವರೂ ಸಹ ಇದಕ್ಕೆ ಸಾಕಾದಷ್ಟು ಗಮನ ಕೊಟ್ಟಿಲ್ಲ ಎಂಬ ಅನುಮಾನ ನನಗೆ ಬರುತ್ತಾ ಇದೆ. ಇವತ್ತಿನ ದಿವಸ ಈ ಇಲಾಖೆಯವರು ಹತ್ತಾರು ಹೆಡ್‌ಗಳಲ್ಲಿ ಮೊಬಲಗನ್ನು ಖರ್ಚುಮಾಡುತ್ತಾ ಇದ್ದಾರೆ. Soil conservation, ಉತ್ತಮವಾದ ಬೀಜ, ಉತ್ತಮವಾದ ಗೊಬ್ಬರ ವಗೈರೆ ಕೊಡುತ್ತಾ ಇದ್ದಾರೆ. ಇವೊತ್ತಿನ ದಿವಸ ಎಕ್ಸ್‌ಪೆರಿಮೆಂಟಲ್ ಫಾರಂಸ್ ಎಂದು ಹೇಳಿ ನಮ್ಮಲ್ಲಿ ಹತ್ತಾರು ಫಾರಂಗಳಿವೆ. ಬಹು ಮುಖ್ಯವಾಗಿ ನಮ್ಮ ವ್ಯವಸಾಯದ ಇಲಾಖೆಯಲ್ಲಿ ಪ್ರಗತಿಯಾಗಬೇಕು. ಅದು ಒಳ್ಳೆಯ ರೀತಿಯಲ್ಲಿ ನಡೆಯಬೇಕು. ಎಕ್ಸ್‌ಪೆರಿಮೆಂಟಲ್ ಫಾರಂಸ್ ಮತ್ತು ಕಮರ್ಷಿಯಲ್ ಫಾರಂಸು ಇವೆರಡೂ ಕೆಲಸ ಮಾಡಿದರೆ ಉತ್ತಮವಾಗುತ್ತದೆ. ಇವೊತ್ತಿನ ದಿವಸ ಇಷ್ಟು ಬಿತ್ತನೆ ಬತ್ತ ವಗೈರೆ ಕೊಡುತ್ತಾ ಇದ್ದರೂ ಕೂಡ ರೈತರಿಂದ ಕೂಗು ಮಾತ್ರ ಬರುತ್ತಾ ಇದೆ. ಅಲ್ಲಲ್ಲಿ ಬೇಸಿಗೆ ಬತ್ತ ಹಾಕಿದ್ದೀರಿ, ಮಳೆಗಾಲದ ಬತ್ತ ಹಾಕಿರುವ ಕಡೆ ಆ ಬಿತ್ತನೆಯಿಂದ ಒಳ್ಳೆಯ ಫಸಲು ಬರಬೇಕು. ಇವೊತ್ತಿನ ದಿನ ಆ ರೀತಿ ಬಾರದೆ ಇರತಕ್ಕ ಪರಿಸ್ಥಿತಿ ಇದೆ. ಅದಕ್ಕೇ ಎಕ್ಸ್‌ಪೆರಿಮೆಂಟಲ್ ಫಾರಂನಲ್ಲಿ ಇಲಾಖೆಯವರು ಮತ್ತು ರೈತಾಪಿ ಜನರೂ ಒಂದಾಗಿ ಬಿತ್ತನೆ ಮಾಡಿ, ಅದನ್ನು ರೈತರಿಗೆ ಒದಗಿಸುವುದು ಒಳ್ಳೆಯದು. ಹಾಗಲ್ಲದೆ, ಬಜಾರಿನಲ್ಲಿ ಕೊಂಡ ಬಿತ್ತನೆಯನ್ನು ರೈತನಿಗೆ ಕೊಟ್ಟು ಸರಿಯಾಗಿ ಬೆಳೆಯಾಗದಿದ್ದರೆ ಅದರಿಂದ ದೇಶಕ್ಕೂ ನಷ್ಟ, ಮತ್ತು ಇಲಾಖೆಗೂ ಕೆಟ್ಟ ಹೆಸರು. ಆಗಾಗ್ಯೆ ಸಂಭವಿಸತಕ್ಕ ಕಷ್ಟ ಪರಿಸ್ಥಿತಿ ಏನಿದೆ ಅದನ್ನು ಸುಧಾರಿಸಬೇಕು. ಮತ್ತು ಎಂತಹ ಉತ್ತಮವಾದ ಬಿತ್ತನೆ ಬೇಕೋ ಅದನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಹಿಂದೆ ಡಾ॥ ಕೋಲ್‌ಮನ್‌ರವರು ಡೈರೆಕ್ಟರಾಗಿದ್ದಾಗ ಅವರ ಕಾಲದಲ್ಲಿ ಹಾಕಿದ ಉತ್ತಮವಾದ ರಾಗಿ ಬಿತ್ತನೆಯೇ ಇವೊತ್ತಿನ ವರೆಗೂ ಇದೆ. ಬೇರೆ ಯಾವುದನ್ನೂ ಹೊಸದಾಗಿ ಕಂಡುಹಿಡಿದಿಲ್ಲ. ನಮ್ಮಲ್ಲಿ ತಜ್ಞರು

(ಶ್ರೀ ಕೆ. ವಿ. ಬೈರೆಗೌಡ)

ಇಲ್ಲವೇ ? ಎಕ್ಸ್‌ಪರಿಮೆಂಟಲ್ ಫಾರಂನಲ್ಲಿ ಕೆಲಸ ಮಾಡುತ್ತಿಲ್ಲವೇ ? ಇದಕ್ಕೆ ಹಣ ಕೊಡುತ್ತಿಲ್ಲವೇ ? ಇದು ಬಹಳ ವಿಷಾದದ ಸಂಗತಿ. ಇವೊತ್ತಿನ ದಿವಸ ನಾವು ಹೆಚ್ಚಾಗಿ, ರಾಗಿ, ಬತ್ತ ಬೆಳೆಯಬೇಕಾಗಿದೆ. ಆಹಾರದ ಬೆಳೆ ಆಗಿರತಕ್ಕ ರಾಗಿ, ಬತ್ತದಲ್ಲಿ new strains ಅಗತ್ಯವಾಗಿ ಬೇಕಾಗಿದೆ. ಇದನ್ನು ಕಂಡು ಹಿಡಿಯುವುದಕ್ಕೆ ಇಲಾಖೆ ಸತತವಾಗಿ ದುಡಿಯಬೇಕಾದ್ದು ಬಹಳ ಮುಖ್ಯ. ಅದರಲ್ಲೂ ಇಲಾಖೆಯ ಮುಖ್ಯ ಅಧಿಕಾರಿಗಳು ರೈತನಿಗೆ ಅನುಕೂಲವಾಗಲು ಯಾವ ರೀತಿ ಕೆಲಸ ಮಾಡಬೇಕು, ವ್ಯವಸಾಯದ ಇಲಾಖೆ ಹೇಗೆ ಕೆಲಸ ಮಾಡಿದರೆ ವ್ಯವಸಾಯಾಭಿವೃದ್ಧಿಯಾಗುತ್ತದೆ ಎಂಬುದನ್ನು ಗಮನಿಸಿ ಕೆಲಸ ಮಾಡಬೇಕು. ಇವೊತ್ತಿನ ದಿವಸ ರೈತಾಪಿ ಜನರ ಕೆಲಸವೆಲ್ಲಾ ಹೆಚ್ಚಾಗಿ ಇಲಾಖೆಯ ಮುಖಾಂತರವೇ ನಡೆಯಬೇಕಾಗಿದೆ. ಇವೊತ್ತು ರೈತಾಪಿ ಜನರಿಗೆ, ರೆವಿನ್ಯೂ ಇಲಾಖೆ ವಗೈರೆ ಇಲಾಖೆಗಳೊಂದಿಗೆ ಇರತಕ್ಕ ಸಂಪರ್ಕ, ವ್ಯವಸಾಯದ ಇಲಾಖೆಯಲ್ಲಿ ಇಲ್ಲದೇ ಇರತಕ್ಕದ್ದು ಬಹಳ ಶೋಚನೀಯ. ರೈತನಿಗೂ ವ್ಯವಸಾಯದ ಇಲಾಖೆಗೂ ಸಂಪರ್ಕವಿಲ್ಲದೇ ಹೋದರೆ ಈ ಕಸುಬು ಕ್ಷೀಣ ದೆಸೆಗೆ ಬರುವುದರಲ್ಲಿ ಅನುಮಾನವೇ ಇಲ್ಲ. ಆ ರೀತಿ ಸಂಪರ್ಕವನ್ನುಂಟು ಮಾಡುವ ಕರ್ತವ್ಯ ಈ ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ಸಂಬಂಧಪಟ್ಟದ್ದಾಗಿದೆ. ಅವರು ಹೆಚ್ಚಿನ ಸಂಪರ್ಕವನ್ನು ರೈತಾಪಿ ಜನರಲ್ಲಿ ಇಟ್ಟುಕೊಂಡು, ಅದರಲ್ಲಿ ನಂಬಿಕೆ ಇರತಕ್ಕ ಜನರನ್ನಿಟ್ಟುಕೊಂಡು ಕೆಲಸ ಮಾಡುತ್ತಾ ಇಲ್ಲದೇ ಇರುವುದರಿಂದ ಆಗಾಗ್ಗೆ ತೊಂದರೆ ಬರುತ್ತಾ ಇದೆ. ಏನು ತಾಪತ್ರಯ ಇದೆ ಎಂಬುದನ್ನು ತಿಳಿದುಕೊಂಡು ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ತಾನು ಬೆಳೆದ ಪದಾರ್ಥ

2-30 P.M.

ಗಳಿಗೆ ರೈತನಿಗೆ ಒಳ್ಳೆ ಬೆಲೆ ದೊರಕುವದಿಲ್ಲ. ಅನೇಕ ವೇಳೆ ರೈತರು ಮಧ್ಯಮ ವರ್ಗದವರ ಕೈಗೆ ಸಿಕ್ಕಿ ನರಳುವ ಪರಿಸ್ಥಿತಿ ಬರುತ್ತದೆ. ಆದಕಾರಣ ಸರ್ಕಾರದವರು ರೈತರಿಗೆ ಮಾರ್ಕೆಟಿಂಗ್ ಸೌಲಭ್ಯವನ್ನು ಒದಗಿಸಿಕೊಡುವುದು ಅತ್ಯಾವಶ್ಯಕವಾಗಿದೆ. ಈಗ ದೇಶದಲ್ಲಿ ಪ್ರೊಡೆಕ್ಷನ್ ಕಾಸ್ಟ್ ಜಾಸ್ತಿಯಾಗಿದೆ. ಅದರ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಒದಗಿಸಿಲ್ಲ, ವ್ಯವಸಾಯದ ಕಸುಬು ಯಾರು ಮಾಡುತ್ತಾರೋ ಅವರಿಗೇ ಅದರ ಕಷ್ಟ ಗೊತ್ತು. ನಾನು ಸ್ವತಃ ರೈತನಾಗಿದ್ದೇನೆ. ಅದರ ಅನುಭವದಿಂದ ನಾನು ಇದನ್ನು ಹೇಳುತ್ತಿದ್ದೇನೆ. ಇಲಾಖೆಯವರೂ ಸಹ ರೈತನಿಗೆ ಸಹಕಾರ ಮಾಡಬೇಕು. ಬೆಳೆಯುವುದಕ್ಕೆ ಮುಂಚೆ ವ್ಯವಸಾಯ ಇಲಾಖೆಯವರು ಎಷ್ಟೆಷ್ಟು ಪ್ರಮಾಣದಲ್ಲಿ ಇಂಥಿಂಥ ಬೆಳೆ ಬೆಳೆಯಬೇಕು ಎಂದು ರೈತರಿಗೆ ಸಲಹೆ ನೀಡಬೇಕು. ಯಾವ ಆಹಾರ ಪದಾರ್ಥ ಬೆಳೆಯಬೇಕು. ಯಾವದನ್ನು ಹೊರಗಡೆಗೆ ಕಳಿಸಲು ಬರುವುದು ಮುಂತಾದ ಮುನ್ಸೂಚನೆಗಳನ್ನು ಇಲಾಖೆಯವರು ರೈತರಿಗೆ ಮೊದಲೇ ತಿಳಿಸಬೇಕು. ಆಂಧ್ರ ರಾಜ್ಯದಲ್ಲಿ ಈ ಸಂಬಂಧದಲ್ಲಿ ತೃಪ್ತಿಕರವಾದ ಕ್ರಮ ಕೈಗೊಂಡಿದ್ದಾರೆ. ರೈತರು ವರ್ತಕರ ಕೈಯಲ್ಲಿ ಸಿಕ್ಕು ಕಷ್ಟಪಡಬೇಕಾಗುತ್ತದೆ. ಅದನ್ನು ತಪ್ಪಿಸಲು ಸರಕಾರವು ಅವಶ್ಯವಾಗಿರುವ ಕ್ರಮಗಳನ್ನ ಕೈಕೊಳ್ಳಬೇಕು ಮತ್ತು ರೈತನಿಗೆ ನ್ಯಾಯವಾದ ಬೆಲೆ ದೊರೆಯುವಂತೆ ಮಾಡಬೇಕು.

ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟದ ಸಲುವಾಗಿ ಹಣ ಕೊಟ್ಟಿದ್ದಾರೆ. ಆದರೆ ಈ ಹಣವನ್ನು ಯಾವ ರೀತಿ ಉಪಯೋಗಿಸುತ್ತಾರೆ ಎಂಬ ಬಗ್ಗೆ ಸಂಶಯವಿದೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳಿಗೆ ಕೊಡತಕ್ಕ ಹಣವನ್ನು ದೊರಕಿಸಿಕೊಳ್ಳಬೇಕು. ಕೇಂದ್ರ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಅದನ್ನು ಉಪಯೋಗಿಸಬೇಕು. ಈ ರೀತಿಯಾಗಿ ಮಾಡದಿದ್ದರೆ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ಕೇಂದ್ರದ ವ್ಯವಸಾಯ ಶಾಖೆಯ ಮಂತ್ರಿಯವರಾದ ಪಂಜಾಬರಾವ್ ದೇಶಮುಖ ಅವರು ರೈತಾಪಿ ಜನರ ಬಗ್ಗೆ ವಿಶೇಷ ಅಭಿಮಾನವುಳ್ಳವರಾಗಿದ್ದಾರೆ. ಆದಕಾರಣ ನಮ್ಮ ಸರ್ಕಾರದವರಾದರೂ ಮನಸ್ಸು ಹಾಕಿ ಕೆಲಸವನ್ನು ದಕ್ಷತೆಯಿಂದ ಮಾಡಬೇಕು. ಮಂತ್ರಿಗಳು ಐದುವರ್ಷಗಳಾದ ನಂತರ ಹೊರಟು ಹೋಗುತ್ತಾರೆ. ಆದರೆ ಖಾಯಂ ಆಗಿ ಇರುವ ವ್ಯವಸಾಯ ಇಲಾಖೆಯವರು ಹೆಚ್ಚಿನ ದೇಶಾಭಿಮಾನದಿಂದ ಸತತವಾಗಿ ಕೆಲಸ ಮಾಡಬೇಕು ಮತ್ತು ರೈತರಿಗೆ ಸಹಾಯ ಮಾಡಬೇಕು. ಕೇಂದ್ರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ ಅಭಿವೃದ್ಧಿಯ ಸಲುವಾಗಿ ಖರ್ಚು ಮಾಡಿದ್ದಾರೆ. ಅತಿ ಮುಖ್ಯವಾದ ವ್ಯವಸಾಯ ಅಭಿವೃದ್ಧಿಗೆ ಎಲ್ಲ ಸಹಾಯವನ್ನು ಒದಗಿಸಿಕೊಡಬೇಕು. ಇವೊತ್ತಿನ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಆಲೂಗಡ್ಡೆ ಬೆಳೆಯುತ್ತದೆ. ಸಕಾಲದಲ್ಲಿ ಆಲೂಗಡ್ಡೆ ಬೀಜಗಳನ್ನು ಹೊರಗಿನಿಂದ ಸರ್ಕಾರದವರು ತರಿಸಿ ರೈತರಿಗೆ ಒದಗಿಸಿಕೊಡಬೇಕು.

ಇನ್ನು ರೈತರಿಗೆ ಮುಖ್ಯವಾಗಿ ಬೇಕಾಗುವುದು ಗೊಬ್ಬರ. ರೈತರಿಗೆ ದೊರಕುವ ಗೊಬ್ಬರಕ್ಕೆ ಮಿಶ್ರ ಮಾಡುವದನ್ನು ತಪ್ಪಿಸಿ ಕೃತಕ ಗೊಬ್ಬರವನ್ನು ಕಡಿಮೆ ಬೆಲೆಗೆ ರೈತರಿಗೆ ದೊರಕುವಂತೆ ಮಾಡಬೇಕು. ಕೆಲವು ವರ್ತಕರು ಗೊಬ್ಬರಕ್ಕೆ ಮಿಶ್ರಮಾಡಿ ಮಾರುವದನ್ನು ತಪ್ಪಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ರೈತರಿಗೆ ಸಕಾಲದಲ್ಲಿ ಗೊಬ್ಬರ ಬೀಜ ದೊರಕುವಂತೆ ವ್ಯವಸಾಯ ಇಲಾಖೆಯವರು ನೋಡಿಕೊಳ್ಳಬೇಕು.

ಹೆಸರಘಟ್ಟ Fruit Research Station ಸುಮಾರು 60 ಎಕರೆಯ ವಿಸ್ತೀರ್ಣವಾದ ಉತ್ತಮವಾದ ಭೂಮಿಯಾಗಿ ಎಲ್ಲ ಸೌಲಭ್ಯಗಳು ಇದ್ದಾಗ್ಯೂ ಅಲ್ಲಿ ಯಾವ ಉತ್ತಮವಾದ ಸಸಿಗಳ ಬೆಳವಣಿಗೆ ಮಾಡುತ್ತಿಲ್ಲ. ಹಾಲಿ N.E.S. ಬ್ಲಾಕುಗಳಿಗೂ C.D. Block ಗಳಿಗೂ ಖಾಸಗೀಯವರು ಸಾವಿರಾರು ಸಸಿಗಳನ್ನು ಲಾಲ್‌ಬಾಗ್ ರೋಡಿನಲ್ಲಿರುವ ನರ್ಸರಿಯವರಿಂದ ಖರೀದಿಗೆ ತೆಗೆದುಕೊಂಡು ಹೋಗುತ್ತಾ ಇದ್ದಾರೆ. ಈ ಕಾರ್ಯವನ್ನು ಹೆಸರಘಟ್ಟ ಹಣ್ಣಿನ ತೋಟದಲ್ಲಿ ಕಾರ್ಯರೂಪಕ್ಕೆ ತರಲು ಇರುವ ತೊಂದರೆ ಏನು ಎಂಬುದು ಕಾಣುವುದಿಲ್ಲ. ಸಪೋಟ ಹಣ್ಣಿನ ಗಿಡಗಳನ್ನು ಈ ದಿವಸದವರೆಗೂ ಸಹ ಕಲಕತ್ತಾ ಪ್ರದೇಶದಿಂದ ತರಿಸುತ್ತಿದ್ದಾರೆ. ಈ ಒಂದು ಕಾರ್ಯಕ್ರಮವನ್ನು ಇಲಾಖೆಯವರು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಣ್ಣುಗಳ ಬೆಳವಣಿಗೆ ವಿಷಯದಲ್ಲಿ ಕೋಲಾರ, ಬೆಂಗಳೂರು ಸ್ಥಳಗಳಲ್ಲಿ ಹಣ್ಣುಗಳನ್ನು ವಿಶೇಷವಾಗಿ ಬೆಳೆಯುತ್ತಾ ಇದ್ದಾರೆ. ಈ ವಿಷಯವನ್ನು ಗಮನಿಸಿ ಸರ್ಕಾರದವರು ಈಗಾಗಲೇ Fruit canning and juice extracting factory ಯನ್ನು ಸೋಪ್ ಕಾರ್ಖಾನೆಯ ಒಂದು ಭಾಗದಲ್ಲಿ ತೆರೆದಿಗುತ್ತಾರೆ. ಈ ಒಂದು ಫ್ಯಾಕ್ಟರಿಯ ಆಡಳಿತದಲ್ಲಿ ಖಾಸಗೀ ಡೈರೆಕ್ಟರುಗಳು ನಮ್ಮ ಸ್ನೇಹಿತರು ಆಗಿದ್ದಾಗ್ಯೂ ಇದರ ವಿಚಾರವಲ್ಲಿ ಹಣ್ಣಿನ ವ್ಯವಸಾಯಗಾರರಿಗೆ ಸರಿಯಾಗಿ

ಇದರ ಉಪಯೋಗದ ತಿಳಿವಳಿಕೆ ಬಂದಿಲ್ಲ. ವ್ಯಾಪಾರಸ್ಥರು ಯಾವೊಂದು ವಿಷಯವನ್ನು ಹೇಳಿದರೂ ಬಹು ಬೇಗ ಕೂಗು ಹೊರಡುತ್ತದೆ. ಆದರೆ ಲೇಬರ್ ಕ್ಲಾಸಿನವರು ಅಂದರೆ ಕಾರ್ಮಿಕರು ಅಥವಾ ಕೂಲಿಗಾರರು ಏನಾದರೂ ಹೇಳಿದರೆ ನಮ್ಮ ಸರ್ಕಾರಕ್ಕೆ ಕಿವಿ ಕೇಳುವುದಿಲ್ಲ. ಈಗಿನ ಕಾಲದಲ್ಲಿ ರೈತ ಮನಸ್ಸು ಮಾಡಿದರೆ ದೇಶಕ್ಕೆಲ್ಲಾ ಅನುಕೂಲ ಮಾಡಬಹುದು.

ಬೆಂಗಳೂರಿನ ಸುತ್ತ 30 ಮೈಲಿ ಪ್ರದೇಶದ ಹವಾಗುಣ ಭೂಗುಣ ಚೆನ್ನಾಗಿರುವುದರಿಂದ, ಪ್ರಪಂಚದ ಎಲ್ಲಾ ಹಣ್ಣಿನ ಗಿಡಗಳನ್ನೂ ಬೆಳೆಯುವುದಕ್ಕೆ ಯೋಗ್ಯವಾಗಿರುವುದರಿಂದ ಈಗಾಗಲೇ 150—200 ಎಕರೆಗಳಷ್ಟು ದ್ರಾಕ್ಷಿಯನ್ನು ಬೆಳೆಯುತ್ತಿದ್ದಾರೆ. ಎಕರೆ ಒಂದಕ್ಕೆ 2,500 ರೂಪಾಯಿಗಳಿಂದ 3,000 ರೂಪಾಯಿಗಳವರೆಗೂ ಪ್ರಾರಂಭದ ಖರ್ಚು ತಗಲುತ್ತದೆ. ಇವೊತ್ತು ಬೆಳೆದಂತಹ ಹಣ್ಣುಗಳನ್ನು ಬೆಂಗಳೂರಿನಲ್ಲಿಯೇ ಮಾರುವುದಕ್ಕಾಗುವುದಿಲ್ಲ, ಪರದೇಶಗಳಿಗೂ ಹೋಗುತ್ತದೆ. ಇಲ್ಲಿ ಬೆಳೆದ ಹಣ್ಣನ್ನು ನಮ್ಮ ಸ್ನೇಹಿತರು ಮತ್ತು ನಮ್ಮ ಅಣ್ಣ ತಮ್ಮಂದಿರುಗಳು ತಿನ್ನುವಷ್ಟು ತಿನ್ನಲಿ. ಉಳಿದ ಹಣ್ಣನ್ನು ಇಲ್ಲಿನ ಫ್ರೂಟ್ ಕ್ಯಾನಿಂಗ್ ಮತ್ತು ಜ್ಯೂಸ್ ಎಕ್ಸ್‌ಟ್ರಾಕ್ಟಿಂಗ್ ಫ್ಯಾಕ್ಟರಿಯವರು ಉಪಯೋಗಿಸಿ ಬೆಳೆದ ಹಣ್ಣಿಗೆ ಸರಿಯಾದ ಬೆಲೆ ಸಿಕ್ಕುವಂತೆ ತಕ್ಕ ಏರ್ಪಾಡನ್ನು ಮಾಡಬೇಕು.

ಪ್ಲಾಂಟ್ ಪ್ರೊಟೆಕ್ಟಿವ್ ಮತ್ತು ಸೈಂಟಿಫಿಕ್ ಸೆಕ್ಷನ್ ಎಂಬುದು ವ್ಯವಸಾಯ ಇಲಾಖೆಯಲ್ಲಿ ಅತಿ ಮುಖ್ಯವಾದುದು. ಮಾನವರಿಗೆ ಕಾಲರಾ, ಪ್ಲೇಗು ಬಂದಾಗ ಆರೋಗ್ಯ ಇಲಾಖೆಯವರು ಯಾವ ರೀತಿ ಮುಂಜಾಗರೂಕತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ತಕ್ಕ ವಾಹನ ಸೌಕರ್ಯಗಳನ್ನು ಅವರಿಗೆ ಒದಗಿಸಿ ಕೊಡುತ್ತಾರೋ, ಅದೇ ರೀತಿಯಲ್ಲಿ ಈ ಇಲಾಖೆಯ ಮುಖ್ಯಾಧಿಕಾರಿಗಳಿಗೆ ವಾಹನ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ರೈತರಿಗೆ ಶೀಘ್ರದಲ್ಲಿ ಉಪಯೋಗ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಇಲಾಖೆಗೆ ಒದಗಿಸಿರುವ ಹಣವನ್ನು ಸಕಾಲದಲ್ಲಿ ಇಲಾಖೆಗೆ ವರ್ಗಾಯಿಸಬೇಕು. ವಿಷಕ್ರಿಮಿಗಳ ನಾಶಕ್ಕೆ ರಿಯಾಯಿತಿ ದರದಲ್ಲಿ ದೊರೆಯುವ ಔಷಧಿಗೆ ಹೆಚ್ಚಿಗೆ ಹಣ ಒದಗಿಸಬೇಕು.

ಇನ್ನು ಸಾಯಿಲ್ ಕನ್ಸರ್‌ವೇಷನ್, ಅರ್ಬನ್ ಮತ್ತು ರೂರಲ್ ಕಾಂಪೋಸ್ಟ್ ಈ ಭಾಗಗಳಿಗೆ ಹಣ ಒದಗಿಸಿದ್ದರೂ ಸಹ ಅವುಗಳ ಫಂಡನ್ನು ಇಲಾಖೆಯವರು ಸರಿಯಾಗಿ ಉಪಯೋಗಿಸುತ್ತಾ ಇಲ್ಲ. ಅದರಲ್ಲೂ ಸಾಯಿಲ್ ಕನ್ಸರ್‌ವೇಷನ್ ಎಂಬುದು ಬಹು ಮುಖ್ಯವಾದುದು. ಇದರ ಉಪಯೋಗವನ್ನು ರಾಜ್ಯದ ಎಲ್ಲಾ ಕಡೆಗೂ ದೊರೆಯುವಂತೆ ನಮ್ಮ ಸರ್ಕಾರದವರು ಏರ್ಪಾಡು ಮಾಡಬೇಕು.

ಇನ್ನು ಇರಿಗೇಷನ್ ಬಾವಿಗಳ ವಿಷಯ. 57—58ನೇ ಸಾಲಿನ ಬಡ್ಜೆಟ್ಟಿನ 223ನೇ ಪುಟದಲ್ಲಿ ವ್ಯವಸಾಯದ ಬಾವಿಗಳಿಗಾಗಿ 2,77,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರ ಉಪಯೋಗ ಇಲಾಖೆಯ ಮುಖಾಂತರ ನಡೆಯುತ್ತಿಲ್ಲ. ನಡೆಯುವಂತೆ ಏರ್ಪಡಿಸಬೇಕು. ಬಾವಿ ತೆಗೆಸುವವರಿಗೆ ಈಗ 1,000 ರೂಪಾಯಿನಿಂದ ಕ್ರಮಕ್ರಮೇಣ ಅದು 250 ರೂಪಾಯಿಗಳಿಗೆ ಇಳಿದಿದೆ. ಆದರೆ ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಬಾವಿ ತೆಗೆಸಬೇಕಾದರೆ, ಸುಮಾರು ಮೂರು ಸಾವಿರ ರೂಪಾಯಿಗಳಿಂದ ಹತ್ತು ಸಾವಿರ ರೂಪಾಯಿಗಳವರೆಗೂ ತಗಲುತ್ತದೆ. ಕೊಡುವ ಸಹಾಯ ನಿರರ್ಥಕವಾಗಬಾರದು. ಉದಾರವಾಗಿ ಸಹಾಯಧನ ಕೊಡಿ. ಇದು ದೇಶದ ಒಂದು ಆಸ್ತಿ. ಇಲಾಖೆಯವರು ಹಣದ ಸೌಕರ್ಯ ಮತ್ತು ತಾಂತ್ರಿಕ ಸೌಕರ್ಯಗಳನ್ನು ಒದಗಿಸುವುದರ ಮೂಲಕ ರೈತರ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕು. ನನ್ನದು ಎನ್ನುವ ಭಾವನೆ ರೈತ ವರ್ಗಕ್ಕೆ ಬರುವ ರೀತಿಯಲ್ಲಿ ಇಲಾಖೆಯವರು ತಮ್ಮ ಮನೋಭಾವನೆಯನ್ನು ಬದಲಾಯಿಸಿಕೊಳ್ಳಬೇಕು.

ಇನ್ನು ರೂರಲ್ ಡೆವಲಪ್‌ಮೆಂಟ್ ವಿಷಯದ ಬಗ್ಗೆ ಹೆಚ್ಚಿಗೆ ಕಾಲವಿಲ್ಲದ ಕಾರಣ ಕೆಲವು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ. ಗ್ರಾಮಾಭಿವೃದ್ಧಿಯಲ್ಲಿ ನಮಗೆ ಮುಖ್ಯವಾಗಿ ಬೇಕಾಗಿರುವುದು ಎರಡು. ಮೊದಲನೆಯದು ಏ. ವಿ. ಸಿ. ರಸ್ತೆಗಳು ಎರಡನೆಯದು ಕುಡಿಯುವ ನೀರಿನ ಭಾವಿಗಳು. ಗ್ರಾಮಪಂಚಾಯಿತಿಗಳು ಎಲ್ಲಿಯವರೆಗೆ ಸರಿಯಾದ ರೀತಿಯಲ್ಲಿ ಕೆಲಸಮಾಡುವುದಿಲ್ಲವೋ ಅಲ್ಲಿಯವರೆಗೂ ಗ್ರಾಮಾಂತರದಲ್ಲಿ ರಸ್ತೆಗಳು ಮತ್ತು ಕುಡಿಯುವ ನೀರಿನ ಭಾವಿಗಳು ಚೆನ್ನಾಗಿ ವ್ಯವಸ್ಥೆಯಾಗುವುದಿಲ್ಲ. ಕೆರೆಕಟ್ಟೆಗಳನ್ನು ಸರಿಯಾದ ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಈ ಕಾರ್ಯಭಾರ ರೆವಿನ್ಯೂ ಇಲಾಖೆಯವರ ಮೇಲೆ ಬಿದ್ದಿರುವುದರಿಂದ ಮಳೆಗಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ಯಾಂಪುಮಾಡಿ ಗ್ರಾಮಾಂತರದ ಅನುಕೂಲಗಳಿಗೆ ಹೆಚ್ಚಿನ ಗಮನ ಕೊಡಬೇಕು. ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಯಾವರೀತಿ ಅವರಿಗೆ ಹಂಚಿಕೆ ಯಾಗಬೇಕು ಎಂಬ ವ್ಯವಸ್ಥೆ ಮಾಡುವುದಕ್ಕೆ ನಮ್ಮ ಸರ್ಕಾರದವರು ಕೂಡಲೇ ಏರ್ಪಾಡು ಮಾಡಬೇಕು.

ಇನ್ನು ಹೆಸರುಘಟ್ಟ ಲೈವ್‌ಸ್ಟಾಕ್‌ಫಾರಂ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆ ಫಾರಮ್ಮಿನಲ್ಲಿ ಸುಮಾರು ಮೂರುಸಾವಿರ ಎಕರೆಗಳಷ್ಟು ಉತ್ಕೃಷ್ಟವಾದ ಜಮೀನು ಇದೆ. ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪ ನವರು ಹಿಂದೆ ಈ ಫಾರಮ್ಮಿನ ಬಗ್ಗೆ ಒಂದು ಯೋಜನೆಯನ್ನು ಹಾಕಿದರು. ಆ ಯೋಜನೆಯು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಅದರಲ್ಲೂ ಬೆಂಗಳೂರು ದಿನೇದಿನೇ ಬೆಳೆಯುತ್ತಾ ಇರುವುದರಿಂದ ಅಲ್ಲಿ ಡೈರಿಯನ್ನು ಅಭಿವೃದ್ಧಿ ಪಡಿಸಿ ಅಲ್ಲಿ ಸುತ್ತಮುತ್ತಲಿರುವ ರೈತರಿಂದ ಹಾಲನ್ನು ಸಹಕಾರ ಸಂಘಗಳ ಮೂಲಕ ಶೇಖರಿಸಿ ಅದನ್ನು ಬೆಂಗಳೂರಿನ ಆಸ್ಪತ್ರೆಗಳಿಗೂ ಮತ್ತು ಪ್ರಜೆಗಳಿಗೂ ದೊರೆಯುವಂತೆ ಏರ್ಪಾಡು ಮಾಡಬೇಕು. ಈ ಫಾರಮ್ಮನ್ನು ಅಭಿವೃದ್ಧಿ ಪಡಿಸುವುದಕ್ಕೆ ಎಲ್ಲಾ ಅನುಕೂಲಗಳು ಇದ್ದಾಗ್ಯೂ ಸಹ, ನಮ್ಮ ಸರ್ಕಾರದವರು ಈ ಯೋಜನೆಯ ಹಂತವನ್ನು ತಲುಪಲು ಪ್ರಯತ್ನ ಮಾಡುತ್ತಾ ಇಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಈ ಬಗ್ಗೆ ಹೆಚ್ಚುಗಮನವನ್ನು ಕೊಡಬೇಕು. ಸರ್ಕಾರದವರು ಈಗ ನಮ್ಮ ಮುಂದೆ ಇಟ್ಟಿರುವ ಎಲ್ಲಾ ಬೇಡಿಕೆಗಳಿಗೂ ನಾನೂ ಸಂಪೂರ್ಣ ಬೆಂಬಲ ಕೊಟ್ಟು, ಅದರಲ್ಲೂ ವ್ಯವಸಾಯದ ಬೇಡಿಕೆಗೆ ಇನ್ನೂ ಹೆಚ್ಚಿಗೆ ಹಣವನ್ನೊದಗಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈದಿನ ಸರ್ಕಾರದವರು ವ್ಯವಸಾಯ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಕಾರ್ಯ, ಮತ್ತು ಪಶುವೈದ್ಯ ಈ ವಿಚಾರಗಳ ಬೇಡಿಕೆಗಳನ್ನು ಇಟ್ಟಿದ್ದಾರೆ. ಆದರೆ ನನಗೆ ಒಂದು ವಿಚಾರ ಹೊಳೆಯುತ್ತದೆ, ಸರ್ಕಾರದವರು ಯಾವ ಬಾಬುಗಳಿಗೆ ಹೆಚ್ಚಿಗೆ ಹಣವನ್ನು ಕೇಳಬೇಕೋ ಅವುಗಳಿಗೆ ಕೇಳುತ್ತಾ ಇಲ್ಲ. ಯಾವ ಬಾಬುಗಳಿಗೆ ಕಡಮೆ ಹಣ ಬೇಕೋ

(ಶ್ರೀ ಜಿ. ವೆಂಕಟೇಗೌಡ)

ಆ ಬಾಬುಗಳಿಗೆ ಹೆಚ್ಚು ಹಣವನ್ನು ಕೇಳುತ್ತಿದ್ದಾರೆ. ಅನೇಕ ವೇಳೆ ಈ ರೀತಿ ಹೆಚ್ಚು ಹಣವನ್ನು ಅಂಗೀಕಾರಮಾಡಿದರೂ ಉದ್ದೇಶವೇನೋ ಫಲಕಾರಿ ಯಾಗುವುದಿಲ್ಲ. ಮೊದಲನೆಯದಾಗಿ ವ್ಯವಸಾಯದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇ ಕೆಂದಿರುವಾಗ ಈಗಾಗಲೇ ನನ್ನ ಮಾನ್ಯಮಿತ್ರರು ಈ ವಿಷಯದಲ್ಲಿ ಬಹಳವಾಗಿ ಮಾತನಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಹೇಳಬೇಕಾಗಿದೆ. ಇವೊತ್ತಿನ ದಿವಸ ನಮ್ಮ ರಾಜ್ಯ ಮುಂದುವರಿಯಬೇಕಾದರೆ, ಪ್ರಗತಿಯಾಗಬೇಕಾದರೆ ಗ್ರಾಮಂತರ ಅಭಿವೃದ್ಧಿ ಕಾರ್ಯಗಳಿಂದಲೇ ಎಂದು ಹೇಳಿದರೆ ತಪ್ಪಾ ಗುವುದಿಲ್ಲ. ಇವೊತ್ತಿನ ದಿವಸ ನಮ್ಮ ಸರ್ಕಾರದವರು ಬಹಳವಾಗಿ ಇದಕ್ಕೆ ಗಮನವನ್ನು ಕೊಡುತ್ತಾ ಇಲ್ಲ. ಅವರು ತಮ್ಮ ಬೇಡಿಕೆಯಲ್ಲಿ ಕೇಳಿರುವ ಮೊತ್ತವನ್ನು ನೋಡಿದರೆ, ಅವರು ಈ ವಿಚಾರಗಳ ಬಗ್ಗೆ ಅಷ್ಟಾಗಿ ಗಮನ ಕೊಡುತ್ತಾ ಇಲ್ಲವೆಂಬುದು ವ್ಯಕ್ತವಾಗುತ್ತದೆ. ಇಂತಹ ಕನಿಷ್ಟ ಮೊತ್ತದಿಂದ ನಿಜವಾಗಿಯೂ ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳನ್ನು ಯಾವರೀತಿ ಮಾಡುತ್ತಿದ್ದಾರೋ ನನಗಂತೂ ಗೊತ್ತಾಗುವುದಿಲ್ಲ. ಈ ದೃಷ್ಟಿಯಿಂದ ಈ ಬಾಬಿಗೆ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದರೂ ನನಗೆ ಸಂತೋಷ ವಾಗುತ್ತದೆ. ಆಗ ಎಲ್ಲಾ ಕೈಗಾರಿಕೆಗಳನ್ನು ಗ್ರಾಮಗಳಲ್ಲಿಯೂ ಕೇಂದ್ರೀಕೃತ ಮಾಡುವುದಕ್ಕೆ ಸಾಧ್ಯವೇ ಹೊರತು ಬೇರೆ ರೀತಿಯಾಗಿ ಸಾಧ್ಯವಿಲ್ಲ. ನಮ್ಮ ಸರ್ಕಾರದವರು ಒಂದು ತಪ್ಪನ್ನು ಮಾಡುತ್ತಿದ್ದಾರೆ. ಯಾವುದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲಿ, ಎಲ್ಲಾ ಕೈಗಾರಿಕೆಗಳನ್ನೂ ಪಟ್ಟಣ ಮತ್ತು ನಗರಗಳಲ್ಲಿ ಸ್ಥಾಪನೆ ಮಾಡುತ್ತಾರೆಯೇ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿ ಯಾವರೀತಿಯಲ್ಲಾದರೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎನ್ನುವ ಕಡೆಗೆ ಅವರ ಗಮನವಂತೂ ಹೋಗುತ್ತಾ ಇಲ್ಲ ಎಂಬುದಕ್ಕೆ ನಮ್ಮ ಸರ್ಕಾರದವರು ಕೇಳಿರುವ ಮೊತ್ತವೇ ಸಾಕ್ಷಿ. ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ಕಾಗಿ 61,47,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಬಹಳ ಕಡಮೆ. ಈ ಮೊತ್ತದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ; ಗ್ರಾಮಾರೋಗ್ಯ ಮತ್ತು ನೈರ್ಮಲ್ಯ, ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ವ್ಯವಸ್ಥೆ, ಮತ್ತು ಗ್ರಾಮಾಂತರ ಸಂಚಾರವ್ಯವಸ್ಥೆ ಈ ಕಾರ್ಯಗಳು ನಡೆಯಬೇಕಾಗಿವೆ. ಇಷ್ಟೊಂದು ಕಾರ್ಯಗಳಿಗೆ ಈ ಮೊತ್ತ ಇಡೀ ಕರ್ಣಾಟಕಕ್ಕೆ ಸಾಕಾಗುತ್ತದೆಯೇ ? ಇಲ್ಲ. ಆದ್ದರಿಂದ ಸರಕಾರದವರು ಈ ಬಾಬಿಗೆ ಇನ್ನೂ ಹೆಚ್ಚು ಮೊಬಲಗನ್ನಿಡ ಬೇಕು ಎಂದು ನಾನು ಹೇಳುತ್ತೇನೆ. ಆ ದೃಷ್ಟಿಯಿಂದ ಇದಕ್ಕೆ ಸರ್ಕಾರದವರ ಸರಿಯಾದ ಗಮನವನ್ನು ಕೊಡದಿದ್ದರೆ ನಮ್ಮ ರಾಜ್ಯದ ಆರ್ಥಿಕ ಮಟ್ಟ ಹೆಚ್ಚುವುದಕ್ಕೆ ಅನುಕೂಲವಾಗುವುದಿಲ್ಲ.

ಎರಡನೆಯದಾಗಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಸಮಾಜ ಅಭಿವೃದ್ಧಿ ಕಾರ್ಯಗಳಿಗೆ 65,25,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ಎಷ್ಟರ ಮಟ್ಟಿಗೆ ನಡೆಯುತ್ತಿವೆ. ಸರ್ಕಾರದವರಿಗೆ ಆ ರೀತಿ ನಡೆಸುವುದಕ್ಕೆ ಎಷ್ಟರಮಟ್ಟಿಗೆ ಚೈತನ್ಯ ಇದೆ ಎಂದು ಗೊತ್ತಾಗುವುದಕ್ಕೆ ಈ ಡಿಮ್ಯಾಂಡಿನಲ್ಲಿ ಏನೂ ಇಲ್ಲ. ಷೆಡ್ಯೂಲ್ಡ್ ಕ್ಲಾಸಸ್, ನಿಮ್ಮ ವರ್ಗದವರ ಮತ್ತು ಕ್ರಿಮಿನಲ್ ಟ್ರೈಬ್ಸ್, ನೊಮ್ಯಾಡ್ಸ್ ಮತ್ತು ಸೆಮಿನೊಮ್ಯಾಡ್ಸ್ ವೆಲ್‌ಫೇರ್ ಸ್ಕೀಮುಗಳು ಮತ್ತು ಇತರ ಕೆಲಸಗಳಿಗೆ 65,25,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇಷ್ಟು ಅಭಿವೃದ್ಧಿಕಾರ್ಯಗಳನ್ನು ಯಾವ ರೀತಿ ಕಾರ್ಯಗತಮಾಡುತ್ತಾರೋ ನನಗೆ ಕಾಣುತ್ತಾ ಇಲ್ಲ. ಅದರಲ್ಲೂ ಕನ್ನಡನಾಡಿನ ಎರಡು ಕೋಟಿ ಜನರಲ್ಲಿ ಸುಮಾರು ನಾಲ್ಕನೆಯ ಒಂದು ಭಾಗದಷ್ಟು ಹರಿಜನ ಸಂಖ್ಯೆ ಇದೆ. ಅದರಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ 23 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಅಸ್ಪೃಶ್ಯತಾ ನಿವಾರಣೆ ಹೇಗೆ ಮಾಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಹರಿಜನರ ಅಸ್ಪೃಶ್ಯತಾ ನಿವಾರಣೆಯನ್ನು ಹತ್ತು ವರ್ಷಗಳಿಂದಲೂ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದು ಯಾವ ಮಟ್ಟದಲ್ಲಿದೆ ಮತ್ತು ಯಾವ ಕಾರ್ಯಕ್ರಮವನ್ನು ಆ ಬಗ್ಗೆ ಹಾಕಿಕೊಂಡಿದ್ದಾರೆ ಎಂಬುದು ಕಾಣುತ್ತಾ ಇಲ್ಲ. ಅದು ಕಾರ್ಯಗತವಾಗಿಯೂ ಇಲ್ಲ. ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ನಾವೆಲ್ಲರೂ ಒಂದು ಎಂಬ ಮನೋಭಾವನೆಯನ್ನು ವ್ಯಕ್ತಪಡಿಸುವವರು ಯಾರುಇದ್ದಾರೆ ? 23 ಸಾವಿರ ರೂಪಾಯಿಗಳಿಂದ ಅಸ್ಪೃಶ್ಯತಾ ನಿವಾರಣೆ ಮಾಡಲು ಇವರಿಗೆ ಸಾಧ್ಯವಾಗುತ್ತದೆಯೇ ಎಂದು ಕೇಳ ಬಯಸುತ್ತೇನೆ. ಅಸ್ಪೃಶ್ಯತಾ ನಿವಾರಣೆ 10 ವರ್ಷಗಳಿಂದಲೂ ಬಹಳ ಮಟ್ಟಿಗೆ ಆಗಬೇಕಾಗಿತ್ತು. ಆದರೆ ಯಾವಮಟ್ಟಕ್ಕೆ ಅದು ಬರಬೇಕೋ ಆ ಮಟ್ಟಕ್ಕೆ ಇದುವರೆಗೂ ಬಂದಿಲ್ಲ. ಅವರದೂ ತಪ್ಪಿದೆ. ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ನಾವು ಒಂದುವರ್ಷ ಅದು ಕಾರ್ಯಗತವಾಗುತ್ತದೆ ಎನ್ನುವುದು ಒಂದು ವರ್ಷ ಪರಿಶೀಲನೆ ಮಾಡುತ್ತೇವೆ ಎನ್ನುವುದು ಹೀಗೆ ಹೇಳದೆ ಅವರಕಡೆಗೆ ನಮ್ಮ ದೃಷ್ಟಿಯನ್ನು ತಿರುಗಿಸಬೇಕು. 23 ಸಾವಿರ ರೂಪಾಯಿಗಳನ್ನು ಮಾತ್ರ ಸರ್ಕಾರದವರು ಈ ಬಾಬಿಗೆ ಒದಗಿಸಿದ್ದಾರೆ. ಅಂತಹ ವಾತವರಣವನ್ನು ಸರ್ಕಾರದವರು ಕಲ್ಪಿಸಿಲ್ಲ ಎಂದು ಹೇಳುವುದಕ್ಕೆ ವಿಷಾದವಾಗುತ್ತದೆ. ಮಹಾತ್ಮಗಾಂಧಿಯವರು ಮತ್ತು ಬ್ಯಾನರ್ಜಿಯವರು ಹೇಗೆ ಜನಗಳ ಮನೋಭಾವನೆಯನ್ನು ಬದಲಾಯಿಸಿ ಒಂದು ವಾತಾವರಣವನ್ನು ಕಲ್ಪನೆ ಮಾಡಿದರೋ ಅದನ್ನು ಇವೊತ್ತು ಮುಂದುವರಿಸಿಕೊಂಡು ಬಂದಿಲ್ಲ. ಇದು ಶೋಚನೀಯ ಸ್ಥಿತಿ ಎಂದು ಹೇಳುತ್ತೇನೆ ಸಾಮಾಜಿಕ ಸ್ಥಿತಿಯನ್ನು ಈ ರೀತಿ ಇಟ್ಟಿರುವುದರಿಂದ ನಮ್ಮ ಹಿಂದೂ ಸಮಾಜ ಎಲ್ಲಿ ಒಡೆದುಹೋಗುತ್ತದೋ ಎಷ್ಟು ಕಷ್ಟಬರುತ್ತದೋ ಎಂದು ನನಗನ್ನಿಸುತ್ತದೆ, ಗಾಂಧೀ ತತ್ವದಲ್ಲಿ ಮನ್ನಣೆ ಇರುವ ಪ್ರತಿಯೊಬ್ಬ ಮನುಷ್ಯನೂ ಈ ವಿಚಾರದಲ್ಲಿ ಏನು ಕೆಲಸಮಾಡಿದ್ದಾನೆಂದು ಕೇಳುತ್ತೇನೆ. ನಾವು ಎಷ್ಟೋಜನ ಈ ಸಭೆಗೆ ಬಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಚರ್ಚೆ ಮಾಡುವುದರಿಂದ ಅಸ್ಪೃಶ್ಯತಾ ನಿವಾರಣೆ ಮಾಡಿದಂತಾಗಲಿಲ್ಲ. ಬರಿಯ 23 ಸಾವಿರ ರೂಪಾಯಿಗಳಿಂದ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲ ಎಂದು ಹೇಳುತ್ತೇನೆ. ನಮ್ಮಲ್ಲಿ ಅಸ್ಪೃಶ್ಯತೆ ಇಲ್ಲ ಎಂದು ಹೇಳಿ ಹಿಂದೂಗಳಲ್ಲಿ ಹಿಂದಿನಿಂದಲೂ ಇದ್ದಂಥ ಮನೋಭಾವನೆಯನ್ನು ಪರಿವರ್ತನೆ ಮಾಡದವೆ ಇದ್ದರೆ ಹೇಗೆ ? ಆ ದೃಷ್ಟಿಯಿಂದ ಕಾರ್ಯಕ್ರಮವನ್ನು ತೆಗೆದುಕೊಂಡು ಹಿಂದೂ ಸಮಾಜದಲ್ಲಿ ಅನುಕೂಲವಾದ ಮನೋಭಿಪ್ರಾಯವನ್ನು ಉಂಟುಮಾಡುವುದಕ್ಕೆ ಒಂದು ಸೇವಾದಳವನ್ನು ಏರ್ಪಾಡುಮಾಡಿ ಸವರ್ಣ ಹಿಂದೂಗಳಲ್ಲಿರುವ ಅಭಿಪ್ರಾಯವನ್ನು ಮತ್ತು ಮನೋಭಾವವನ್ನು

ಬದಲಾಯಿಸಬೇಕು, ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದವು. ನಮ್ಮ ಸಮಾಜವನ್ನು ಇದುವರೆಗೂ ಒಂದು ಸುವ್ಯವಸ್ಥಿತವಾದ ಸ್ಥಿತಿಗೆ ತರಲಿಲ್ಲ ಎಂದು ಹೇಳಿದರೆ ಅದು ನಾಚಿಗೇಡು. ಇವೊತ್ತಿನ ದಿವಸ ಒದಗಿಸಿರತಕ್ಕ 65,25,000 ರೂಪಾಯಿಗಳು ಸಮಾಜದಲ್ಲಿ ಎಲ್ಲರಿಗೂ ಸೇರುತ್ತದೆ. ಹಿಂದುಳಿದವರಿಗೆ 1,93,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇವೊತ್ತಿನ ದಿವಸ ಅನೇಕ ಹೊರಗಿನ ಪ್ರದೇಶಗಳು ಹಳೆಯ ಮೈಸೂರಿಗೆ ಸೇರಿ ಒಂದು ನಾಡಾಗಿದೆ. ಎಲ್ಲಾ ಜನರೂ ಹರಿಜನರ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಏಕೆಂದರೆ ಅವರಲ್ಲಿ ಹೆಚ್ಚಿಗೆ ಜನ ಬಹಳ ದುರವಸ್ಥೆಯಲ್ಲಿದ್ದಾರೆ. ಹಳೆಯ ಮೈಸೂರಿನಲ್ಲಿ ಸಾಮಾಜಿಕ ವಿದ್ಯಾಭ್ಯಾಸದೃಷ್ಟಿಯಿಂದ ಮಾತನಾಡಬೇಕಾದರೆ ಮದರಾಸು ಪ್ರಾಂತ್ಯದಿಂದ ಬರತಕ್ಕ ಹರಿಜನರಿಗೆ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಅದನ್ನು ಮೈಸೂರಿಗೆ ಕೊಟ್ಟಿಲ್ಲ. ಯಾರಾದರೂ ಒಬ್ಬ ವಿದಾರ್ಥಿ S.S.L.C. ಪಾಸಾದರೆ ಕೂಡಲೇ ಅವನನ್ನು ಹಾಸ್ಟಲಿಗೆ ಸೇರಿಸುತ್ತಿದ್ದರು. ಆಗ ಅವನಿಗೆ ಸ್ಕಾಲರ್‌ಷಿಪ್ ಬರುವುದಕ್ಕೆ ಒಂದು ದಾರಿಯಿತ್ತು. ಇವೊತ್ತಿನ ದಿವಸ ಮೊದಲು ದುಡ್ಡು ಕೆಟ್ಟು ಹಾಸ್ಟಲಿಗೆ ಸೇರಿದರೂ ಎಷ್ಟೋ ಅರ್ಜಿಗಳನ್ನು ವಜಾಮಾಡಿದ್ದಾರೆ. ಹರಿಜನ ವಿದ್ಯಾರ್ಥಿಗಳಿಗೆ ಸರ್ಕಾರದವರು ಕೊಡುತ್ತಿದ್ದ ಸೌಲಭ್ಯಗಳನ್ನು ವಜಾಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಅವರಿಂದಏನೂ ಹಣವನ್ನು ತೆಗೆದುಕೊಳ್ಳದೆ ಅವರಿಗೆ ವ್ಯಾಸಂಗಕ್ಕೆ ಅವಕಾಶಮಾಡಿಕೊಡಬೇಕು. ಓದುವ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಮೈಸೂರು ದೇಶದಲ್ಲಿ ಸ್ಕಾಲರ್‌ಷಿಪ್ ಕನ್ಸೆಷನ್ ದೊರೆತಿದೆ. ಕನ್ನಡನಾಡು ಒಂದಾದಮೇಲೆ ಅವರನ್ನು ಬೇರೆ ಪ್ರಾಂತ್ಯದವರಂತೆ ಭಾವಿಸಲು ಸಾಧ್ಯವಾಗುವುದಿಲ್ಲ. ಎಷ್ಟೋ ವಿದ್ಯಾರ್ಥಿಗಳು ಈಗ ಓದುತ್ತಿದ್ದಾರೆ. ಅಂಥವರಿಗೆ ಸಹಾಯಮಾಡದಿದ್ದರೆ ಅದರಿಂದ ಅನ್ಯಾಯವಾಗುತ್ತದೆ. ಎಂದು ಹೇಳಬಯಸುತ್ತೇನೆ. ಇವೊತ್ತಿನ ದಿವಸ ಅಸ್ಪೃಶ್ಯತೆಯ ವಿಚಾರವಾಗಿ ಒಂದು ವಿಷಯವನ್ನು ಹೇಳುತ್ತೇನೆ; ಅದನ್ನು ಕಾರ್ಯಗತ ಮಾಡಬೇಕು. Untouchability ನಿವಾರಣೆಗೆ ಯಾರೂ ಪ್ರಯತ್ನಪಟ್ಟಿಲ್ಲ. ಅವರನ್ನು ದೇಶದಲ್ಲಿ ಉನ್ನತ ಮಟ್ಟಕ್ಕೆ ತರಲು ಪ್ರಯತ್ನಪಟ್ಟಿಲ್ಲ. ಸಾರ್ವಜನಿಕರು ಹರಿಜನರ ಬಾವಿಗಳಿಗೆ ಹೋಗುವ ಹಾಗಿಲ್ಲ. ಆರೀತಿಯಾದ ವಾತಾವರಣವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇನ್ನೂ ಕೆಲವುದಿವಸಗಳಲ್ಲಿ ಏನು ಅನಾಹುತವಾಗುತ್ತದೋ ಎಂದು ಹೇಳಲು ಸಾಧ್ಯವಾಗಿಲ್ಲ. ದೇಶದಲ್ಲಿ ಯಾವ ಒಂದು ತತ್ವವನ್ನು ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ಇಟ್ಟುಕೊಂಡಿದ್ದೇವೊ ಅದು ಸಂಪೂರ್ಣವಾಗಿಲ್ಲ. ಅಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಸುಗಮವಾಗಿ ನಡಿಸಿಕೊಂಡು ಬರಬೇಕು ಅದರ ಕಡೆಗೆ ತಮ್ಮ ಮನಸ್ಸನ್ನು ಹೆಚ್ಚಿಗೆ ಕೊಡಬೇಕು. ಗ್ರಾಮಾಭಿವೃದ್ಧಿ ಈಗಿನ ರೀತಿಯಲ್ಲಿ ಮುಂದುವರಿಯುವುದಾದರೆ ಈಗ ಒದಗಿಸಿರುವ ಮೊಬಲಗು ಸಾಲದು. ಬಹಳ ಕಡಮೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನಸಂಖ್ಯೆ ಇದೆ, ಎಷ್ಟು ಆದಾಯಬರುತ್ತದೆಯೆಂಬುದನ್ನು ನೋಡಿಕೊಂಡು ಅದಕ್ಕೆ ಪ್ರೊಪೋರ್ಷನೇಟಾಗಿ ಹಣವನ್ನು ಒದಗಿಸಿದ್ದಾರೆಯೇ ಎಂದರೆ ಅದೂ ಇಲ್ಲ. ನಗರಗಳಲ್ಲಿ ಮತ್ತು ಪಟ್ಟಣಗಳ ಆದಾಯವನ್ನು ಮತ್ತು ಅಲ್ಲಿರುವ ಜನಸಂಖ್ಯೆಯನ್ನು ನೋಡಿಕೊಂಡು ಆದಕ್ಕೆ ಅನುಗುಣ ವಾಗಿ ಹಣವನ್ನು ಕೊಡಬೇಕು ಎಂಬ ಯಾವುದೊಂದು ನೀತಿಯನ್ನು ಇಟ್ಟುಕೊಳ್ಳದೆ ಸುಮ್ಮನೆ ಜನರಿಗೆ ಅನಾನುಕೂಲಗಳನ್ನುಂಟು ಮಾಡುತ್ತಿದ್ದರೆ ಏನು ಪ್ರಯೋಜನ?

The House adjourned for Lunch at Three of the Clock, and re-assembled at Thirty Minutes past Three of the Clock.

[MR. DEPUTY SPEAKER in the Chair.]

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ವಾಮಿ, ಜನರ ಮೂಲಭೂತವಾದ ಬೇಡಿಕೆಗಳನ್ನು ಪೂರೈಸುವುದು ಸರ್ಕಾರದ ಆದ್ಯಕರ್ತವ್ಯ. ಜನರ ಸರ್ಕಾರವಿರುವಾಗ ಅವರ ಬೇಡಿಕೆಯನ್ನು ಸಮರ್ಪಕವಾಗಿ ನೆರವೇರಿಸುವುದು ಅವರ ಕೆಲಸ. ಆದರೆ ಈ ದಿವಸ ದೇಶದಲ್ಲಿರುವ ಜನಸಂಖ್ಯೆಯಲ್ಲಿ ಕಾಲುಭಾಗದಷ್ಟಿರುವ ಹರಿಜನರ ಆವಶ್ಯಕತೆ ಪೂರೈಕೆಯಾಗುತ್ತಿಲ್ಲ. ಅದಕ್ಕೆ ಹೆಚ್ಚು ವೆಚ್ಚವನ್ನು ಆದಷ್ಟುಮಟ್ಟಿಗೆ ಮಾಡಬೇಕು, ಸರಿಯಾಗಿ ಗಮನಕೊಡಬೇಕು, ಸರ್ಕಾರದ ದೃಷ್ಟಿ ಆ ಕಡೆ ಹೋಗಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ಕೊಳ್ಳೇಗಾಲ ತಾಲ್ಲೂಕು ಹರಿಜನ ಸೇವಕ ಸಂಘದ ಅಧ್ಯಕ್ಷನಾಗಿ ಸುಮಾರು ನಾಲ್ಕುವರ್ಷಗಳಿಂದ ಕೆಲಸಮಾಡಿ ಅವರ ವಿಷಯ ತಿಳಿದುಕೊಂಡಿದ್ದೇನೆ. ನಾಲ್ಕಾರು ಸಂಸಾರ ಒಂದೇ ಮನೆಯಲ್ಲಿ ವಾಸ ಮಾಡುತ್ತಾರೆ, ಜೀವನ ನಡೆಸುವುದು ಕಷ್ಟವಾಗಿದೆ. ಅವರಿಗೆ ಮನೆಕಟ್ಟುವುದಕ್ಕೆ ಜಾಗಬೇಕು, ಇತರ ಸೌಕರ್ಯವಾಗಬೇಕು ಎಂದು ಅರ್ಜಿ ಹಾಕಿದ್ದಾರೆ. ಅನೇಕಸಾರಿ ಅನೇಕಕಡೆ ಹಣ ಕೊಟ್ಟಿದ್ದಾರೆ ಆದರೆ ಸರ್ಕಾರದವರು ನಮ್ಮಕಡೆಗೆ ದೃಷ್ಟಿಯಿಟ್ಟು ಇಲ್ಲಿಯವರೆಗೂ ಸರಿಯಾದ ಯಾವ ವ್ಯವಸ್ಥೆಯನ್ನೂ ಮಾಡದಿರುವುದು ಶೋಚನೀಯವೆಂದು ಹೇಳುತ್ತಿದ್ದೇನೆ. ಸುಮಾರು ಹತ್ತು ವರ್ಷಗಳಿಂದ ಪ್ರಜಾಸರ್ಕಾರವಿದ್ದರೂ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಹರಿಜನರನ್ನು ಉತ್ತಮಸ್ಥಿತಿಗೆ ತರಲು ಸರ್ಕಾರ ಏಕೆ ಗಮನಕೊಟ್ಟಿಲ್ಲ, ಕಾರ್ಯಕ್ರಮ ತೆಗೆದುಕೊಂಡಿಲ್ಲ? ಈ ಸಲ 23 ಸಾವಿರ ರೂಪಾಯಿಗಳನ್ನು ಅಸ್ಪೃಶ್ಯತಾ ನಿವಾರಣೆಗಾಗಿ ಕೊಟ್ಟಿದೆ. ಆದರೆ ಅದು ಸಾಕೆ? ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು, ವ್ಯವಸಾಯ ಶಾಖೆ ಮಂತ್ರಿಗಳು ಹರಿಜನರಿಗೆ ಬೇಕಾದ ಅನುಕೂಲತೆಗಳನ್ನು ನಮ್ಮಕಡೆ ಒದಗಿಸಬೇಕೆಂದು ಒತ್ತಿಹೇಳಬೇಕಾಗಿದೆ. ಹರಿಜನರ ಪ್ರತಿನಿಧಿಗಳಾದ ಶ್ರೀ ಚೆನ್ನಿಗರಾಮಯ್ಯನವರು ನಮ್ಮಕಡೆ ಹಿಂದುಳಿದ ಪ್ರದೇಶಗಳಿಗೆ ಭೇಟಿಕೊಟ್ಟು ಇರುವ ಪರಿಸ್ಥಿತಿಯನ್ನು ಕಂಡು ಸೂಕ್ತ ಏರ್ಪಾಡುಮಾಡಬೇಕು. ಇಲ್ಲದಿದ್ದರೆ ಕನ್ನಡ ಜನ ಒಂದಾದರೆ ಸುಧಾರಣೆಯಾಗುತ್ತದೆಂದು ಭಾವಿಸಿದ್ದ ಜನರಲ್ಲಿ ಆ ಭಾವನೆ ಅಳಿಸಿಹೋಗುತ್ತದೆ. ಅದಕ್ಕೆ ಅವಕಾಶಕೊಡದಹಾಗೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆಮಾಡಬೇಕಾಗಿದೆ. ಅಲ್ಲದೆ ಇನ್ನು ಮುಂದುವರೆದು ಹೇಳಬೇಕಾದರೆ ನಿಮ್ಮ ಜವಾಬ್ದಾರಿಯನ್ನು ಈ ಒಂದು ದೃಷ್ಟಿಯಲ್ಲಿ ನಿಜವಾಗಿಯೂ ಸಮರ್ಪಕವಾಗಿ ಮಾಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ನಮ್ಮ ಮಾನ್ಯ ಮಿತ್ರರು ವ್ಯವಸಾಯದ ವಿಚಾರದಲ್ಲಿ ಅನೇಕ ವಿಷಯ ಹೇಳಿದರು. ನಮ್ಮ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಮದರಾಸು ಸರ್ಕಾರದಲ್ಲಿ ನಾವಿದ್ದಾಗ ವ್ಯವಸಾಯಗಾರರಿಗೆ ತಕಾವಿ ಸಾಲ

(ಶ್ರೀ ಜಿ. ವೆಂಕಟೇಗೌಡ)

ಕೊಡಬೇಕೆಂದು ಸುಮಾರು $1\frac{1}{2}$ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ನಾವು ಮೈಸೂರಿಗೆ ಬರುವುದಕ್ಕೆ ಮುಂಚೆ 500 ಅರ್ಜಿಗಳು ಪೆಂಡಿಂಗಿನಲ್ಲಿದ್ದವು. ತಕಾವಿಸಾಲ ಇನ್ನೂ ಬೇಕೆಂದು ಮನವಿಮಾಡಿದಾಗ ಇನ್ನೂ 5 ಸಾವಿರ ರೂಪಾಯಿಗಳನ್ನು ಮಂಜೂರು ಮಾಡುವ ಸಂದರ್ಭವಿತ್ತು. ಆದರೆ 2 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಾಲುವುದಿಲ್ಲ. ಅನೇಕರು ಅರ್ಜಿ ಹಾಕಿದ್ದಾರೆ. ಮದ್ರಾಸು ಸರ್ಕಾರದವರು ಯಾವ ರೀತಿ ಸುಧಾರಿಸುವುದಕ್ಕೆ ಪ್ರಯತ್ನಮಾಡಿದ್ದರೋ, ಅನುಕೂಲಮಾಡುವುದಕ್ಕೆ ಪ್ರಯತ್ನಮಾಡಿದ್ದರೋ ಅದೇರೀತಿ ಈಗಲೂ ಸಹಾಯವನ್ನು ಮುಂದುವರಿಸಬೇಕೆಂದು ಒತ್ತಾಯಮಾಡಬೇಕಾಗಿದೆ.

ಈಗ ಸುಮಾರು $1\frac{1}{4}$ ಲಕ್ಷ ದನಗಳಿವೆ. ಆದರೆ ನಮ್ಮ ಕಡೆ ಒಂದೇ ಒಂದು ವೆಟರ್ನರಿ ಆಸ್ಪತ್ರೆಯಿದೆ, ಸರಿಯಾದ ವ್ಯವಸ್ಥೆಯಿಲ್ಲ. ಮೊದಲು ಗ್ರಾಮಾಂತರ ಪ್ರದೇಶಗಳಿಗಾಗಿ ವೆಟರ್ನರಿ ಡಾಕ್ಟರಿದ್ದರು; ಈಗ ಅದೂ ಇಲ್ಲ; ಪಶುಗಳ ಸಂಖ್ಯೆ ಬೆಳೆಯುತ್ತಿದೆ. ಅದಕ್ಕನುಗುಣವಾಗಿ ಸರ್ಕಾರದವರು ಇನ್ನೂ ಆಸ್ಪತ್ರೆಗಳನ್ನು ಸ್ಥಾಪನೆಮಾಡಿ ಪಶು ಇಲಾಖೆಯಲ್ಲಿ ಸುವ್ಯವಸ್ಥಿತವಾದ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ. ಈ ದಿವಸ ರಾಜ್ಯಾಂಗ ಶಾಸನದಂತೆ ಗ್ರಾಮಾಭಿವೃದ್ಧಿಯಾಗಬೇಕಾದರೆ ಸಂಬಂಧಪಟ್ಟ ಕಾರ್ಯಗಳಿಗೆ ಹೆಚ್ಚು ಹೆಚ್ಚಾಗಿ ಮನ್ನಣೆಕೊಟ್ಟು ಕೆಲಸಮಾಡಬೇಕು. ಹಾಗೆ ಮಾಡಿದರೆ ದೇಶದ ಪ್ರಗತಿಯಾಗುತ್ತದೆ ಎಂದು ಹೇಳಿ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಲಕ್ಷಕೊಟ್ಟು ಹೆಚ್ಚು ಮೊತ್ತವನ್ನು ಈ ದಿವಸವೇ ಒದಗಿಸಬೇಕು. ಹಾಗೆ ಮಾಡದಿದ್ದರೆ ನಮ್ಮ ಮುಂದಿರುವ ಡಿಮ್ಯಾಂಡ್ ಮನವಿಯನ್ನು ಅಂಗೀಕರಿಸುವುದಕ್ಕಾಗುವುದಿಲ್ಲ, ಡಿಮ್ಯಾಂಡನ್ನು ಓಟಿಗೆ ಹಾಕುವಾಗ ನಾವು ಹೊರಕ್ಕೆ ಹೋಗಬೇಕಾಗುತ್ತದೆ ಎಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್ (ಹಿರೇಕರೂರು).—ಮಾನ್ಯ ಅಧ್ಯಕ್ಷರೆ, ವ್ಯವಸಾಯ ಖಾತೆ ಸಚಿವರು ವ್ಯವಸಾಯ ಖಾತೆಗೆ ಸಂಬಂಧಿಸಿದ ಬೇಡಿಕೆಯನ್ನೇನೊ ಮಂಡಿಸಿದ್ದಾರೆ. ಅದನ್ನು ಅನುಮೋದಿಸಿ ವ್ಯವಸಾಯ ಖಾತೆಗೆ ಸಂಬಂಧಪಟ್ಟ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ವ್ಯವಸಾಯ ಶಾಖೆಗಾಗಿ ಮಂಡಿಸಿರುವ ಬೇಡಿಕೆಯನ್ನು ಶಿಕ್ಷಣಶಾಖೆ ಬೇಡಿಕೆಯೊಡನೆ ಹೋಲಿಸಿ ನೋಡಿದರೆ ನಿಜವಾಗಿಯೂ ಅದು ಶಿಕ್ಷಣಶಾಖೆಗೆ ಖರ್ಚುಮಾಡುವ ಹಣದಲ್ಲಿ ಕಾಲುಭಾಗ ಸಹ ಇಲ್ಲ. ಈ ದಿವಸ ಶಿಕ್ಷಣದಲ್ಲಿ ಮುಂದುವರಿಯಬೇಕಾದ್ದು ಎಷ್ಟು ಅವಶ್ಯಕವೋ ವ್ಯವಸಾಯದಲ್ಲಿ ಮುಂದುವರಿಯಬೇಕಾದ್ದೂ ಅಷ್ಟೇ ಆವಶ್ಯಕ. ಮಾನ್ಯ ಆರ್ಥಿಕ ಸಚಿವರು ತಮ್ಮ ಆಯವ್ಯಯದ ಪತ್ರಿಕೆಯನ್ನು ಮಂಡಿಸುತ್ತಾ ರಾಜ್ಯದ ಪುರೋಭಿವೃದ್ಧಿಯಲ್ಲಿ ವ್ಯವಸಾಯದ ಉತ್ಪನ್ನ ಒಂದು ಮುಖ್ಯಪಾತ್ರ ವಹಿಸುತ್ತದೆಂದು ಹೇಳಿದ್ದಾರೆ. ಒಂದು ಮುಖ್ಯಪಾತ್ರ ಎಂದು ಹೇಳುವುದನ್ನು ಪ್ರಾಮುಖ್ಯವಾದ ಪಾತ್ರ ಎಂದು ನಾನು ಹೇಳುತ್ತೇನೆ. ವ್ಯವಸಾಯದ ಸಂಪತ್ತು ದೇಶದಲ್ಲಿ ಹೆಚ್ಚಿದೆಹೋದರೆ ಉಳಿದ ಅಭಿವೃದ್ಧಿ ಕಾರ್ಯಗಳನ್ನು ನಡಿಸಿಕೊಂಡು ಬರುವುದಕ್ಕೂ ಅಭಿವೃದ್ಧಿ ಯೋಜನೆಗಳನ್ನು ಕೈಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಈ ಅಭಿವೃದ್ಧಿಯಾಗಬೇಕಾದರೆ, ಒಕ್ಕಲತನದಲ್ಲಿ ಸಾಕಷ್ಟು ಪ್ರಗತಿಯಾಗಬೇಕಾದರೆ ಭೂಸುಧಾರಣೆಯಾಗಬೇಕಾದುದು ಆವಶ್ಯಕ. ಇದು ಮುಖ್ಯವಾದುದು. ಭೂಸುಧಾರಣೆ ಚೆನ್ನಾಗಿ ಆಗಬೇಕಾಗಿರುವಾಗ ಆರ್ಥಿಕ ಸಚಿವರು ಹೇಳಿದಂತೆ ಸಾಯಿಲ್ ಕನ್ಸರ್ವೇಷನ್‌ಗಾಗಿ 10 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಈ ಸಂಖ್ಯೆ, ಈ ಹಣ ನಿಜವಾಗಿಯೂ ಆ ಕೆಲಸಕ್ಕೆ ಸಾಲದೆಂಬ ಅಭಿಪ್ರಾಯವಿದೆ, ಭೂಮಿಯ ಸಾರವನ್ನು ಸತ್ವವನ್ನು ಕಾದಿಡಲಿಕ್ಕೆ ಸಾಕಷ್ಟು ಒದಗಿಸಿಲ್ಲವೆಂಬ ಭಾವನೆಯಿದೆ.

ಭೂಮಿ ಸಾಕಷ್ಟು ಫಲವತ್ತಾಗಬೇಕಾದರೆ ಭೂಮಿಯನ್ನು ಉಳಲು ಸಾಕಷ್ಟು ಟ್ರ್ಯಾಕ್ಟರುಗಳನ್ನು, ಹೊಸರೀತಿಯ ವ್ಯವಸಾಯದ ಉಪಕರಣಗಳನ್ನು ಒದಗಿಸಿದರೆ ಭೂಮಿಯನ್ನು ಹೆಚ್ಚಾಗಿ ಫಲವತ್ತು ಮಾಡುವುದಕ್ಕೆ ಸಾಧ್ಯ. ಈ ದೃಷ್ಟಿಯಿಂದ ನೋಡಿದರೆ ಆಯವ್ಯಯ ಪತ್ರಿಕೆಯಲ್ಲಿ ಟ್ರಾಕ್ಟರನ್ನು ಉಪಯೋಗಿಸುವುದಕ್ಕೆ ಮೀಸಲಾಗಿರುವ ಹಣ ಅತೀವ ಕಡಮೆ ಎಂಬ ಅಭಿಪ್ರಾಯವಿದೆ. ವ್ಯವಸಾಯದ ವಿಚಾರ ಸುಧಾರಿಸುವುದಕ್ಕೆ ರೈತರಿಗೆ ವ್ಯವಸಾಯಕ್ಕೆ ಬೇಕಾದ ಉಪಕರಣ ಒದಗಿಸಲು ಸರ್ಕಾರದ ಜವಾಬ್ದಾರಿಯಿದೆ. ಈ ಜವಾಬ್ದಾರಿ ನಿರ್ವಹಿಸಿ ರೈತರಿಗೆ ಸಾಕಷ್ಟು ದಕ್ಷತೆ ಒದಗಿಸಬೇಕಾದರೆ ಅವರ ಆವಶ್ಯಕತೆಗಳೇನಿವೆಯೋ ಅವನ್ನೆಲ್ಲಾ ಪೂರೈಸುತ್ತಾ ಹೋಗಬೇಕು. ರೈತರಿಗೆ (Farm Houses) ಕಟ್ಟಡ ಕಟ್ಟಿಕೊಳ್ಳುವುದಕ್ಕೆ ಬೇಕಾದ ಅನುಕೂಲ ಒದಗಿಸಿಲ್ಲ, ಬೇಕಾದ ವ್ಯವಸಾಯದ ಉಪಕರಣ ಒದಗಿಸಲು ಸರ್ಕಾರ ಸಾಕಷ್ಟು ಆಸಕ್ತಿ ವಹಿಸಿಲ್ಲ, ಅವರಿಗೆ ಬೇಕಾಗುವ ಕಬ್ಬಿಣದ ಸಾಮಾನು ವಗೈರೆ ಸಕಾಲಕ್ಕೆ ಸಿಕ್ಕದೆ ಕೊರತೆಯಾಗಿ ವ್ಯವಸಾಯಾಭಿವೃದ್ಧಿಗೆ ಅನಾನುಕೂಲವಾಗಿದೆ.

ಇನ್ನು ವ್ಯವಸಾಯದ ಆಡಳಿತ ವ್ಯವಸ್ಥೆಯ ನೀತಿಯನ್ನು ನೋಡಿದರೆ ತುಂಬ ಶೋಚನೀಯವಾಗಿದೆಯೆಂಬುದು ನನ ಭಾವನೆ. ಇಲ್ಲಿ ಬಹು ಮಂದಿ ಸದಸ್ಯರು ವ್ಯವಸಾಯವರ್ಗದಿಂದ ಬಂದಿದ್ದಾರೆಂದು ನನ್ನ ಕಲ್ಪನೆಯಿದೆ. ದೇಶದಲ್ಲಿ ನಿಜವಾಗಿಯೂ ವ್ಯವಸಾಯದಲ್ಲಿ ಸುಧಾರಣೆಯಾಗಬೇಕಾದರೆ ವ್ಯವಸಾಯದ ಇಲಾಖೆಯಲ್ಲಿರುವ ನೌಕರರು ಪ್ರತ್ಯಕ್ಷವಾಗಿ ಹಳ್ಳಿಗಾಡಿಗೆ ಅಥವಾ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರೊಡನೆ ಸಹಕರಿಸಿ ರೈತರಬೇಡಿಕೆಯೇನು ಎಂದು ನೋಡಿ ರೈತರ ಅಭಿವೃದ್ಧಿಯಾಗಿ ಅವರ ಹುಟ್ಟುವಳಿ ಹೆಚ್ಚಬೇಕಾದರೆ ಬೇಕಾಗುವಂಥ ಹೊಸ ಹೊಸ ಸುಧಾರಣೆಯೇನಿದೆಯೋ ಅದರ ಬಗ್ಗೆ ಸರಿಯಾಗಿ ತಿಳಿವಳಿಕೆ ಕೊಡುವುದು ಅವರ ಕರ್ತವ್ಯ. ಆದರೆ ವ್ಯವಸಾಯ ಶಾಖೆಯಲ್ಲಿರುವ ಎಷ್ಟೋ ನೌಕರರು ಗ್ರಾಮಾಂತರ ಪ್ರದೇಶಗಳಿಗೆ ಹೋಗದೆ ತಾಲ್ಲೂಕು ಹೆಡ್‌ಕ್ವಾಟರುಗಳಲ್ಲಿ ಅಥವಾ ಹೋಬಳಿಯಲ್ಲಿ ಅಥವಾ ಫಿರ್ಕಾದಲ್ಲಿ ನಿಂತುಕೊಂಡು ಪ್ರತಿ ದಿವಸ ಡೈರಿ ಬರೆಯುತ್ತಾರೆ. ನಿಜವಾಗಿಯೂ ಸರ್ಕಾರದಿಂದ ಬರುವ ವೇತನಕ್ಕೆ ತಕ್ಕಂತೆ ಕೆಲಸಮಾಡಿ ಜನರಿಗೆ ಸದುಪಯೋಗ ಮಾಡಿಕೊಡದೆ ತಮ್ಮ ಉದರ ನಿರ್ವಹಣೆಯಲ್ಲಿ ತೊಡಗಿದ್ದಾರೆ. ಸಂಬಳಕ್ಕಾಗಿ ಕೆಲಸ ಮಾಡುತ್ತಿರುವುದರಿಂದ ಅವರು ತಮ್ಮ ಕರ್ತವ್ಯ ನಿರ್ವಹಿಸುತ್ತಿಲ್ಲ. ಆದ್ದರಿಂದ ಸರ್ಕಾರದವರು ಈಕಡೆ ಲಕ್ಷ ಕೊಡುವಂತೆ ವ್ಯವಸಾಯ ಶಾಖೆಯಲ್ಲಿರುವ ನೌಕರರಿಗೆ ಸಲಹೆಯಿತ್ತು ರೈತರಿಗೆ ಸಹಾಯ ಮಾಡುವರೆಂದು ನಂಬುತ್ತೇನೆ.

ವ್ಯವಸಾಯಕ್ಕೆ ಸಂಬಂಧಪಟ್ಟ ಶಾಲಾ ಕಾಲೇಜುಗಳನ್ನು ಹೆಚ್ಚಾಗಿ ಪ್ರಾರಂಭಿಸಬೇಕೆಂದು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈ ರೀತಿಯಾದ ಶಾಲಾ

ಕಾಲೇಜುಗಳನ್ನು ಹೆಚ್ಚು ಮಾಡುವುದರಿಂದ ಈ ಶಾಲಾ ಕಾಲೇಜುಗಳಲ್ಲಿ ಓದಿದವರು ಗ್ರಾಮಗಳಲ್ಲಿ ವಾಸ ಮಾಡಿಕೊಂಡು ಹಳ್ಳಿಯ ಜನರಲ್ಲಿ ಬೆರೆತುಕೊಂಡು ಗ್ರಾಮದಲ್ಲಿರುವ ವ್ಯವಸಾಯಗಾರರಿಗೆ ತಮ್ಮ ಜ್ಞಾನದ ಅನುಭವ ಅದರ ಪ್ರತ್ಯಕ್ಷತೆ ಆಗುವ ಉದ್ದೇಶದಿಂದ ಕೆಲಸ ಮಾಡಿದರೆ ಹಳ್ಳಿಯ ಜನಗಳಿಗೆ ಸಹಾಯವಾಗುತ್ತದೆ. ನಿಜವಾಗಿಯೂ ಏನು ಶಿಕ್ಷಣವನ್ನು ಕೊಡುತ್ತಾರೆಯೋ ಅದು ಸಫಲವಾಗುವ ದೃಷ್ಟಿಯಿಂದ ಈ ಕೆಲಸಗಳನ್ನು ಕಾರ್ಯಗತ ಮಾಡುತ್ತೀರೆಂದು ನಂಬಿದ್ದೇನೆ. ಈ ಶಾಲೆಗಳಲ್ಲಿ ಕಲಿಯುವವರು ಈ ರೀತಿಯಿರಬೇಕೆಂದು ನನ್ನ ಅಭಿಪ್ರಾಯ. ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ರೀತಿಯ ಹುಟ್ಟುವಳಿ ಇದೆ, ಆ ಹುಟ್ಟುವಳಿಗೆ ಅನುಗುಣವಾಗಿ ಇಂತಹ ಶಿಕ್ಷಣ ಕೊಡುವುದರಿಂದ ಹೆಚ್ಚಿನ ಪ್ರಯೋಜನವಾಗುತ್ತೆಂದು ನನ್ನ ಭಾವನೆ.

ಇನ್ನು ಈ ವ್ಯವಸಾಯ ಇಲಾಖೆಯಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ದಕ್ಷತೆ ಬಗ್ಗೆ ಹೇಳುತ್ತ ಈ ಅಧಿಕಾರಿಗಳು ಸಾಕಷ್ಟು ಗ್ರಾಮಗಳನ್ನು ಸಂದರ್ಶಿಸಿ ಅತ್ತ ತೀವ್ರವಾದ ಲಕ್ಷ್ಯ ಕೊಟ್ಟು ಪೂರೈಸಬೇಕೆಂದು ಹೇಳುತ್ತೇನೆ.

ಸರ್ಕಾರದವರು ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ಮಂಡಿಸಿರುವ ಬೇಡಿಕೆಯನ್ನ ನೋಡಿದರೆ ಸಾಕಷ್ಟಿಲ್ಲ ಎಂದು ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ನನಗೆ ತಿಳಿದಂತೆ ಗ್ರಾಮಾಭಿವೃದ್ಧಿ ಕೆಲಸಕ್ಕೆ ಈಸಲ ಸರ್ಕಾರದವರು ಗ್ರಾಂಟನ್ನೂ ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಅದಕ್ಕಾಗಿ ಸರ್ಕಾರದಲ್ಲಿ ಸಾಕಷ್ಟು ಹಣವಿಲ್ಲವೆಂದು ಕೇಳುತ್ತೇನೆ. ಮುಂದಾದರೂ ಹೆಚ್ಚಿನ ಹಣ ಸಹಾಯವನ್ನು ಒದಗಿಸಿ ತಕ್ಕ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಗ್ರಾಮಗಳೇ ಹೆಚ್ಚಾಗಿರುವುದರಿಂದ ನಮ್ಮ ಹಳ್ಳಿಯ ಜನಗಳ ಜೀವನವನ್ನು ಉತ್ತಮಪಡಿಸಲು ಸಾಕಷ್ಟು ಸರ್ಕಾರ ಸಹಾಯ ಮಾಡಬೇಕಾಗಿದೆ. ಇನ್ನೂ ಸೌಲಭ್ಯಗಳನ್ನು ಹೆಚ್ಚಿಗೆ ಕೊಡಬೇಕು. ಹಳ್ಳಿಗಾಡಿನ ಜನರು ಹಿಂದೆ ಉಳಿದಿರುವುದರಿಂದ, ಪಟ್ಟಣದ ಜನರು ಅವರ ನೆರವಿಗೆ ಬರಬೇಕು. ಅವರಿಗೆ ಸೌಕರ್ಯಗಳನ್ನು ಒದಗಿಸುವುದರ ಮೂಲಕ ಗ್ರಾಮಾಭಿವೃದ್ಧಿ ಚೆನ್ನಾಗಿ ಆಗಬೇಕು ಎಂದು ನನ್ನ ಅಭಿಪ್ರಾಯ. ಈಗ ರೈತರಿಗೆ ಬೆಳೆದ ಹುಟ್ಟುವಳಿಗೆ ತಕ್ಕ ಬೆಲೆ ದೊರೆಯುತ್ತಿಲ್ಲ. ಸಕಾಲದಲ್ಲಿ ಅವರು ಬೆಳೆದ ಮಾಲು ಅಥವಾ ಹುಟ್ಟುವಳಿಗೆ ಸರಿಯಾದ ಪೇಟೆ ಕಾಣಬೇಕಾಗಿದೆ. ಹೀಗೆ ಗ್ರಾಮಾಂತರ ಪ್ರದೇಶಗಳಿಂದ ಬೆಳೆದ ಮಾಲನ್ನು ತರತಕ್ಕ ರೈತರಿಗೆ ಸರಿಯಾದ ಬೆಲೆ ಸಿಕ್ಕುವಂತೆ ತಕ್ಕ ಮಾರುಕಟ್ಟೆಗಳನ್ನು ಕಲ್ಪಿಸಬೇಕು.

ಅಲ್ಲದೆ ಇನ್ನೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಭಾವಿಗಳು ಬೇಕಾಗಿವೆ. ಅದರಲ್ಲೂ ಬಾಂಬೆ ಕರ್ಣಾಟಕದಲ್ಲಿ ಕುಡಿಯುವ ನೀರಿನ ಭಾವಿಗಳು ಸಿಕ್ಕುತ್ತಿಲ್ಲ. ಗ್ರಾಮಾಭಿವೃದ್ಧಿ ಮಾಡುವಾಗ ಸರ್ಕಾರ ಈ ಕಡೆಗೂ ಲಕ್ಷ್ಯ ಕೊಟ್ಟು ಸಹಾಯಮಾಡಬೇಕಾದುದು ಅಗತ್ಯ.

ಇನ್ನೊಂದು ಮುಖ್ಯವಾದ ವಿಷಯ ಹೇಳುವುದಿದೆ. ಬೆಳೆಯುತ್ತಿರುವ ಜನಸಂಖ್ಯೆಯ ಮಾನದಿಂದ ನಮ್ಮಲ್ಲಿ "ಗಾಂವ್‌ಠಾಣ" ಕಡಮೆಯಾಗುತ್ತಾ ನಡೆದಿದೆ. ಈಚೆಗೆ ಹಳ್ಳಿಗಳಲ್ಲಿ ಗಾಂವಠಾಣದ ಅಭಾವವಿದ್ದುದರಿಂದ ಊರಿನ ಸುತ್ತಲೂ ಮನೆಗಳನ್ನು ಕಟ್ಟಿಕೊಂಡು ಮೊದಲು ಮೂರು-ನಾಲ್ಕು ಕುಟುಂಬಗಳಿದ್ದ ಕಡೆ ಈಚೆಗೆ ಐದಾರು ಕುಟುಂಬಗಳು ವಾಸಮಾಡಬೇಕಾಗಿದೆ. ಇದರಿಂದ ಅಲ್ಲಿಯ ಜನಗಳ ಆರೋಗ್ಯ ಕೆಡುತ್ತಲಿದೆ. ಅದು ಅಲ್ಲದೆ ನಮ್ಮ ಹಳ್ಳಿಯ ಜನಗಳಿಗೆ ಕೆಲವು ಕಡೆ ದವಾಖಾನೆಗಳ ಸೌಕರ್ಯ ಸರಿಯಾಗಿ ಸಿಕ್ಕುತ್ತಿಲ್ಲ. ಈಕಡೆಗೆ ದವಾಖಾನೆಗಳು ಸಾಕಷ್ಟು ಇಲ್ಲದಿರುವುದರಿಂದ ಜನಗಳಿಗೆ ತುಂಬತೊಂದರೆಯಾಗಿದೆ. ಒಂದು ಗ್ರಾಮದ ಅಭಿವೃದ್ಧಿಗಾಗಿ ಅಲ್ಲಿಯ ಜನಗಳು ಅರ್ಜಿಕೊಡುವಾಗ ಇನ್ನೊಂದು ಗ್ರಾಮದವರೂ ಕೊಡುತ್ತಾರೆ. ಅಲ್ಲದೆ ಆಯಾಗ್ರಾಮಗಳ ಮುಖಂಡರಲ್ಲಿ ಬೇರೆ ಬೇರೆ ಪಂಗಡಗಳಿರುವುದರಿಂದ ಅವರವರ ಪಂಗಡದಕಡೆಯ ಹಳ್ಳಿಗಳಿಗೇ ಸಹಾಯ ದೊರೆಯಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಇದರಿಂದಾಗಿ ಯಾವ ಗ್ರಾಮವೂ ಸಾಕಷ್ಟುಭಾಗ ಮುಂದಕ್ಕೆಬರಲು ಸಾಧ್ಯವಿಲ್ಲ. ಮತ್ತು ಹಳ್ಳಿಯ ಜನರಿಗೆ ತಕ್ಕಸೌಕರ್ಯಗಳು ದೊರೆಯಲು ಸಾಧ್ಯವಿಲ್ಲ. ಸರಕಾರಕ್ಕೆ ನನ್ನದೊಂದು ಸಲಹೆ. ಸರಕಾರದವರು ತಾವೇ ಸ್ವತಃ ಗಾಂವುಠಾಣ ಜಾಗವನ್ನು ಹಳ್ಳಿಯ ಜನಗಳಿಗಾಗಿ ಅಕ್ವೈರುಮಾಡಿ ಕೊಡಿಸಿದರೆ ಹಳ್ಳಿಯಜನಗಳಿಗೆ ಅನುಕೂಲಮಾಡಿದಂತಾಗುತ್ತದೆ. ಇದಕ್ಕನುಗುಣವಾದ ಕಾಯಿದೆಯನ್ನು ಮಾಡಿದರೆ ಹಳ್ಳಿಗಳಿಗೆ ಹೆಚ್ಚಿನ ಉಪಯೋಗವಾಗುತ್ತದೆ, ಇದರಿಂದ ಗ್ರಾಮಾಭಿವೃದ್ಧಿಕಡೆಗೆ ಗಮನಕೊಟ್ಟಂತಾಗುತ್ತದೆ. ಇದು ಬಹಳ ಮುಖ್ಯವಾದುದು. ಈ ಕಡೆಗೆ ಸರಕಾರ ಲಕ್ಷ ಕೊಡಬೇಕೆಂದು ನನ್ನ ಸೂಚನೆ.

ಇನ್ನು ಗ್ರಾಮಾಭಿವೃದ್ಧಿಗಾಗಿ ಮುಂಬೈ ಕರ್ನಾಟಕದ ಕಡೆಗಳಲ್ಲಿ "Development Boards"—ಜಿಲ್ಲಾ ಮತ್ತು ತಾಲ್ಲೂಕು ಬೋರ್ಡುಗಳಿವೆ. ಈ ತಾಲ್ಲೂಕು ಬೋರ್ಡುಗಳಿಗೆ ಸರಕಾರದವರು ಆಗಾಗ್ಗೆ ಗ್ರಾಂಟುಗಳನ್ನುಕೊಟ್ಟು ಸಹಾಯಮಾಡುತ್ತಿದ್ದಾರೆ. ಆದರೆ ಆ ಹಣಸಹಾಯವನ್ನು ಸರಿಯಾಗಿ ಈಗ ಕೊಡುತ್ತಿಲ್ಲವೆಂದು ತಿಳಿದಿದೆ. ಇದರಿಂದ ಈ ಬೋರ್ಡಿನಿಂದಾಗುವ ಕೆಲಸಗಳು ಸರಿಯಾಗಿ ನಡೆಯುವುದಿಲ್ಲ. ಅದಕ್ಕಾಗಿ ಮಾನ್ಯ ಮಂತ್ರಿಗಳು ಸಾಕಷ್ಟು ಗ್ರಾಂಟುಗಳನ್ನು ಈ ಬೋರ್ಡುಗಳಿಗೆ ಕೊಡುವ ವ್ಯವಸ್ಥೆಮಾಡಬೇಕೆಂದು ಇಲ್ಲಿ ಕೇಳುತ್ತೇನೆ.

ಪ್ರಚಾರ ಶಾಖೆಯೆಂದು ಬಂದಿದೆ. ಈ ಪ್ರಚಾರ ಶಾಖೆಯು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ವ್ಯವಸಾಯದ ಕಾರ್ಯಕ್ರಮಗಳಲ್ಲಿ ಈಗ ಆಗುತ್ತಿರುವ ಹೊಸ ಹೊಸ ಸುಧಾರಣೆ, ಹೊಸ ಹೊಸ ಸೌಲಭ್ಯಗಳು ಏನಾಗಿವೆ, ಮತ್ತು ಯಾವ ರೀತಿಯಾಗಿ ಅಭಿವೃದ್ಧಿ ಮಾಡಿಕೊಳ್ಳಬೇಕು ಎನ್ನುವ ವಿಚಾರವನ್ನು ಹಳ್ಳಿಯ ಜನಗಳಲ್ಲಿ ಪ್ರಚಾರಮಾಡಬೇಕು. ಅದರಲ್ಲೂ ನಮ್ಮ ಬಾಂಬೆ ಕರ್ನಾಟಕದಲ್ಲಿರುವ ನಮ್ಮ ಭಾಗದಲ್ಲಿ ಈಗ ನಾಲ್ಕಾರು ವರ್ಷಗಳಿಂದಲೂ ಈ ರೀತಿಯ ಪ್ರಚಾರ ಕಾರ್ಯಗಳೇನೂ ಆಗಿಲ್ಲ. ಆದುದರಿಂದ ಈ ಪ್ರಚಾರ ಶಾಖೆಯವರು ಹಳ್ಳಿಗಳಿಗೆ ಹೋಗಿ ಈ ರೀತಿಯಾ ಪ್ರಚಾರದ ವ್ಯವಸ್ಥೆಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಇಲ್ಲಿ ನಾನು ಒತ್ತಾಯಮಾಡಬೇಕಾಗಿದೆ.

ವ್ಯವಸಾಯ ಶಾಖೆಯವರು ಕೈಕೊಂಡಿರುವ ಸಾಮೂಹಿಕ ಗಿಡನೆಡುವ ಯೋಜನೆಗಳಲ್ಲಿ ಆಡಳಿತದ ರೆವೆನ್ಯೂ ಇಲಾಖೆಯವರು ಭೂಮಿಯನ್ನು ಕೊಡುವುದು ಸಾಕಷ್ಟು ತಡವಾಗಿದೆ. ಸಾಮೂಹಿಕ ಯೋಜನೆಯ ಪ್ರಕಾರ ಗಿಡನೆಟ್ಟವರಿಗೆ ಸಕಾಲದಲ್ಲಿ ಸಬ್ಸಿಡಿ ಸಿಕ್ಕುವಂತೆ ವ್ಯವಸಾಯಶಾಖೆಯವರು ಅದಕ್ಕೆ ಸಂಬಂಧಪಟ್ಟ ಇಲಾಖೆಯವರಿಂದ ವ್ಯವಸ್ಥೆಮಾಡಬೇಕೆಂದು ಒತ್ತಾಯಮಾಡುತ್ತೇನೆ. ವ್ಯವಸಾಯ ಶಾಖೆಯಲ್ಲಿ ಹೆಚ್ಚಾಗಿ ಸುಧಾರಣೆಯಾಗಬೇಕಾಗಿದೆ. ಹಾಗೆ ಮಾಡಬೇಕು. ಮತ್ತು ಈಗ ಮಂಡಿಸಿರುವ ಬೇಡಿಕೆಯು

(ಶ್ರೀ ಜಿ. ಬಿ. ಶಂಕರರಾವ್)

ಹಣ ಬಹಳ ಕಡಮೆಯಿದೆ, ಆದಕಾರಣ ಇದಕ್ಕೆ ತಕ್ಕಷ್ಟು ಜವಾಬ್ದಾರಿಯಿಂದ ವ್ಯವಸಾಯ ಶಾಖೆಯವರು ವ್ಯವಸ್ಥೆಮಾಡಬೇಕೆಂದು ಹೇಳಿ ಈ ನಾಲ್ಕು ಮಾತುಗಳನ್ನಾಡಲು ಅವಕಾಶಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಬಿ. ಜಿ. ಖೋತ. (ಸದಲಗಾ).—ಮಾನ್ಯ ಅಧ್ಯಕ್ಷರೇ, ಶಕ್ಯವಿದ್ದಷ್ಟು ಮಾತನಾಡಬೇಕೆಂದಿದ್ದೇನೆ. ಕಾರಣ ಅವಕಾಶವು ಇಲ್ಲ. ಸ್ವಲ್ಪ ನಾನು ಮಾತನಾಡುವುದರಲ್ಲಿ ಅದರೊಳಗೆ ಮರಾಠೀ ಮತ್ತು ಕನ್ನಡ ಶಬ್ದಗಳು ಬೆರೆತಿರುತ್ತವೆ. ಅದರಿಂದ ತಾವು ಗಮನಕೊಟ್ಟು ಕೇಳಬೇಕಾಗಿ ಕೋರುತ್ತೇನೆ.

ಒಂದು ಮಹತ್ವವನ್ನು ಕೊಡಬೇಕಾದ ಪ್ರಶ್ನೆ ಇವೊತ್ತಿನ ದಿವಸ ಆಹಾರದ ಪ್ರಶ್ನೆ. ಅಂತಹ ಮುಖ್ಯವಾದ ವ್ಯವಸಾಯದ ಪ್ರಶ್ನೆಯ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳುವುದಕ್ಕಾಗಿ ಇಲ್ಲಿ ಮಂಡಿಸಿರುವ ಡಿಮ್ಯಾಂಡನ್ನು ಅನುಮೋದಿಸುವುದಕ್ಕಾಗಿ ನಾಲ್ಕು ಮಾತುಗಳನ್ನಾಡುವುದು ಯುಕ್ತವೆಂದೆನಿಸುತ್ತದೆ. ನಾನು ನನ್ನ ಸೂಚನೆಯನ್ನು ಮಂಡಿಸುವಾಗ ಸಭೆಯ ಕಾಲವನ್ನು ಎಂದರೆ 'Precious time of this Honourable House' ಹೆಚ್ಚಾಗಿ ತೆಗೆದುಕೊಳ್ಳುವುದಿಲ್ಲ. ನಮ್ಮ ಹಿಂದುಸ್ಥಾನ ಶೇತಕಿ (ವ್ಯವಸಾಯ) ಪ್ರಧಾನವಾದ ದೇಶ. ನಮ್ಮ ದೇಶದಲ್ಲಿ ಶೇತಕಿ ಸಂವರ್ಧನೆಯಾಗಬೇಕಾದರೆ ಏನು ಮಾಡಬೇಕೆಂಬ ದೃಷ್ಟಿಯಿಂದ ಆಲೋಚನೆಮಾಡೋಣ. ನನ್ನ ಅಭಿಪ್ರಾಯದಲ್ಲಿ Survey settlement of Land Records ಮಾಡುವಾಗ, lands should be made square or quadrangular as far as possible and wherever possible. ಇದರಿಂದ ಜನರಲ್ಲಿ ಅನೇಕ ತಂಟೆತಕರಾರುಗಳೂ ಲಿಟಿಗೇಷನ್ ವಗೈರೆ ನಿಲ್ಲುತ್ತವೆ. ಅಲ್ಲದೆ ಭೂಮಿಯಲ್ಲಿ ಟ್ರ್ಯಾಕ್ಟರು ಮುಂತಾದ ಯಂತ್ರೋಪಕರಣಗಳನ್ನು ಉಪಯೋಗಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, lands should be made square and quadrangular as far as possible and wherever possible. ಇದನ್ನು ಸೂಚನೆಮಾಡುತ್ತೇನೆ.

ಶೇತಕಿ ಕ್ರಮಬದ್ಧವಾದರೀತಿಯಲ್ಲಿ ನಡೆಯಬೇಕು. ಇಡೀ ಸ್ಟೇಟದೊಳಗೆ River Survey is necessary. ಆಗಬೇಕು-ಜಘನ್ಯ, ಮಧ್ಯಮ ಅಥವಾ ಉತ್ಕೃಷ್ಟರೀತಿಯ ಎಲ್ಲ ನದಿಗಳ ಸರ್ವೆ ಆಗಬೇಕು. ಇದು ಶೇತಕಿ ಸಂವರ್ಧನಕ್ಕೆ ಸಹಕಾರಿ. ಹೊಳೆ, ಹಳ್ಳ, ನಾಲೆ ವಗೈರೆ ಇವುಗಳಿಂದ ಜಮೀನು ನಾಶವಾಗಿದ್ದರೆ ಅದನ್ನೆಲ್ಲಾ ಸರಿಮಾಡುವುದಕ್ಕೆ ಏರ್ಪಾಡುಮಾಡಬೇಕು. Reclamation of eroded soil ಅಗತ್ಯ, ಇದನ್ನು ಸಂಶೋಧನಮಾಡಿ ಸರಿಯಾದ ರೀತಿಯಲ್ಲಿ ಮಾಡುವುದರಿಂದ ಆಹಾರ ಸಮಸ್ಯೆ ಪರಿಹಾರವಾಗುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ನಮ್ಮಲ್ಲಿ ಶೇಂಗಾ ಬೆಳೆಯುವ ಮಡ್ಡಿ ಜಮೀನು ಪುಷ್ಕಲವಾಗಿದೆ. ಈ ಜಮೀನದಲ್ಲಿ ನದಿಗಳಲ್ಲಿ ಇದ್ದಂಥ ಗಾಳ ಮಣ್ಣು ತಂದುಹಾಕಿ ಸಾಗುಮಾಡಿದರೆ ಆಹಾರ ಬೆಳೆಗಳನ್ನು ಬೆಳೆಯಬಹುದು ಇನ್ನೊಂದು ಮಾರ್ಗವೂ ಇದೆ. ಒಂದು ಭೂಮಿಯಿಂದ ಮಣ್ಣು ಕೊಚ್ಚಿಕೊಂಡು ಬಂದು ಇನ್ನೊಂದು ಕಡೆಬೀಳುತ್ತದೆ. ಅಡವಿಯಿಂದ ಬರುವ ಮಣ್ಣನ್ನು ಸಂಗ್ರಹ ಮಾಡಿ ಹಾಕಿದರೆ ಇದರಿಂದ ಹೆಚ್ಚು ಉಪಯೋಗವಾಗಬಹುದು. ಇದರ ವಿಷಯಗಳಲ್ಲಿ ಹೆಚ್ಚು ಗಮನ ತೆಗೆದುಕೊಳ್ಳಬೇಕು. ಇದರಿಂದ ಪುಷ್ಕಲ ಲಾಭ ಬರುತ್ತದೆ. ಇದಕ್ಕೆ ಹೆಚ್ಚು ಖರ್ಚಾಗುವುದಿಲ್ಲ. ಇದರಿಂದ ಒಂದು ಎಕರೆಗೆ 500 ರೂಪಾಯಿ ಬೀಳಬಹುದು. ಕಮ್ಯೂನಿಟಿ ಪ್ರಾಜೆಕ್ಟ್, ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಮ್‌ಗಳ ಮುಖಾಂತರ ಆಯಾಸ್ಥಾನಗಳಲ್ಲಿ ಕೆಲಸಮಾಡುವವರಿಂದಲೂ, ಲೋಕಲ್ ಬಾಡೀಜ್‌ಗಳಿಂದಲೂ, ಶಾಲೆ ಹುಡುಗರಿಂದಲೂ ಈ ಕೆಲಸಮಾಡಿಸಬಹುದು. ಈ ನಾನಾ ವಿಧಗಳಿಂದ ಹೆಚ್ಚಿನ ರೀತಿಯಲ್ಲಿ ಶೇತಕಿ ಸಂವರ್ಧನೆಮಾಡಬಹುದು. ಹೀಗೆ ಮಾಡಿದರೆ Co-operative farming ಸಾಧ್ಯ ಮತ್ತು ಇದನ್ನು ಮಾಡಬೇಕೆಂದು ಸರ್ಕಾರಕ್ಕೆ ನನ್ನ ಸಲಹೆ.

ನಮ್ಮ ದೇಶಕ್ಕೆ ಮಹತ್ವದ್ದಾಗಿರುವ ಮತ್ತು ನಮ್ಮ ಜನ ಅವಲಂಬನ ಮಾಡಿಕೊಂಡಿರುವ ಶೇತಕಿಗೆ ಕಾರಣಭೂತವಾದುದು ಗೋಸಂಪತ್ತು, ಎಂದರೆ, ದನಗಳು. Slaughter of animals should be strictly prohibited in the State. ಯಾವುದೇ ರೀತಿಯಲ್ಲಿಯೂ ದನಗಳ ಹತ್ಯೆನಿಲ್ಲಬೇಕು, ಕಸಾಯಿಖಾನೆ ನಿಲ್ಲಿಸಬೇಕು. ಇದರಿಂದ ಸರ್ಕಾರಕ್ಕೆ ದೋಷಬಂದರೂ ಚಿಂತೆಯಿಲ್ಲ, ಇದರಿಂದ ನಮ್ಮ ದೇಶದ ಶೇತಕಿ ಸಂವರ್ಧನೆಯಾಗುತ್ತದೆ. ಮಾಂಸಹಾರಿಗಳಿಗಿಂತಲೂ ಶಾಖಾಹಾರಿಗಳಿಗೆ ಆಹಾರ ಕಡಮೆಯಾಗುತ್ತದೆಂದು ಸರ್ಕಾರಕ್ಕೆ ನಾನು ಸರ್ಕಾರದ ವರದಿಯಪ್ರಕಾರವೇ ಹೇಳುತ್ತೇನೆ. ನಾನು ಹೇಳಿದ ಮಾರ್ಗಗಳನ್ನನುಸರಿಸಿದರೆ ಈ ಪ್ರಾಣಿಗಳನ್ನು ಕೊಲ್ಲುವುದರಿಂದ ಎಷ್ಟು ಆಹಾರ ಸಿಕ್ಕುತ್ತದೆಯೋ ಅದಕ್ಕಿಂತ ಹೆಚ್ಚು ಆಹಾರ ಅದನ್ನು ನಿಲ್ಲಿಸುವದರಿಂದ ಉತ್ಪತ್ತಿ ಮಾಡಬಹುದು. ಮಾಂಸಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದರಿಂದ ದೇಶಕ್ಕೆ ಹೆಚ್ಚುತೊಂದರೆಯಾಗುತ್ತದೆ. ಅಲ್ಲದೆ ಮಾಂಸಹಾರದಲ್ಲಿ ಎಷ್ಟು ಶಕ್ತಿ ಇರುತ್ತದೆಯೋ ಅದಕ್ಕೂ ಹೆಚ್ಚು ಶಾಕಾಹಾರದಿಂದ ಬರುತ್ತದೆ.

ನಾನು ಬಹಳ ಸಂಕ್ಷೇಪವಾಗಿ ಕೇವಲ points ಮಾತ್ರ ತಮ್ಮ ಮುಂದಿಡುತ್ತಿದ್ದೇನೆ. ನಾನು ಹೇಳಬೇಕಾಗಿರುವುದು ಇನ್ನೂ ಬೇಕಾದಷ್ಟಿದೆ, ಆದರೆ ಕಾಲ ಹೆಚ್ಚಾಗಿಲ್ಲ. ಅಂತೂ slaughtering of animals ಕಡಮೆ ಮಾಡಬೇಕು.

ಮತ್ತೊಂದು ಕಾರ್ಯಮಾಡಬೇಕಾಗಿರುವುದೇನೆಂದರೆ, ಗೋಸಂವರ್ಧನಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದು ಆಹಾರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಅತ್ಯಂತ ಮಹತ್ವದ ವಿಷಯ. ದನಗಳ ಸಂರಕ್ಷಣೆ ಹಾಗೂ ಸಂವರ್ಧನೆಗೆ ವೆಟರಿನರಿ ಆಸ್ಪತ್ರೆಗಳು ಹಳ್ಳಿಗಳಲ್ಲಿ ಅಲ್ಲಲ್ಲಿಗೂ ಅತಿ ಅಗತ್ಯ. ಇವುಗಳನ್ನೂ ಶೀಘ್ರ ಹೆಚ್ಚಿಸಬೇಕು. ಹೀಗೆ ನಾನು ಸೂಚಿಸಿರುವ ಎಲ್ಲ ಜಮೀನು ಮತ್ತು ಇತರ ಸುಧಾರಣೆಗಳನ್ನು ಕಾರ್ಯಗತಮಾಡಿದರೆ ಆಹಾರದ ಉತ್ಪತ್ತಿ ಹೆಚ್ಚಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, Money crops should be reduced and food crops must be increased. ಇದರಿಂದ ಆಹಾರಾಭಾವ ಪರಿಹಾರವಾಗುವದಕ್ಕೆ ತಕ್ಕಮಟ್ಟಿಗೆ ಅನುಕೂಲವಾಗುವದು.

4 P.M.

The land holders must be asked to grow more food crops than money crops. ಎಂದರೆ ಯಾರು ಯಾವ ಬೆಳೆಯನ್ನೇ ಬೆಳೆಯಲಿ ಆದರೆ ಪ್ರತಿಯೊಬ್ಬ ವ್ಯವಸಾಯಗಾರನೂ ಅಗದಿ ತನ್ನ ಮನೆಗಾಗುವಷ್ಟು ಆಹಾರ ಧಾನ್ಯಗಳನ್ನಾದರೂ ಬೆಳೆಯಲೇಬೇಕೆಂದು ಕಡ್ಡಾಯಮಾಡಬೇಕು. ಹಾಗೆ ಕಡ್ಡಾಯ

ಮಾಡಿ ಈ ಆಹಾರ ಧಾನ್ಯಗಳ ಬೆಳೆಗೆ ಹೆಚ್ಚಿನ ನಿಗಾ ಕೊಡದೆಹೋದರೆ these money crops will ruin the food crops. ಆದ್ದರಿಂದ ಆಹಾರ ಧಾನ್ಯಗಳನ್ನು ಜಾಸ್ತಿ ಬೆಳೆಯುವಂತೆಯೂ ಮನಿಕ್ರಾಪ್ಸ್ನ್ನು ಕಡಮೆ ಬೆಳೆಯುವಂತೆಯೂ ನೋಡಿಕೊಳ್ಳಬೇಕು. ಹೀಗೆ ಆಹಾರ ಧಾನ್ಯಗಳ ಉತ್ಪತ್ತಿಯನ್ನು ಜಾಸ್ತಿಆಗುವಂತೆ ಮಾಡಲು ಯೋಗ್ಯ ರೀತಿಯಲ್ಲಿ ಅದಕ್ಕೆ ತಕ್ಕ ಸಲಕರಣೆಗಳನ್ನೂ ಸೌಲಭ್ಯಗಳನ್ನೂ ರೈತರಿಗೆ ಸರ್ಕಾರದವರು ಒದಗಿಸಿಕೊಡಬೇಕು. ನಮಗೀಗ ಈ ಬಾಬಿನಲ್ಲಿ ಒಂದು ದೊಡ್ಡ ಸಮಸ್ಯೆ ಬಂದು ಕೂತಿದೆ. ಈ ವ್ಯವಸಾಯದ ಕಸುಬನ್ನು ನಮ್ಮ ಜೀವಿತವನ್ನೂ ಅನಾದಿ ಕಾಲದಿಂದಲೂ ನಾವು ಹೀಗೆ ನಡೆದುಕೊಂಡು ಬಂದಿದ್ದೇವೆ. ಆದರೆ ಈ ವ್ಯವಸಾಯದ ಅಭಿವೃದ್ಧಿ ಹೆಚ್ಚಾಗಿ ಸಂಶೋಧನೆಯ ಮೇಲೆಯೇ ಅವಲಂಬಿಸಿದೆ. ಈ ಹಿಂದೆ ಬ್ರಿಟಿಷರ ಅಡಳಿತದಲ್ಲಿ ಈ ಬಾಬನ್ನು ಬಹಳ ಉಪೇಕ್ಷೆ ಮಾಡಲಾಗಿತ್ತು. ಆದರೆ ಆ ಕಾಲದಲ್ಲಿ ವ್ಯವಸಾಯದ ಬಾಬಿಗೆ ಒಂದು ಹೆಚ್ಚಿನ ನಿಗಾ ಕೊಡಲು ಆಗಿನ ಕಾಲದಲ್ಲಿ ಈಗಿನಂಥ food problem ಯಾವುದೂ ಉದ್ಭವಿಸಿರಲಿಲ್ಲ. ಆಗಿನ ಕಾಲದಲ್ಲಿ ಜನರಿಗೆ ಸುಖ ಜೀವನವಿತ್ತು. ಆದರೆ ಈ ದಿವಸಗಳಲ್ಲಿ ಸಹ ಜನರು ಅದೇ ರೀತಿ ತಮ್ಮ ಹೊಟ್ಟೆಗಾಗಿ ಹೆಚ್ಚು ದುಡಿತ ಮಾಡದೆ ತಮ್ಮ ಹೊಟ್ಟೆ ತುಂಬಿಕೊಳ್ಳಬೇಕೆಂಬ ಇರಾದೆಯುಳ್ಳವರಾಗಿದ್ದಾರೆ. ಆದರೆ ಮನುಷ್ಯನ ಪ್ರಾಣ ಹೆಚ್ಚಾಗಿ ಇತರ ಬೆಳೆಗಳ ಮೇಲಿಲದೆ, ಅನ್ನದ ಬೆಳೆಯ ಮೇಲಿರುತ್ತದೆ. ಜನರು ಬಾಯಿನಲ್ಲಿ ದುಡಿಯಬೇಕೆಂದು ಹೇಳುತ್ತಿದ್ದಾರೆ ಅಷ್ಟೇ; ಆದರೆ ಕಾರ್ಯತಃ (practically) ಆ ರೀತಿ ಯಾರೂ ಕೆಲಸಮಾಡುತ್ತಿಲ್ಲ. ಆದರೆ ಈ ಪ್ರಶ್ನೆ ಅನೇಕರನ್ನು ಅವಲಂಬಿಸಿರುತ್ತದೆ. ಎಲ್ಲರೂ ಸ್ವತಃ ದೇಹದಂಡಿಸಿ ಕೆಲಸ ಮಾಡಲೇಬೇಕು. ಬರಿ ಪ್ರಚಾರದಿಂದ ಏನೂ ಪ್ರಯೋಜನವಿಲ್ಲ. ಸದ್ಯದ ಸುಶಿಕ್ಷಿತ ಪದವೀಧರರು ಸರಕಾರೀ ನೋಕರಿಗಳನ್ನು ಅಪೇಕ್ಷಿಸದೆ ತಮ್ಮ ಜ್ಞಾನ ಬಲದಿಂದ ಯಾಂತ್ರಿಕ ಸಹಾಯದಿಂದ ಹಾಗೂ ಶಾರೀರಿಕ ಶ್ರಮದಿಂದ ಈ ವ್ಯವಸಾಯವನ್ನು ಯೋಗ್ಯ ರೀತಿಯಿಂದ ಮಾಡಿದಲ್ಲಿ ಶೇತಕಿ ಉತ್ಪಾದನೆ ಹೆಚ್ಚುವುದಲ್ಲದೆ ಬೇಕಾರಿ ಹಾಗೂ ಆಹಾರ ಸಮಸ್ಯೆಗಳೆರಡೂ ನಿವಾರಣೆಯಾಗಬಹುದು. ಈ ನಮ್ಮ ದೇಶದಲ್ಲಿ ಸಾಕಷ್ಟು ಶೇತಕೀ ಇದೆ.

ಶ್ರೀ ಹೆಚ್. ಎಸ್. ರುದ್ರಪ್ಪ.—ಆದರೆ ಜನ ಆ ರೀತಿ ಕೆಲಸಮಾಡುತ್ತಿಲ್ಲ.

ಶ್ರೀ ಬಿ. ಜಿ. ಖೋತ.—ಹಳೆಯ ಪದ್ಧತಿಯ ಪ್ರಕಾರವೇ ನಾವು ಈಗಲೂ ಈ ಷಿಕ್ಕಿ ಕೆಲಸ ನಡೆಸಿಕೊಂಡು ಹೋದರೆ ಜನರು ಸುಖವಾಗಿ ಜೀವನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಈ ಅಗ್ರಿಕಲ್‌ಚರಲ್ ಬಾಬಿನಲ್ಲಿ ಹಳೆಯ ಸಂಪ್ರದಾಯಗಳನ್ನು ಬಿಟ್ಟು ಹೊಸ ಜ್ಞಾನವನ್ನು ಪಡೆಯಬೇಕು. ಆ ರೀತಿ ಸಂಶೋಧನಾಲಯಗಳನ್ನು ತೆರೆದು ವ್ಯವಸಾಯಗಾರರು ಈ ಬಾಬಿನಲ್ಲಿ ಹೆಚ್ಚು ಅನುಕೂಲ ಪಡೆಯುವ ರೀತಿಯಲ್ಲಿ ಕೆಲಸಮಾಡಬೇಕಾಗಿದೆ. ಈ ಭಾಗದಲ್ಲಿ ಸರ್ಕಾರದವರು ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡಬೇಕು. ರೈತರಿಗೆ ಸಾಕಷ್ಟು ಸಹಾಯ ಸರ್ಕಾರದಿಂದ ದೊರೆಯುತ್ತಿಲ್ಲವಾದ್ದರಿಂದಲೂ ಅವರ ಬೆಳೆಗೊಂದು ಸಂರಕ್ಷಣೆ ಇಲ್ಲದಿರುವುದರಿಂದಲೂ ಈ ದಿವಸ ರೈತನ ಕಸುಬಿಗೆ ಒಂದು ಮಹತ್ವವಿಲ್ಲದೆ ಹೋಗಿದೆ. ಇದರಿಂದ ವ್ಯಾಪಾರಿ ಹೆಚ್ಚು ಹಣ ಸಂಗ್ರಹಣೆಮಾಡಲು ಅನುಕೂಲವಾಯಿತು. ಆದ್ದರಿಂದ ಸರ್ಕಾರದವರು ರೈತನಿಗೆ ಎಲೆಕ್ಟ್ರಿಸಿಟಿ ಸೌಕರ್ಯಗಳನ್ನು ಅಗ್ರಿಕಲ್‌ಚರಲ್ ಇಂಪ್ಲಿಮೆಂಟ್ಸುಗಳನ್ನೂ ಇರಿಗೇಷನ್ ಪ್ರಾಜೆಕ್ಟ್‌ಗಳನ್ನೂ co-operative farming and agricultural industries ಗಳನ್ನೂ ಮತ್ತು ಅವರ ಬೆಳೆಗಳಿಗೆ ಯೋಗ್ಯ ಧಾರಣೆ ಮತ್ತು ಮಾರಾಟಗಳ ಸೌಕರ್ಯಗಳನ್ನೂ ಒದಗಿಸಿ ಚಾಲ್ತಿಯಲ್ಲಿ ಅವರಿಗೆ ಅನುಕೂಲ ಉಂಟುಮಾಡಿಕೊಡಬೇಕು. ಇದರಿಂದ ವ್ಯಾಪಾರಿಗೆ ಹೆಚ್ಚು ಲಾಭ ಪಡೆಯಲು ಅವಕಾಶವಿರುವುದಿಲ್ಲ. The merchants must be prevented from making huge profits and agriculturists must be given all such abovesaid advantages and facilities. ಹೀಗೆ ಸರ್ಕಾರದವರು ವ್ಯವಸಾಯಗಾರರಿಗೆ ಹೆಚ್ಚು ಅನುಕೂಲಗಳನ್ನು ಒದಗಿಸಿಕೊಟ್ಟರೆ ಆಹಾರ ಧಾನ್ಯಗಳ ಕೊರತೆ ಕಡಿಮೆಯಾದೀತು ಅಲ್ಲದೆ, ಒಕ್ಕಲಿಗನ ದಾರಿದ್ರ್ಯವೂ ಕಡಿಮೆ ಆಗುವದು. ಈ ಸಂದರ್ಭದಲ್ಲಿ ನಾನು ಸರ್ಕಾರದವರಿಗೆ ಒತ್ತಾಯ ಮಾಡುವುದೇನೆಂದರೆ ಕೋ-ಆಪರೇಟೀವ್ ಫಾರ್ಮಿಂಗು ಗಳನ್ನು ಮತ್ತು ಮಾರ್ಕೆಟಿಂಗ್ ಸೌಕರ್ಯಗಳನ್ನು ಹೆಚ್ಚಾಗಿ ಒದಗಿಸಬೇಕು ಎಂದು. ರೈತನ ಧಾನ್ಯಗಳ ದಾಸ್ತಾನಿಗಾಗಿ ವೇರ್‌ಹೌಸ್, ಗೋಡೌನು, ಕಾರ್ಪೊರೇಷನ್ ಇತ್ಯಾದಿಗಳನ್ನು ಹೆಚ್ಚಾಗಿ ತೆರೆಯಬೇಕು. ಆದರೆ ಈ ದಿವಸ ಸರ್ಕಾರದವರು ರೈತನಿಗೆ--ವ್ಯವಸಾಯಗಾರನಿಗೆ ಈ ಸೌಲಭ್ಯಗಳನ್ನೊದಗಿಸಿಕೊಡದಿರುವುದು ಮತ್ತೊಂದು ದೊಡ್ಡ ಲೋಪದೋಷ. ಇದನ್ನು ನಿವಾರಣೆಮಾಡಲು ಈಗ ಸರ್ಕಾರದವರು ಇತ್ತಕಡೆ ಹೆಚ್ಚಿನ ನಿಗಾಕೊಡಬೇಕು. ಆದರೆ ಈ ದಿವಸ ಸರ್ಕಾರದವರು ಮಾರ್ಕೆಟಿಂಗ್ ಸೊಸೈಟಿಗಳನ್ನು ತೆರೆಯಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿರಬಹುದು. ಆದರೂ ಅವರಿಗೆ ಏನೂ ಪ್ರಯೋಜನವಾಗಿಲ್ಲ. ಏಕೆಂದರೆ ಸರ್ಕಾರದವರು ತಮ್ಮ ಕೈಲಿ ಇರತಕ್ಕ ಸರಕಿಗೆ ತಕ್ಕಷ್ಟು ಗಿರಾಕಿಗಳನ್ನಿಟ್ಟುಕೊಂಡಿಲ್ಲ. ಈ ವಿಚಾರದಲ್ಲಿ ನನಗೆ ಚಾಲೀಸ್ (40) ವರ್ಷದ ಅನುಭವದಿಂದ ಈ ವಿಚಾರಗಳನ್ನು ಹೇಳುತ್ತಿದ್ದೇನೆ. ಮಾರ್ಕೆಟಿಂಗ್ ವ್ಯವಸ್ಥೆಯನ್ನು ಸರ್ಕಾರದವರು ತಮ್ಮ ಕಡೆಗೆ ತೆಗೆದುಕೊಳ್ಳಬೇಕು. ಮಾಲನ್ನು ಕೊಳ್ಳುವ ಗಿರಾಕಿಗಳನ್ನು ಸರ್ಕಾರದವರೇ ಕ್ಯಾಪ್‌ಚರ್ ಮಾಡಬೇಕು. ದಲಾಲಿಗಳ ಕೈಗೆ ಇದನ್ನು ಬಿಟ್ಟರೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಹಾಕಿದ್ದರೂ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಅವರ ಮಾಲುಗಳಿಗೆ ತಕ್ಕಷ್ಟು ಗಿರಾಕಿಗಳನ್ನು ಪಡೆಯುವ ತಾಪೇದಾರಿಯನ್ನು ಅವರು ತಮ್ಮ ವಶಕ್ಕೇ ತೆಗೆದುಕೊಳ್ಳಬೇಕು. ರೈತನಿಗೆ ಅವನ ದರ್ಜೆಗೆ ತಕ್ಕ ಹಾಗೆ ಸುಲಭವಾಗಿ ಸಾಲ ದೊರೆಯುವ ವ್ಯವಸ್ಥೆಮಾಡಬೇಕು. ಅನವಶ್ಯಕವಾದ ವೇಸ್ಟೇಜನ್ನು ತೆಗೆದು ಹಾಕಬೇಕು. Co-operative farming is only possible by Co-operative Industry. ಇವೆರಡಕ್ಕೂ ಒಂದು ಅನ್ಯೋನ್ಯ ಸಂಬಂಧವಿದೆ. ಇವುಗಳ ಔನತ್ಯ ಅಥವಾ ಉನ್ನತಿ ಒಂದನ್ನೊಂದು ಅವಲಂಬಿಸಿವೆ. ಆದುದರಿಂದ Co-operative farming and Co-operative Industry must be developed side by side. ಆಗ ಇವೆರಡೂ ಹೆಚ್ಚು ಯಶಸ್ವಿಯಾಗಿ ಬೆಳೆದು ಆ ಮೂಲಕ food situation ಅನುಕೂಲವಾಗುತ್ತದೆ. ಈವರೆಗೂ ನಮಗೆ ವಿಶೇಷವಾಗಿ ಆಹಾರ ಧಾನ್ಯಗಳನ್ನು ಸರಬರಾಯಿಮಾಡುತ್ತಿದ್ದಂಥ ಬ್ರಹ್ಮದೇಶ ಪಾಕೀಸ್ಥಾನಗಳೆಲ್ಲ ಈಗ ನಮ್ಮ ಕೈಬಿಟ್ಟು ಹೋದವು. ಅಲ್ಲಿಂದ ನಮಗೀಗ ಆಹಾರ ಧಾನ್ಯಗಳು ಬರುವ ಪ್ರಶ್ನೆ ನಿಂತು ಹೋಗಿದೆ. ಆದ್ದರಿಂದ ಈಗ ನಾವು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯದಿದ್ದರೆ ನಮಗೆ ಆಹಾರದ ಕೊರತೆ ಇನ್ನೂ ಅಧಿಕವಾಗುತ್ತದೆ.

(ಶ್ರೀ ಬಿ. ಜಿ. ಖೋತ)

ಆದರೆ ಯಾವ ಯಾವ ಕ್ರಮರ್ಷಿಯಲ್ ಧಾನ್ಯಗಳು ಎಲ್ಲೆಲ್ಲಿ ವಿಶೇಷವಾಗಿ ಬೆಳೆಯುತ್ತವೋ ಅಲ್ಲಿ ಸರ್ಕಾರದವರು ಆಯಾ ಸೆಂಟರುಗಳನ್ನು ತೆರೆದರೆ ಒಳ್ಳೆಯದು. ಹೀಗೆ ಮಾಡಿ ಅಗ್ರಿಕಲ್‌ಚರಿಸ್ಟ್‌ಗಳಿಗೆ ಅನುಕೂಲ ಮಾಡಿ ಕೊಡಿ ಎಂದು ಹೇಳುತ್ತೇನೆ. ಇನ್ನು ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಶಕ್ಯವಿದ್ದಲ್ಲೆಲ್ಲ Water transport ಇಟ್ಟುಕೊಂಡರೆ ಬಹಳ ಲಾಭದಾಯಕವಿರುತ್ತದೆ. ರೋಡ್ ಟ್ರಾನ್ಸ್‌ಪೋರ್ಟಿಗಿಂತಲೂ ಇದರಲ್ಲಿ ಹೆಚ್ಚಿನ ಅನುಕೂಲವಿದೆ. Water transport will be cheaper, sooner and more convenient than road transport. ಆದ್ದರಿಂದ ಸರ್ಕಾರದವರು ಇದಕ್ಕೆ ಹೆಚ್ಚು ಗಮನಕೊಡಬೇಕು. Water transport will be more helpful for co-operative industry. ಇನ್ನು ಈ ಪ್ರಾಜೆಕ್ಟ್‌ಗಳ ವಿಚಾರದಲ್ಲಿ, big industry and projects ಗಳನ್ನು ಪ್ರಾರಂಭಿಸುವ ಆತುರದಲ್ಲಿ small industries and projects ಗಳನ್ನು ಕೈಬಿಡಬಾರದು. Wherever small projects are possible they should be undertaken immediately because they are more beneficial to the needy people. ನಮ್ಮ ರಾಜ್ಯದಲ್ಲಿ ಈಗ ಸರ್ಕಾರದವರು ಅಗ್ರಿಕಲ್‌ಚರಲ್ ಕಾಲೇಜುಗಳನ್ನು ಹೆಚ್ಚು ಮಾಡಬೇಕು. ನಮ್ಮ ಭಾಗವನ್ನು ಈ ಎಲ್ಲ ವಿಚಾರಗಳಲ್ಲೂ ನೆಗ್ಲೆಕ್ಟ್ ಮಾಡಲಾಗಿದೆ. Though my taluk (Chikkodi) is in more need in the State, I wish to bring to the notice of this House that it is totally neglected. ಈಗಲಾದರೂ ಸರ್ಕಾರದವರ ಗಮನ ಇದರ ಕಡೆಗೆ ಹೋಗಬೇಕು. ನಮ್ಮ ತಾಲ್ಲೂಕಿನಲ್ಲಿರುವ ದೂದ್ ಗಂಗಾ ರಿವರ್ ವ್ಯಾಲಿ ಪ್ರಾಜೆಕ್ಟ್ ಕಾರ್ಯವನ್ನು ಕೈಕೊಳ್ಳಬೇಕೆಂದೂ ಅಲ್ಲಿಗೆ ರೋಡ್ ಟ್ರಾನ್ಸ್‌ಪೋರ್ಟ್ ಸೌಕರ್ಯ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ನನ್ನ ಸೂಚನೆ ಇಷ್ಟೇ. ನಮ್ಮ ಪಾರ್ಟಿಯಿಂದ ಅಧ್ಯಕ್ಷರ ಅಭಿಪ್ರಾಯದ ಪ್ರಕಾರ ಪ್ರತಿನಿತ್ಯವೂ ನಮ್ಮಲ್ಲಿ ಮಾತನಾಡುವವರ ಒಂದು ಪಟ್ಟಿಯನ್ನು ಕೊಡಲಾಗುತ್ತಿತ್ತು. ಆ ಪಟ್ಟಿಯಂತೆ ನೋಡಿದರೆ ಇದುವರೆಗೆ ಒಬ್ಬರಿಗೆ ಮಾತ್ರ ಮಾತನಾಡಲು ಅವಕಾಶ ಕೊಡಲಾಗಿದೆ. ಇನ್ನೂ ನಮ್ಮಲ್ಲಿ ಆರು ಜನರಿಗೆ ಯಾವಾಗ ಅವಕಾಶಕೊಡುತ್ತಿರೆಂಬುದೇ ನನಗೆ ಗೊತ್ತಾಗುವುದಿಲ್ಲ. ತಾವು Rou tine ರೀತಿಯಲ್ಲಿ ಕೊಡುತ್ತಾ ಬಂದರೆ ಇಬ್ಬರು ಮೂವರಿಗೆ ಮಾತ್ರ ಅವಕಾಶ ಸಿಕ್ಕುತ್ತದೆ ಅಷ್ಟೆ. ಆದ್ದರಿಂದ ನಾವು ಪಟ್ಟಿಯಲ್ಲಿ ಕೊಟ್ಟಿರುವವರೆಲ್ಲರಿಗೂ ಅವಕಾಶ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಹಾಗಾದರೆ 5 ನಿಮಿಷಗಳು ಇಡೋಣವೆ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಇದಕ್ಕಾಗಿಯೇ ನಾವು ಅಧ್ಯಕ್ಷರಿಗೆ ಇನ್ನೊಂದು ಸೂಚನೆಯನ್ನು ಕೊಟ್ಟಿದ್ದೆವು. ನಮ್ಮ ಪಾರ್ಟಿಗೆಂದು ಕನಿಷ್ಠ ಪಕ್ಷ 1½-2 ಘಂಟೆಗಳನ್ನು ಕೊಟ್ಟರೆ ಅದನ್ನು ನಾವು ನಾವೇ ಹಂಚಿಕೊಂಡು ಮಾತನಾಡುವ ಏರ್ಪಾಡು ಮಾಡಿಕೊಳ್ಳುತ್ತಿದ್ದೆವು. ನಮ್ಮ ಪಾರ್ಟಿಯವರಿಗೆ 1½ ಘಂಟೆ ಕೊಟ್ಟು ಆ ಕಡೆಯವರಿಗೆ 2½ ಘಂಟೆ ಕೊಡಿ, ನಮಗೇನೂ ಆ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ದಯಮಾಡಿಟ್ಟು ನಮ್ಮ ಪಟ್ಟಿಯ ಪ್ರಕಾರ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಆದಷ್ಟು ಮಟ್ಟಿಗೆ, ತಮ್ಮನ್ನು accommodate ಮಾಡುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ಪಟ್ಟಿಯನ್ನು ಕೊಡುವುದಕ್ಕೆ ಮುಂಚೆ ನಮ್ಮ ಕಡೆಯವರಿಗೆ ಪ್ರತಿದಿವಸವೂ 10-12 ಜನರಿಗೆ ಅವಕಾಶ ಸಿಕ್ಕುತ್ತಿತ್ತು. ಈಗ ಅದಕ್ಕೂ ಕಡಮೆಯಾಗಿದೆ.

ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಮಾನ್ಯ ಸಭಾಪತಿಗಳೇ, ಈ ಮಾನ್ಯ ಸಭಾಗೃಹದ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುವೆ. ನೂತನ ಕರ್ಣಾಟಕದ ಎರಡು ಕೋಟಿ ಜನರಲ್ಲಿ ಹಳ್ಳಿಯಲ್ಲಿರುವ ರೈತರ ಸಂಖ್ಯೆ ಹೆಚ್ಚು. ಕರ್ಣಾಟಕದ ಸುಧಾರಣೆಯಾಗಬೇಕಾದರೆ ರೈತರ ಸುಧಾರಣೆಯಾಗಬೇಕು. ಅವರ ಕೆಲಸಕ್ಕೆ ಸಹಾಯ ಮಾಡುವ ಹಳ್ಳಿಯ ದುಡಿಮೆಗಾರರ ಸುಧಾರಣೆಯಾಗಬೇಕು. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ಕರ್ಣಾಟಕದ ರೈತ ಬಾಂಧವರಿಗೆ ಇರುವ ತೊಂದರೆಗಳೆರಡು. ಒಂದು ಅನ್ನದ ಕೊರತೆ, ಇನ್ನೊಂದು ವಿದ್ಯೆಯ ಕೊರತೆ. ಇವೆರಡು ತೊಂದರೆಗಳು ದೂರವಾಗದ ವಿನಾ ಜಗತ್ತಿನ ಯಾವುದೇ ತರದ ಸುಧಾರಣೆಗಳ ಲಾಭ ಅವನಿಗೆ ದೊರೆಯಲಾರದು. ಅವನ ಬಾಳ್ವೆ ಸುಂದರಮಯವಾಗಬೇಕಾದರೆ ಆತನಿಗೆ ಅನ್ನದ ತೊಂದರೆ ಇರಬಾರದು, ಅನ್ನದ ಸಮಸ್ಯೆ ಬಗೆಹರಿಯಬೇಕು. ಅನ್ನ ಬೆಳೆಯಲು ಭೂಮಿ ಸುಧಾರಣೆ ಅವಶ್ಯವಾದದ್ದು. ಒಂದನೆಯದಾಗಿ ಅವನಿಗಿರುವ ಭೂಮಿ ಕಿರ್ದಿಯಾಗಬೇಕು. ಅನಂತರ ಸಮಪಾತಳಿ, ತದನಂತರ ಒಡ್ಡು ಬೇಕು, ಆಮೇಲೆ ನೀರು ಗೊಬ್ಬರ ಅನುಕೂಲತೆ ದೊರೆಯಬೇಕು. ಮತ್ತು ಬೆಳೆದ ಬೆಳೆಗಳಿಗೆ ಉಂಟಾಗುವ ರೋಗ ನಿವಾರಣೆಗೆ ಔಷಧೋಪಚಾರದ ಸಹಾಯಬೇಕು.

ಯಾಂತ್ರಿಕ ಕಾರ್ಖಾನೆಗಳಲ್ಲಿರುವ ಕೂಲಿಕಾರರು ಸಂಪಾದನೆಯಿಂದ ತಮ್ಮ ಕಲ್ಯಾಣ ಮಾಡಿಕೊಳ್ಳಲಾರರು. ರೈತನ ಸ್ಥಿತಿಗೂ, ಅನಾಥ ಕೂಸಿನ ಸ್ಥಿತಿಗೂ ಅಂತರವಿಲ್ಲ. ಆತನ ಕಲ್ಯಾಣದ ಹೊರೆ ಸರ್ಕಾರದ, ಅವರ ಮತಿಯಿಂದ ಆರಿಸಿ ಬಂದ ನಮ್ಮ ನಿಮ್ಮಗಳ ಮೇಲೆ ಇರುವುದು. ಈಗಿನ ಕಾಲದಲ್ಲಿ ಆಳಿನಿಂದ ಕಿರ್ದಿ ಮಾಡಿಸುವುದು ಕಠಿಣ. ಕಾರಣ ಸರ್ಕಾರದವರೇ ಕಡ್ಡಾಯವಾಗಿ ಟ್ರಾಕ್ಟರ್ ಹೊಡೆದುಕೊಟ್ಟು ಅದರ ಬಾಡಿಗೆಯನ್ನು ಸಾರಾದ ಸಂಗಡ ವಸೂಲು ಮಾಡಬೇಕು. ಬುಲ್‌ಡೋಜರ್‌ನಿಂದ ಸಮಪಾತಳಿ ಮಾಡಿಕೊಡಬೇಕು,

ವಿಜಾಪುರದ ಜಿಲ್ಲೆಯ ಸಲುವಾಗಿ ಹೇಳುವುದಾದರೆ, ಈ ಜಿಲ್ಲೆಯಲ್ಲಿ 14 ಲಕ್ಷ ಜನರಿದ್ದು ಸಾಧಾರಣವಾಗಿ 28 ಲಕ್ಷ ಚೀಲ ಆಹಾರ ಬೇಕಾಗುವುದು. ಈಗ ಸಾಕಾಗುವಷ್ಟು ಆಹಾರ ಬರುವುದಿಲ್ಲ. ಅದಕ್ಕಾಗಿ ನೀರಾವರಿ ಸಹಾಯಬೇಕು.

ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ದೊಡ್ಡದೊಡ್ಡ ಯೋಜನೆಗಳನ್ನು ಕೈಕೊಳ್ಳುವರಿರುವರು. ನಮ್ಮ ಸರ್ಕಾರವು ಆರ್ಥಿಕ ದೃಷ್ಟಿಯಿಂದ ಅಷ್ಟು ಸಬಲವಾಗಿಲ್ಲ. ಒಂದೇ ಕಡೆ ಅತಿ ದೊಡ್ಡ ಯೋಜನೆ ಕೈಕೊಳ್ಳುವುದಕ್ಕಿಂತ ಎಲ್ಲಾ ಭಾಗದಲ್ಲಿ ಇರ್ರಿಗೇಷನ್ ಸ್ಕೀಮುಗಳನ್ನು ತೆಗೆದುಕೊಳ್ಳಬೇಕು. ಆ ದೃಷ್ಟಿಯಿಂದ ವಿಜಾಪುರ ಜಿಲ್ಲೆಯ ಎಲ್ಲ ನೀರಾವರಿ ಯೋಜನೆಗಳ ಸರ್ವೆ ಮಾಡಿಸಿ ಕಾರ್ಯರೂಪಕ್ಕಿಳಿಸಬೇಕು. ನೀರಾವರಿ ಸೌಕರ್ಯವಿಲ್ಲದಲ್ಲಿ ಭಾವಿಗಳನ್ನು ತೆಗೆಸುವ ಯೋಜನೆ ಮಾಡಬೇಕು.

ನನ್ನ ಸಿಂದಗಿ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ
ನಮ್ಮ ತಾಲ್ಲೂಕಿನ ಡೋಣಿದಂಡೆಯ ಒಂಭತ್ತು ಹಳ್ಳಿ
ಗಳಲ್ಲಿ ಭೀಮಾ ನದಿ ದಂಡೆಯ ಹತ್ತು ಹಳ್ಳಿಗಳಲ್ಲಿ ಭಾವಿ
ಗಳಾಗುವುದಿಲ್ಲ. ಉಳಿದ 125 ಹಳ್ಳಿಗಳಲ್ಲಿ ಭಾವಿಗಳಾ
ಗುವುವು. ಪ್ರತಿ ಊರಿಗೆ ಕನಿಷ್ಟ 200 ಭಾವಿಗಳಾ
ದರೂ ತೆಗೆಸಿದರೂ ನಾಲ್ಕು ಲಕ್ಷ ಚೀಲ ಧಾನ್ಯ ಮತ್ತು
20 ಲಕ್ಷ ರೂಪಾಯಿಗಳ ಉತ್ಪನ್ನ ಹೆಚ್ಚಾಗುವುದು.
ಆದ್ದರಿಂದ ಭಾವಿಗಳ ಕಡೆಗೆ ಗಮನ ಹೆಚ್ಚು ಕೊಡ
ಬೇಕು. ವಿಜಾಪುರ ಜಿಲ್ಲೆಯಲ್ಲಿ ಎಷ್ಟು ಭಾವಿಗಳು
ಆಗಲಿಕ್ಕೆ ಸಾಧ್ಯವಿದೆ ಎಂದು ಸರ್ವೆ ಮಾಡಿಸಿ ತಗಾಯಿ
ಮತ್ತು ಸಬ್ಸಿಡಿ ಕೊಟ್ಟು ಭಾವಿ ಮಾಡಿಸಿಕೊಡಬೇಕು.
ದುಷ್ಕಾಳ ಬಿದ್ದಾಗ ದುಷ್ಕಾಳ ಕಾಮಗಾರಿಗೆ ಅಪರಿ
ಮಿತ ಹಣ ಖರ್ಚು ಮಾಡುತ್ತೇವೆ. ಆ ಸಮಯದಲ್ಲಿ
ಭಾವಿ ಹೊಡೆಸುವವರಿಗೆ ಭಾವಿಗೆ ಒಟ್ಟು ಹಿಡಿಯುವ
ಹಣದಲ್ಲಿ ಅರ್ಧ ತಗಾವಿ, ಅರ್ಧ ಸಹಾಯ ಧನವೆಂದು
ಕೊಡಬೇಕು. ಕೆಲವು ವರ್ಷಗಳ ಹಿಂದೆ ಮುಂಬೈ
ಸರ್ಕಾರದವರು ಒಂದು ಭಾವಿಗೆ 500ರಂತೆ
ಸಬ್ಸಿಡಿ ಕೊಟ್ಟಾಗ ಬಹಳ ಭಾವಿಗಳಾದುವು.
ಹಳೆಯ ಮೈಸೂರಿನಲ್ಲಿ ಪ್ರತಿ ಭಾವಿಗೆ 250 ರೂಪಾ
ಗಳಂತೆ ಸಬ್ಸಿಡಿ ಕೊಡುತ್ತಿದ್ದಂತೆ ಉಳಿದ ಭಾಗಕ್ಕೂ
ಕೊಡಬೇಕು.

ಈಗ ಹಳ್ಳಿಗಳಲ್ಲಿ ಉದ್ಯೋಗವಿಲ್ಲದ ಮೂಲಕ ಹಳ್ಳಿ
ಹಾಳಾಗಿ ಪಟ್ಟಣಗಳ ಸಂಖ್ಯೆ ಬೆಳೆಯುತ್ತಿದೆ.
ನೀರಾವರಿ ಅನುಕೂಲತೆಯಾದರೆ ಜಮೀನಿನ ಉತ್ಪನ್ನ
ಹೆಚ್ಚಾಗುವುದರಿಂದ ಪ್ರತಿಯೊಬ್ಬರೂ ಹಳ್ಳಿಯಲ್ಲಿ
ರಲು ಇಚ್ಛಿಸುತ್ತಾರೆ. ಹಳ್ಳಿ ಹಾಳಾಗಿ ಮುಂಬೈ
ಬೆಂಗಳೂರುಗಳಂತೆ ಶಹರುಗಳ ಸಂಖ್ಯೆ ಬೆಳೆಯ
ಬಾರದು. ಶಹರುಗಳು ಸಣ್ಣವಾಗಿ ಹಳ್ಳಿಗಳು
ದೊಡ್ಡವಾಗಬೇಕು. ರೈತರ ಉತ್ಪನ್ನ ಹೆಚ್ಚಿದರೆ
ಸರ್ಕಾರದ ಹತ್ತಿರ ಅಲೆದಾಡುವ ನಿರುದ್ಯೋಗಿಗಳ
ಸಮಸ್ಯೆ ಬಿಡುವುದು. ಟ್ರಾಕ್ಟರ್ ಬುಲ್‌ಡೋಜರುಗಳ
ಉಪಯೋಗ ಬಹಳವಾಗಿದೆ. ಅವುಗಳು ಹೆಚ್ಚಾಗ
ಬೇಕು. ಈ ದೇಶದಲ್ಲಿ ಸ್ಪೇರ್‌ಪಾರ್ಟ್ಸ್ ಅವುಗಳ
ಸಾಮಾನುಗಳು ಆಗುವುದಿಲ್ಲ. ಅವುಗಳ ಕಾರ್ಖಾನೆ
ಆಗಬೇಕು.

ಸರ್ಕಾರಕ್ಕೆ ಸೇಲ್ಸ್‌ಟ್ಯಾಕ್ಸ್ ಬಂದರೂ ಗಿರಾಕಿ
ಯಾಗಿ ರೈತನೇ ಕೊಡುವನು. ಇನ್‌ಕಂಟ್ಯಾಕ್ಸ್
ಕೊಡುವ ಶ್ರೀಮಂತರು ಬೇರೆಯಾದರೂ ಶ್ರೀಮಂತ
ರಿಗೆ ಇನ್‌ಕಂ ವುತ್ಪನ್ನ ಕೊಡುವನೇ ರೈತನು. ಸರ್ಕಾ
ರದ ಆಧಾರ ಸ್ತಂಭವೆಂದರೆ ರೈತನು. ಆದರೆ ಅವನ
ಸಲುವಾಗಿ ಸೌಕರ್ಯ ಇಲ್ಲ. ಅವನಿಗೆ ಪ್ರವಾಸಕ್ಕೆ
ರಸ್ತೆಗಳಿಲ್ಲ. ಅಜಾರಿಯಾಣಿ ಔಷಧೋಪಚಾರವಿಲ್ಲ.
ಇವೆಲ್ಲ ತೊಂದರೆ ಅವನಿಗೆ ಇರಬಾರದು. ಒಂದು ಹಳ್ಳಿ
ಯಿಂದ ಐದು ಮೈಲಿಗಳ ಪ್ರವಾಸ ಮಾಡಲು ಒಂದು
ದಿನ ಬೇಕಾಗುವುದು.

ಒಕ್ಕಲುತನಕ್ಕೆ ಉತ್ತಮ ಎತ್ತುಗಳು ಬೇಕು. ಆದ್ದ
ರಿಂದ ಉತ್ತಮ ಎತ್ತಿನ ಬೆಳೆವಣಿಗೆಗೆ ಬೀಜದ ಹೋರಿ
ಗಳ ಜರೂರು ಇದೆ. ಬೀಜದ ಹೋರಿಗಳ ಸಲುವಾಗಿ
ಸಬ್ಸಿಡಿಕೊಡುವುದನ್ನು ಬಂದ್‌ಮಾಡುವರೆಂದು ಕೇಳು
ತ್ತೇನೆ. ಬಂದ್‌ಮಾಡಬಾರದು. ಉಳಿದವರು
ಡೆಪ್ಯುಟೇಷನ್ ತರುವರು, ರೈತನ ಉತ್ಪನ್ನ ಹೆಚ್ಚಿದರೆ
ಡೆಪ್ಯುಟೇಷನ್‌ತರದೆ ಸರ್ಕಾರಕ್ಕೆ ಸಹಾಯಮಾಡುವನು.
ನಮ್ಮ ಜಿಲ್ಲೆಯಲ್ಲಿ ಲಮಾಣಿ ಬಂದುಗಳು ಉತ್ತಮ
ರೈತರಾಗಿರುವರು. ಅವರಿಗೆ ಕುಡಿಯುವ ನೀರಿನ
ಸೌಕರ್ಯವಿಲ್ಲ. ಮನೆಗಳ ವ್ಯವಸ್ಥೆ ಇಲ್ಲ. ಅವರ
ತೊಂದರೆ ದೂರಾವಾಗುವಂತೆ ಮಾಡಿ ಅವರ ಒಕ್ಕಲ
ತನಕ್ಕೆ ಉತ್ತೇಜನಕೊಡಬೇಕೆಂದು ಸರ್ಕಾರಕ್ಕೆ
ಪ್ರಾರ್ಥಿಸುತ್ತೇನೆ. ಕೇವಲ ಬಾಷೆಯಮೇಲಿನ ಪ್ರೇಮ
ದಿಂದ ಕನ್ನಡ ಪ್ರಾಂತಬೇಡಿಲ್ಲ. ಮುಂಬೈ ಪ್ರಾಂತ
ದಲ್ಲಿ ನಾವು ಅಲಕ್ಷಿಸಿದ್ದ ನಮ್ಮ ಸ್ವಂತ ಪ್ರಾಂತದಿಂದ,
ನಮ್ಮ ಉದ್ಧಾರವಾಗುವುದೆಂಬ ಅತಿ ಆಶೆಯಿಂದ
ಬಂದಿರುತ್ತೇವೆ. ಇನ್ನುಮುಂದೆ ಈ ತೊಂದರೆಗಳು
ಉಳಿಯಲಾರವೆಂದು ಆಶಿಸಿ ಈ ಬೇಡಿಕೆಗೆ ಅನು
ಮೋದಿಸಿ, ನನ್ನ ಮಾತು ಮುಗಿಸುವೆನು.

ಶ್ರೀ ಜಿ. ಎನ್. ಪುಟ್ಟಣ್ಣ. (ತುಮಕೂರು).—ಮಾನ್ಯ
ಅಧ್ಯಕ್ಷರೇ, 4½ ಘಂಟೆಗೆ ಎರಡು ನಿಮಿಷ ಇರುವಾಗ
ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನನ್ನ
ಕೃತಜ್ಞತೆಯನ್ನು ಅರ್ಪಿಸಿ ಆದಷ್ಟು ಜಾಗ್ರತೆ
ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ವಾಮಿ,
ನಮ್ಮ ಭರತಖಂಡ ವ್ಯವಸಾಯದಿಂದಲೇ ಜೀವನ
ಮಾಡತಕ್ಕ ದೇಶ ಎಂದರೆ ಎಲ್ಲರೂ ಒಪ್ಪುತ್ತಾರೆ.
ಆದರಲ್ಲೂ ನಮ್ಮ ಮೈಸೂರು ದೇಶದಲ್ಲಿ 100ಕ್ಕೆ
85ಜನ ವ್ಯವಸಾಯದಿಂದ ಜೀವನಮಾಡತಕ್ಕವರು
ಇದ್ದಾರೆ. ಇಂಥ ದೇಶದಲ್ಲಿ ನಮ್ಮದೇ ಆಗಿರತಕ್ಕ
ಒಂದು ಸರ್ಕಾರ ರಚಿತವಾಗಿರತಕ್ಕದ್ದು ಒಂದು
ಸಂತೋಷವೇ. ಮಂತ್ರಿ ಮಂಡಲದಲ್ಲಿ ಒಬ್ಬಿಬ್ಬರನ್ನು
ಬಿಟ್ಟರೆ ಮಿಕ್ಕವರೆಲ್ಲಾ ಹಳ್ಳಿಯಲ್ಲೇ ಹುಟ್ಟಿ, ಹಳ್ಳಿ
ಯಲ್ಲೇ ಬೆಳೆದು ವ್ಯವಸಾಯವೇನೆಂಬುದನ್ನು ತಿಳಿದು
ಕೊಂಡು ಬಂದಿರತಕ್ಕವರು ಇರುವಾಗ ಈ ವ್ಯವಸಾ
ಯದ ಇಲಾಖೆಗೆ ಕೊಟ್ಟಿರುವ ಗ್ರಾಂಟು ಕೇವಲ ಕಡಿಮೆ
ಎಂದು ನನ್ನ ವಿಷಾದವನ್ನು ಸೂಚಿಸಿ ಈ ಗ್ರಾಂಟನ್ನು
ವಿರೋಧಿಸುತ್ತೇನೆ. ಸ್ವಾಮಿ, ಈಗತಾನೆ ಮಾನ್ಯ
ಸ್ನೇಹಿತರು ವ್ಯವಸಾಯದ ಮಂತ್ರಿಗಳು ವ್ಯವಸಾಯದ
ಕೆಲಸದಲ್ಲ ನಿರತರಾಗಿರತಕ್ಕ ಒಂದು ಮನೆತನದಲ್ಲಿ
ಹುಟ್ಟಿದವರು ಎಂದು ಹೇಳಿದರು. ಅದು ಖಂಡಿತ
ವಾಗಿಯೂ ನಿಜ. ದೊಡ್ಡ ವ್ಯವಸಾಯಗಾರರು,
ದೊಡ್ಡ ಜಮೀನ್‌ದಾರರು. ಇದರ ಜೊತೆಗೆ, ವ್ಯವ
ಸಾಯದ ಡೈರೆಕ್ಟರು ಇದ್ದಾರಲ್ಲಾ ಅವರು ಭಾರೀ
ಜಮೀನ್‌ದಾರರು ; ಇಂಗ್ಲೆಂಡ್, ಅಮೆರಿಕಾ ದೇಶಗಳಿ
ಗೆಲ್ಲಾ ಹೋಗಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿಕೊಂಡು
ಬಂದವರು. ಇವರಿಬ್ಬರೂ ಸೇರಿದ್ದು ಹಾಲು, ಸಕ್ಕರೆ
ಸೇರಿದಹಾಗೆ ಆಗಿದೆ. ಈ ದೇಶದ ಪರಿಸ್ಥಿತಿ ಮೇಲೆ
ಹೇಳಿದಂತಿದೆ. ಈಗಲಾದರೂ ವ್ಯವಸಾಯದ ಇಲಾಖೆ,
ಮುಂದೆ ಬರತಕ್ಕ, ರೈತನಿಗೆ ಅನುಕೂಲವಾಗತಕ್ಕ
ಕೆಲಸ ಮಾಡಿದ್ದೇ ಆದರೆ ಮಾನ್ಯರಿಬ್ಬರೂ ವ್ಯವಸಾಯ
ಗಾರರ ಮಕ್ಕಳು ಎಂದು ಖಂಡಿತವಾಗಿ ಸಂತೋಷ
ದಿಂದ ಹೇಳುತ್ತೇನೆ. ಅವರು ಹಾಗೆ ಮಾಡದಿದ್ದರೆ
ಇವರೀರ್ವರ ಕೂಡುವಿಕೆ ಬೀಡಿ, ಬೆಂಕಿಕಡ್ಡಿ ಹಾಗೆ
ಆಗುತ್ತದೆ, ಪರಸ್ಪರ ವಿರುದ್ಧವಾಗುತ್ತದೆ. ನನ್ನ
ಕೃತಜ್ಞತೆಯ ಬೇಡಿಕೆ ಏನೆಂದರೆ ಹೆಬ್ಬಾಳದಲ್ಲಿ ಒಂದು
ವ್ಯವಸಾಯದ ಕಾಲೇಜು ಇದೆ, ಅಲ್ಲಿ ನೋಡಿದರೆ
ಯಾರು ಹೊಟ್ಟೆ ಪಾಡಿಗೆ, ಸರ್ಕಾರಿ ಸರ್ವಿಸ್ಸಿಗೆ ಸೇರಿ
ಕೊಂಡು ಜೀವನ ಮಾಡಬೇಕೆಂದು ಬಂದಿರುವರೋ
ಅಥವಾ 70% to 80% ನಂಬರ್ ಬಂದಿರುವವರಿಗೆ
ಸೀಟು ಸಿಕ್ಕುತ್ತಿದೆ. ರೈತನ ಮಗನಿಗೆ 45% ಬಂದಿ
ದ್ದರೂ ಸೀಟು ಇಲ್ಲ ಎಂದು ಹೇಳುತ್ತಾರೆ. ನಾನು
ಸರ್ವೀಸ್‌ಗೆ ಹೋಗುವುದಿಲ್ಲ, ವ್ಯವಸಾಯವನ್ನೆ ಮಾಡು
ತ್ತೇನೆ ಎಂದು ಅಗ್ರಿಮೆಂಟ್ ಬರೆಸಿಕೊಂಡು ಸೀಟು
ಕೊಡಿ ಸ್ವಾಮಿ, ವ್ಯವಸಾಯ ಅಭಿವೃದ್ಧಿಯಾಗು
ತ್ತದೆ. ಯಾವನು ಹೊಟ್ಟೆ ಪಾಡಿಗೆ ಕಾಲೇಜಿಗೆ ಸೇರು
ತ್ತಾನೆಯೋ ಅವನು ಬೇಸಾಯ ಮಾಡುವುದಿಲ್ಲ.

4-30 P.M.

ಮತ್ತೊಂದು ಸ್ವಾಮಿ, ಒಟ್ಟಿಗೆ ನಮ್ಮ ದೇಶದಲ್ಲಿ
ಬೇಕಾದಷ್ಟು ಭೂಮಿ ಸಾಗುವಳಿ ಮಾಡಲು ಬರು

(ಶ್ರೀ ಜಿ. ಎಚ್. ಪುಟ್ಟಣ್ಣ)

ವಂತೆ ಇದ್ದರೂ ಸಹ ಇನ್ನೂ ಅದರ ಪೈಕಿ ಬೇಕಾದಷ್ಟು ಭೂಮಿ ಬಂಜರು ಬಿದ್ದಿದೆ. ಇನಾಂ ರದ್ದು ಮತ್ತು ಇತರ ಭೂಸುಧಾರಣೆಗಳನ್ನು ನಮ್ಮ ಸರಕಾರವು ಘೋಷಿಸಿದ್ದರಿಂದ ಜಮೀನದಾರರು ರೈತರನ್ನು ಜಮೀನುಗಳಿಂದ ಬಿಡಿಸುತ್ತಿರುವುದರಿಂದ ಭೂಮಿಯ ಸಾಗುವಳಿ ಕಡಿಮೆಯಾಗುತ್ತಾಇದೆ. ಇದರ ಪರಿಣಾಮವಾಗಿ ಆಹಾರ ಉತ್ಪತ್ತಿ ಕಡಿಮೆಯಾಗಿದೆ. ಸರ್ಕಾರವು ಸಹ ಭೂಸುಧಾರಣೆಗೆ ಸಂಬಂಧಪಟ್ಟ ಕಾನೂನುಗಳನ್ನು ಸರಿಯಾಗಿ ಜಾರಿಯಲ್ಲಿ ತರಲಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಸಣ್ಣ ಸಣ್ಣ ಕೆರೆಗಳನ್ನು ನೀರಾವರಿ ಯೋಜನೆಗಳನ್ನು ಹಿಂದಿನ ಸರಕಾರ ಮಾಡುತ್ತಿದ್ದುದನ್ನು ಈಗ ಕೈಬಿಟ್ಟಿದ್ದಾರೆ. ಇದಕ್ಕೆಲ್ಲಾ ಸರಕಾರವೇ ಕಾರಣ. ವ್ಯವಸಾಯ ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಮಲೆನಾಡನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಮಲೆನಾಡಿಗೆ ಹೋಗಿ ಅಲ್ಲಿಯ ನಿಜವಾದ ಪರಿಸ್ಥಿತಿಯನ್ನು ಯಾರೂ ಅರಿತುಕೊಂಡು ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳು ಮಲೆನಾಡಿನಲ್ಲಿ ಯಾವದೋ ಒಂದು ಊರಿಗೆ ಪ್ರವಾಸ ಮಾಡಿ ಅಲ್ಲಿಗೆ ಹೋಗಿ ಊಟಮಾಡಿ ತಿರುಗಿ ಬಂದು ಭತ್ಯವನ್ನು ತೆಗೆದುಕೊಳ್ಳುತ್ತಾರೆಯೇ ವಿನಾ ಯಾವ ಅಭಿವೃದ್ಧಿ ಕಾರ್ಯದ ಕಡೆಗೇ ಆಗಲಿ ಮಲೆನಾಡಿನ ಕಷ್ಟಸುಖಗಳ ಕಡೆಗೇ ಆಗಲಿ ಮನಸ್ಸು ಹಾಕುವುದಿಲ್ಲ. ಮಲೆನಾಡಿನಲ್ಲಿ ಬೇಕಾದಷ್ಟು ಜಮೀನು ಇದೆ. ಸುಮ್ಮನೆ ಸರಕಾರವನ್ನು ನಾನು ಟೀಕಿಸುವುದಿಲ್ಲ. ಒಳ್ಳೆಯ ಸಲಹೆಗಳನ್ನು ಕೊಡುವುದಕ್ಕೇ ನಾನು ಇಷ್ಟೂ ಹೇಳುತ್ತಿದ್ದೇನೆ. ಹಿಂದಕ್ಕೆ ಮಲೆನಾಡಿನ ಅಭಿವೃದ್ಧಿಯ ಸಲುವಾಗಿ ಒಂದು ಯೋಜನೆಯನ್ನು ತಯಾರುಮಾಡಿ ಅದನ್ನು ಶ್ರೀ ಸಿದ್ದಪ್ಪನವರು ಮಂತ್ರಿಯವರಾಗಿದ್ದಾಗ ನಾನು ಕೊಟ್ಟಿದ್ದೇನೆ. ಎಂಟು ಹತ್ತು ವರ್ಷವಾಯಿತು. ಈಗ ಅದು ಎಲ್ಲಿ ಇದೆಯೋ ಏನಾಯಿತೋ ಗೊತ್ತಿಲ್ಲ. ಆದುದರಿಂದ ವ್ಯವಸಾಯ ಇಲಾಖೆಯವರು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕು. ಯಾವ ಕ್ರಮಬದ್ಧ ಕಾರ್ಯ ತೆಗೆದುಕೊಂಡರೂ ಅಲ್ಲಿ ಒಬ್ಬ ಅಯೋಗ್ಯ ಸೇರಿಕೊಂಡಿರುತ್ತಾನೆ. ಇದರಿಂದ ಕೆಲಸವು ಸರಿಯಾಗಿ ನಡೆಯುತ್ತಿಲ್ಲ. ಮಲೆನಾಡಿನಲ್ಲಿ ಅಗ್ರಿಕಲ್ಚರಲ್ ಕಾಲೋನಿಗಳನ್ನು ರಚಿಸಬೇಕು. ಮೈದಾನದಲ್ಲಿ ಇಂಡಸ್ಟ್ರಿಯಲ್ ಕನ್‌ಸರ್ನುಗಳನ್ನು ರಚಿಸಿರುವ ಹಾಗೆ (Factories) ಮಲೆನಾಡಿನ ಪ್ರದೇಶದಲ್ಲಿ ಮಾಡಿ, ವಿದ್ಯಾವಂತರ ನಿರುದ್ಯೋಗವನ್ನು ಹೋಗಲಾಡಿಸಬೇಕು.

ಮತ್ತೊಂದು ವಿಚಾರ. ರೈತನಿಗೆ ತಾನು ಬೆಳೆದ ಧಾನ್ಯಗಳಿಗೆ ಸರಿಯಾದ ಬೆಲೆ ಬರುವುದಿಲ್ಲ. ಅವನಿಗೊಂದು ಮಾರ್ಕೆಟ್ ಇಲ್ಲ ಇದರಿಂದ ರೈತನಿಗೆ ಬಹಳ ಹಾನಿಯಾಗಿ ತೊಂದರೆಯಾಗುತ್ತಿದೆ. ಆದಕಾರಣ ರೈತನ ಧಾನ್ಯಗಳಿಗೆ ಯೋಗ್ಯ ಬೆಲೆ ಬರುವಂತೆ ಸೌಲಭ್ಯವನ್ನು ಒದಗಿಸಿಕೊಡಬೇಕು.

ಇನ್ನು ಅಗ್ರಿಕಲ್ಚರ್ ವಿಚಾರ. ನಮ್ಮ ಮಾನ್ಯ ಸ್ನೇಹಿತರು ಬೆಂಗಳೂರು ತಾಲ್ಲೂಕು ಹೆಸರು ಘಟ್ಟದ ಫಾರಂ ವಿಚಾರವಾಗಿ ಬಹಳಚೆನ್ನಾಗಿ ಹೇಳಿದ್ದಾರೆ. ನಾನು ಒಂದೆರಡು ಅಂಶಗಳನ್ನು ಈ ಬಗ್ಗೆ ತಿಳಿಸಲಿಚ್ಛಿಸುತ್ತೇನೆ. 1938ರಿಂದ ಹಾರ್ಟಿಕಲ್ಚರಲ್ ಫ್ರೂಟ್ ರಿಸರ್ಚ್‌ಸ್ಟೇಷನ್ ಪ್ರಾರಂಭವಾಯಿತು. ಅಲ್ಲಿ ಪೈನ್ ಆಪಲ್ ಬೆಳೆಸಬೇಕೆಂದು ಒಂದು ರಿಸರ್ಚ್ ಇನ್ಸಿಟ್ಯೂಷನ್ನನ್ನು ಸ್ಥಾಪಿಸಿದ್ದರು. ಅದರ ಮೇಂಟನೆನ್ಸ್‌ಗಾಗಿ ಸೈಂಟಿಫಿಕ್ ಅಗ್ರಿಕಲ್‌ಚರಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಇಫ್ ಇಂಡಿಯಾ ಸಂಸ್ಥೆಯವರು ಕೇಂದ್ರ ಸರ್ಕಾರದ ಮೂಲಕ ಸ್ವಲ್ಪ ಭಾಗವನ್ನು ಕೊಡುವುದು, ಮತ್ತು ನಮ್ಮ ಮೈಸೂರು ಸರ್ಕಾರದವರು ಸ್ವಲ್ಪ ಭಾಗವನ್ನು ಕೊಡುವುದು ಈ ರೀತಿ ಸಹಾಯ ಮಾಡುತ್ತಿದ್ದಾರೆ. ಅಲ್ಲಿ ಸುಮಾರು ವರ್ಷಕ್ಕೆ 50 ಸಾವಿರ ರೂಪಾಯಿ ಖರ್ಚು ಇದೆ. ಕೇವಲ 10 ಸಾವಿರ ರೂಪಾಯಿಗಳು ಮಾತ್ರ ಉತ್ಪತ್ತಿ ಇದೆ ಆದ್ದರಿಂದ ಕೇಂದ್ರ ಸರ್ಕಾರದವರು ಇದನ್ನು ಅಲ್ಲಿ ಅಬಾಲಿಷ್ ಮಾಡಿ ನಮ್ಮ ಮಾನೇಂಜ್‌ಮೆಂಟಿಗೆ ಕೊಡಿ ಎಂದು 10-12 ವರ್ಷಗಳಿಂದಲೂ ಕೇಳುತ್ತಿದ್ದಾರೆ. ಈ ವಿಷಯ ದೀರ್ಘವಾಗಿ ಚರ್ಚೆಯಾಗಿ ಮೈಸೂರು ಎಸ್ಟಿಮೇಟ್ ಕಮಿಟಿಯಲ್ಲಿಯೂ, ಮತ್ತು ಫೈನಾನ್ಸ್ ಕಮಿಟಿಯಲ್ಲಿಯೂ ಕೂಡ ಒಪ್ಪಿದ್ದಾರೆ. ಈಗ ಈ ಫಾರಂ ಪೂರ್ತಿಯಾಗಿ ಹಾಳಾಗುತ್ತಿದೆ. ನಮಗೆ ನರ್ಸರಿಗಳಿಲ್ಲ. ನಮ್ಮ ಹಾರ್ಟಿಕಲ್‌ಚರಲ್ ಇಲಾಖೆಯವರಿಗೇ ಹೆಸರುಘಟ್ಟ ಫಾರಂ ನಾವೇ ಇಟ್ಟುಕೊಂಡು, ನಮ್ಮ ವಶದಲ್ಲಿಯೇ ಬೇಕಾದಷ್ಟು ನರ್ಸರಿಗಳನ್ನು ಮಾಡಬೇಕೆಂಬ ಮನಸ್ಸೇನೋ ಇದೆ. ಆದರೆ ಸರಿಯಾದ ನರ್ಸರಿಗಳು ಯಾವಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲಿಯೂ ಮುಖ್ಯವಾಗಿ ಕೃಷ್ಣರಾಜಸಾಗರದಲ್ಲಿಯೂ ಕಾಣುತ್ತಾಇಲ್ಲ. ಅಲ್ಲಿ ಫಲವತ್ತಾದ ಜಮೀನು ಬೇಕಾದಷ್ಟಿದೆ. ಸರ್ಕಾರದವರು 20-30 ವರ್ಷಗಳಿಂದ ಅನ್ಯಾಯವಾಗಿ ಲುಕ್ಸಾನಿಂದ ಕೆಲಸಮಾಡುತ್ತಿದ್ದಾರೆ. ಸಾವಿರಾರು ಎಕರೆಗಳಿರುವ ಜಮೀನಿನಲ್ಲಿ ಹಣ್ಣುಗಳನ್ನು ಬೆಳೆಯುವುದಕ್ಕೆ ಬದಲಾಗಿ ಬೂದುಗುಂಬಳ ಹೀರೆಕಾಯಿ, ವಗೈರೆ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಬೆಂಗಳೂರಿನಲ್ಲಿ 12 ಜನ ಲಾಲ್ ಬಾಗ್ ಜವಾನರುಗಳು ಕೆಲವು ಆಫೀಸರುಗಳ ಮನೆಯಲ್ಲಿ ಹಿಂದೆ ಕೆಲಸ ಮಾಡುತ್ತಿದ್ದರು. ಈಗ ಹಾರ್ಟಿಕಲ್ಚರಲ್ ಇಲಾಖೆಗೆ ಸೇರಿದ ಒಬ್ಬ ಜವಾನ ಒಬ್ಬ ಖಾಸಗೀ ಮನುಷ್ಯನ ಮನೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಇದುವರೆಗೂ ಇದೇ ರೀತಿ ಎಲ್ಲೆಲ್ಲಿ ಜವಾನರುಗಳನ್ನು ದುರುಪಯೋಗಪಡಿಸಿಕೊಂಡು ಹೀಗೆ ಲುಕ್ಸಾನು ಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಈಗ ಕನ್ನಂಬಾಡಿಯಲ್ಲಿ ಒಂದು ಹಾರ್ಟಿಕಲ್‌ಚರಲ್ ಫಾರಂ ಇದೆ. ಅಲ್ಲಿ ಒಬ್ಬ ಹಾರ್ಟಿಕಲ್‌ಚರಲ್ ಇನ್ಸ್ಪೆಕ್ಟರ್ ಸಾವಿರಾರು ಬಾಳೆಕಂದುಗಳು, ಗಿಡಗಳು, ವಗೈರೆಗಳನ್ನು ಅನೇಕ ಜನಗಳಿಗೆ ಉಚಿತವಾಗಿ ಕೊಡುತ್ತಿದ್ದಾನೆಂದು ದೊಡ್ಡ ವರ್ತಮಾನವಿದೆ. ಅದೇ ರೀತಿ ನಂದೀದುರ್ಗದಲ್ಲೂ ಕೂಡ ಎಷ್ಟೋ ಹಣ ದುರುಪಯೋಗವಾಗಿದೆಯೆಂಬ ವಿಚಾರ ಮನೆಮಾತಾಗಿದೆ. ನಮ್ಮ ಸರ್ಕಾರದವರು ಈಗ ಕನ್ನಂಬಾಡಿಯಲ್ಲಿರುವ ಗ್ರ್ಯಾಸ್ ವೆಜಿಟಬಲ್ಸ್ ಪ್ಲಾಂಟ್ಸ್, ಇವೆಲ್ಲವನ್ನೂ ಖಾಸಗೀ ಮನುಷ್ಯರಿಗೆ ಉಚಿತವಾಗಿ ಕೊಡುತ್ತಿರುವುದನ್ನು ಜಾಗ್ರತೆಯಾಗಿ ತಪ್ಪಿಸಬೇಕು. ಈ ಇಲಾಖೆಯಲ್ಲಿ ಖರ್ಚನ್ನು ಕಡಮೆಮಾಡಿ ಉತ್ಪತ್ತಿಯನ್ನು ಜಾಸ್ತಿಮಾಡಬೇಕು. ಈ ಹಾರ್ಟಿ ಕಲ್‌ಚರಲ್ ಇಲಾಖೆಯನ್ನು ಅಗ್ರಿಕಲ್‌ಚರಲ್ ಡೈರೆಕ್ಟರ್ ಕಂಟ್ರೋಲಿಗೆ ಒಳಪಡಿಸತಕ್ಕದ್ದು ಬಹಳ ಸೂಕ್ತವೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ. ಹೆಸರುಘಟ್ಟದ ಫಾರಂ ವಿಚಾರವಾಗಿ ನಮ್ಮ ಸರ್ಕಾರದವರು ಜರೂರಾದ ನಿಗಾವನ್ನು ತೆಗೆದು ಕೊಳ್ಳದಿದ್ದರೆ ದೇಶಕ್ಕೆ ಉನ್ನತಿ ಇಲ್ಲ. ಸರ್ಕಾರಕ್ಕೆ ಕೀರ್ತಿಇಲ್ಲ. ಕೇಂದ್ರ ಸರ್ಕಾರದವರು ಕೇಳಿದ್ದರೂ, ನಮ್ಮ ಸರ್ಕಾರದವರು ಇನ್ನೂ ಅವರ ವಶಕ್ಕೆ ಕೊಡದೇ ಇರುವುದು ಬಹಳ ಶೋಚನೀಯ.

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಕೇಂದ್ರ ಸರ್ಕಾರದವರಿಗೆ ಈ ಹೆಸರುಘಟ್ಟಫಾರಮ್ಮನ್ನು ಬಿಟ್ಟುಕೊಡಲು ಒಪ್ಪಿದ್ದೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಬಹಳ ಸಂತೋಷ. ಇನ್ನು ರೂರಲ್ ಡೆವಲಪ್‌ಮೆಂಟ್ ವಿಷಯ. ಈ ರೂರಲ್ ಡೆವಲಪ್‌ಮೆಂಟುಗಳ ಕಂಟ್ರಾಕ್ಟುಗಳನ್ನು ಸ್ಥಳದಲ್ಲಿರತಕ್ಕ ದೊಡ್ಡಮನುಷ್ಯರು ತಮ್ಮ ಸಂಬಂಧಿಕರ ಅಥವಾ ತಮ್ಮ ಸ್ನೇಹಿತರ ಹೆಸರಿನಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಆಫೀಸರುಗಳು ಆ ದೊಡ್ಡ ಮನುಷ್ಯನು ಹೇಳಿದಂತೆ ಎಸ್ಟಿಮೇಟ್ ಮಾಡಬೇಕು. ಹೈರೇಟು ಹಾಕಬೇಕು. ಕೆಲಸ ಮಾತ್ರ ಸಮಂಜಸವಾಗಿ ನಡೆಯುವುದಿಲ್ಲ. ಆದರೂ ಅವನು ಹೇಳಿದಂತೆ ಬಿಲ್ ಪಾಸ್ ಮಾಡಿಕೊಡಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಆಫೀಸರುಗಳು ಚೆನ್ನಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಬಹಳ ಕಷ್ಟವಾಗುತ್ತದೆ. ಅವರಿಗೆ ಉಳಿಗಾಲವೂ ಇರುವುದಿಲ್ಲ. ಅವರಲ್ಲಿ ಅನೇಕರು ಕಳ್ಳರು, ಲಂಚಕೋರರೂ ಇರುತ್ತಾರೆ. ಆದರೆ ಸರಿಯಾದ ಕಂಟ್ರಾಕ್ಟುದಾರರಲ್ಲಿ ಸತ್ಪುರುಷರು ಎಷ್ಟೋ ಜನರಿರುತ್ತಾರೆ. ಆದರೆ ಕೆಲವು ದೊಡ್ಡ ಮನುಷ್ಯರೇ ಮಂತ್ರಿಗಳ ಹತ್ತಿರ ಹೋಗಿ ಆಫೀಸರುಗಳ ಮೇಲೆ ಚಾಡಿಹೇಳಿ ಎಷ್ಟೋ ಕಿರುಕುಳಗಳನ್ನು ಅವರಿಗೆ ಕೊಡುತ್ತಿದ್ದಾರೆ. ಎಸ್ಟಿಮೇಟ್ ಮಾಡಿದವನನ್ನು ಬೈದು ಕಳುಹಿಸುತ್ತಾರೆ. ಯಾವ ಜಾತಿಯವನೆ ಆಗಲಿ ಸತ್ಯವಾಗಿ ಕೆಲಸಮಾಡಿದರೆ, ಅವನನ್ನು ಕೆಲಸದಲ್ಲಿಟ್ಟುಕೊಳ್ಳಬೇಕು. ಇಲ್ಲವೇ ಅವನು ಅಸತ್ಯವಂತನಾಗಿದ್ದರೆ, ಕೆಲಸದಿಂದ ತೆಗೆದುಹಾಕಿ. ನಾವು ಜಾತಿ, ಮತ, ಕುಲ, ಗೋತ್ರ ಎಂಬುದರ ಕಡೆಗೆ ನಮ್ಮ ಮನಸ್ಸನ್ನು ಕೊಡಬಾರದು. ನಾನು ಹಿಂದೆ ಅಸ್ಪೃಶ್ಯತಾ ನಿವಾರಣಾ ಸಂಘಕ್ಕೆ ಸೆಕ್ರೆಟರಿಯಾಗಿದ್ದೆ. ಆಗ ಒಂದು ಸಾರಿ ಸುಮಾರು ಒಂದು ಸಾವಿರ ಜನಗಳಿಗೆ ತುಮಕೂರಿನ ಶ್ರೀಮತಿ ಸಾವಿತ್ರಮ್ಮನವರ ಛತ್ರದಲ್ಲಿ ಮತ್ತು ಶ್ರೀ ಮಾರ್ ಎನ್. ರುದ್ರಯ್ಯನವರ ಛತ್ರದಲ್ಲಿ ಒಂದು ಭೋಜನ ಕೂಟವನ್ನು ಏರ್ಪಡಿಸಲಾಗಿತ್ತು. ಅಲ್ಲಿ ನಾವು ನೀವು, ಆ ಜಾತಿ, ಈ ಜಾತಿ ಎಂಬ ಭೇದಭಾವನೆಯಿಲ್ಲದೆ ಎಲ್ಲರೂ ಒಂದೇ ತಾಯಿಯ ಮಕ್ಕಳ ಹಾಗೆ ವರ್ತಿಸಬೇಕು ಎಂದು ಹೇಳಿದೆ. ಅನೇಕ ದೊಡ್ಡ ಮನುಷ್ಯರು ಸ್ವಾರಸ್ಯವಾಗಿ ಭಾಷಣಗಳನ್ನು ಮಾಡಿದರು. ನಾನು ತದನಂತರ ಸಭೆಯಲ್ಲಿರುವ ಸರ್ವರೂ ಬಂದು ಊಟ ಮಾಡಿಕೊಂಡು ಹೋಗಬೇಕೆಂದು ಪ್ರಾರ್ಥಿಸಿದೆನು. ಅನೇಕರು ಕೆಲವರಿಗೆ ಹೊಟ್ಟೇನೋವು, ಕೆಲವರಿಗೆ ಕೈಕಾಲು ನೋವು ಎಂದು ನೆಪ ಹೇಳಿಕೊಂಡು ಔತಣಕೂಟಕ್ಕೆ ಬಾರದೆ ಹೊರಟು ಹೋದರು. ಆಗಲೂ ಎಲ್ಲರನ್ನೂ ನಡೆಯಿರಿ, ಆ ಔತಣ ಕೂಟಕ್ಕೆ ಭಾಗವಹಿಸಿ ಎಂದು ಹೇಳಿ ಕರೆದುಕೊಂಡು ಹೋಗಬೇಕಾಯ್ತು. ಕೆಲವರನ್ನು ಲಾರಿಗಳಲ್ಲಿ ಊಟಕ್ಕೆ ಕರೆದುಕೊಂಡು ಬರುವ ಪ್ರಸಂಗ ಒದಗಿತ್ತು. ನಾನು ಮತ್ತು ನನ್ನ ಕೆಲವು ಸ್ನೇಹಿತರು ನಿಮ್ನ ಪಂಗಡದವರೊಂದಿಗೆ ಕುಳಿತು ಸಹ ಭೋಜನವನ್ನು ಮಾಡಿದೆವು. ಸುಮ್ಮನೆ ಬಾಯಲ್ಲಿ ಹರಿಜನರನ್ನು ಉದ್ಧಾರ ಮಾಡುತ್ತೇವೆ, ಹಿಂದುಳಿದ ಪಂಗಡದವರನ್ನು ಮೇಲಕ್ಕೆ ತರುತ್ತೇವೆ ಎಂದು ಹೇಳುವುದು ಬೂಟಾಟಿಕೆ ಮಾತಾಗಿದೆ ಎಂದು ನಾನು ಹೇಳಬಯಸುತ್ತೇನೆ. ಇದು ಎಂತಹ ದೇಶದ್ರೋಹ ಎಂಬುದನ್ನು ಮಹನೀಯರುಗಳೇ ಯೋಚನೆ ಮಾಡಲಿ. ನಮ್ಮ ಸರ್ಕಾರದಲ್ಲಿ ಅನ್ಯಾಯವಾಗಿ ಹಣ ಪೋಲಾಗುತ್ತಿರುವುದನ್ನು ಮಂತ್ರಿಗಳು ನೋಡುತ್ತಿಲ್ಲ. ಇಲಾಖೆಯವರಲ್ಲಿ ಮೆರಿಟ್ಸ್ ಸರಿಯಾಗಿ ಬೆಳೆಯುತ್ತಾ ಇಲ್ಲ. ಹಣ ದುರ್ವಿನಿಯೋಗವಾಗಿ ಅನ್ಯಾಯದ ರೀತಿಯಲ್ಲಿ ವ್ಯಯವಾಗುತ್ತಿರುವುದನ್ನು ಅವರು ಸರಿಯಾಗಿ ಕಣ್ಣು ಬಿಟ್ಟು ನೋಡುವುದೇ ಇಲ್ಲ.

ಇನ್ನೊಂದು ವಿಚಾರ. ಸೋಮವಾರ ಪೇಟೆಯ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಾವಿರಾರು ರೂಪಾಯಿಗಳು ದುರುಪಯೋಗವಾಗಿ ಸೊಸೈಟಿ ಹಾಳಾಗಿ ಹೋಗಿದೆಯೆಂದು ಇಲ್ಲಿಗೆ ಈಗ ಟೆಲಿಗ್ರಾಂ ಬಂದಿದೆ. ಅಲ್ಲದೆ ಸೋಷಿಯಲ್ ವೆಲ್‌ಫೇರ್ ಆರ್ಗನೈಜೇಷನ್ನಿಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳಷ್ಟು ಸರ್ಕಾರಿ ಹಣ ಹಾಳಾಗುತ್ತಿದೆ. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಈಗ ಎನ್. ಇ. ಎಸ್. ಸ್ಕೀಮುಗಳನ್ನು ಮಾಡಿ ಅಲ್ಲಿನ ಇಂಜಿನಿಯರುಗಳಿಗೆ ಜೀಪ್‌ಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಸೋಷಿಯಲ್ ವೆಲ್‌ಫೇರ್ ಸ್ಕೀಮುಗಳನ್ನು ಎನ್. ಇ. ಎಸ್. ಸ್ಕೀಮಿಗೆ ಸೇರಿಸಬೇಕೆಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರು ನನಗೆ ಇನ್ನು ಸ್ವಲ್ಪ ಹೊತ್ತು ಅವಕಾಶ ಕೊಟ್ಟಿದ್ದರೆ, ಇದರಿಂದಾಗುತ್ತಿರುವ ಅನ್ಯಾಯಗಳನ್ನು ಮಂತ್ರಿಗಳಿಗೆ ಕೂಲಂಕಷವಾಗಿ ಹೇಳುತ್ತಿದ್ದೆ. ಇಷ್ಟು ಕಾಲಾವಕಾಶವನ್ನು ಒದಗಿಸಿದ ನಮ್ಮ ಅಧ್ಯಕ್ಷರನ್ನು ವಂದಿಸಿ, ನಮ್ಮ ಮಾನ್ಯ ಮಂತ್ರಿಗಳು ನನ್ನ ಸಲಹೆಗಳಿಗೆ ಪೂರ್ಣ ಗಮನ ಕೊಡುತ್ತಾರೆಂದು ನಂಬಿ, ಈ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ.

*ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಮಾನ್ಯ ಮಿತ್ರರು ಅನೇಕ ಸೂಕ್ತವಾದ ಸಲಹೆಗಳನ್ನು ಸರಕಾರದವರು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳಮೇಲೆ ಕೊಟ್ಟಿದ್ದಾರೆ. ವ್ಯವಸಾಯ ದೇಶವಾದ ನಮ್ಮ ದೇಶದಲ್ಲಿ ಯಾವ ಯೋಜನೆಗಳನ್ನು ಈ ದಿವಸ ನಾವು ಹಳ್ಳಿಗಾಡುಗಳಲ್ಲಿ ಜಾರಿಗೆ ತರಬೇಕೆಂದಿದ್ದೇವೋ ಆ ಯೋಜನೆಗಳು ಫಲಪ್ರದವಾಗಬೇಕಾಗಿದ್ದರೆ ಸುವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯಗತವಾಗಬೇಕಾಗಿದ್ದರೆ ಒಂದು ಸರಿಯಾದ ಕಾರ್ಯಕ್ರಮವನ್ನು ವ್ಯವಸಾಯದ ಇಲಾಖೆಯ ಮೂಲಕ ಸರ್ಕಾರ ಮಾಡಬೇಕಾದುದು ಬಹಳ ಅಗತ್ಯವೆಂದು ನಾನು ಅತಿ ವಿನಯದಿಂದ ಹೇಳಬೇಕಾಗಿದೆ. ದೇಶದ ಪ್ರಗತಿ ರೈತರ ಮೇಲೆಯೇ ಅವಲಂಬಿಸಿದೆಯೆಂದು ಹೇಳಿದರೆ ತಪ್ಪಾಗಲಾರದು. ಇಷ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆಗಳಿಂದ ರೈತ ಎಷ್ಟರಮಟ್ಟಿಗೆ ಅನುಕೂಲಗಳನ್ನು ಪಡೆಯುತ್ತಿದ್ದಾನೆ, ಮತ್ತು ಆತನ ಕಷ್ಟಗಳು ಎಷ್ಟರಮಟ್ಟಿಗೆ ನಿವಾರಣೆ ಯಾಗುತ್ತಿವೆ ಎನ್ನುವ ಬಹುವ ಮುಖ್ಯವಾದ ವಿಷಯವನ್ನು ಈ ಸಭೆಯ ಮುಂದೆ ಚರ್ಚೆ ಮಾಡಬೇಕಾಗಿದೆ. ನಮ್ಮ ದೇಶದ ರೈತರಲ್ಲಿ ಬಹುಮತ ಅನಕ್ಷರಸ್ಥರು. ಅವರ ಅಭಿವೃದ್ಧಿಗೆ ಒಂದು ಆಧುನಿಕ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿ ದಿನೇ ದಿನೇ ಅಭಿವೃದ್ಧಿ ಯಾಗತಕ್ಕಂಥ ಜನಸಂಖ್ಯೆಗೆ, ಮತ್ತು ಮುಂದಿನ ಸೀಳಿಗೆಗೆ ಒಂದು ಅನುಕೂಲ, ಒಂದು ಉದ್ಯೋಗ-ಇವುಗಳನ್ನು ಕಲ್ಪಿಸಬೇಕಾಗಿದ್ದರೆ ವ್ಯವಸಾಯ ಬಹಳ ಉನ್ನತ ಮಟ್ಟದಲ್ಲಿ ದೇಶದಲ್ಲಿ ಸಾಗಬೇಕಾಗುತ್ತದೆ. ವ್ಯವಸಾಯದ ಇಲಾಖೆ ಎಷ್ಟರ ಮಟ್ಟಿಗೆ ರೈತನ ನೆರವಿಗೆ ಕೆಲಸ ಮಾಡುತ್ತಿರಬೇಕು ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಹಿಂದೆ ಯಾವ ಒಂದು ಸಂಪ್ರದಾಯವನ್ನು ಇಟ್ಟುಕೊಂಡು ನಮ್ಮ ರೈತರು ವ್ಯವಸಾಯವನ್ನು ಮಾಡುತ್ತಿದ್ದರೋ ಸ್ವಲ್ಪ ಹೆಚ್ಚು ಕಡಿಮೆ ಈಗಲೂ ಅದೇರೀತಿ ನಡೆಸಿಕೊಂಡು ಬರುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಆಧುನಿಕ ರೀತಿಯಿಂದ ಒಂದು

(ಶ್ರೀ ಆಲೂರು ಹನುಮಂತಪ್ಪ)

ಉಳುಮೆ ಮಾಡಬೇಕಾಗಿದ್ದಲ್ಲಿ ಒಂದು ಉತ್ತಮ ತರದ ಬಿತ್ತನೆ ಬೀಜವನ್ನು ಉಪಯೋಗಿಸಬೇಕಾಗಿದ್ದಲ್ಲಿ, ಬೆಳೆಯನ್ನು ಕ್ರಿಮಿಕೀಟಗಳ ಹವ್ಯಾಸದಿಂದ ತಪ್ಪಿಸಿ ಕಾಪಾಡಬೇಕಾಗಿದ್ದಲ್ಲಿ ನಮ್ಮ ರೈತರಿಗೆ ವ್ಯವಸಾಯ ಇಲಾಖೆಯಿಂದ ಸಾಕಷ್ಟು ಸೌಲಭ್ಯಗಳು ದೊರೆಯುತ್ತಾ ಇಲ್ಲ. ಸುಮ್ಮನೆ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಒಂದು ಸುವ್ಯವಸ್ಥಿತವಾದರೀತಿಯಲ್ಲಿ ಕಾರ್ಯ ಕ್ರಮ ಇದಕ್ಕೆ ಅಗತ್ಯವಾಗಿ ಬೇಕಾಗಿದೆ ಎಂದು ನಾನು ಹೇಳುತ್ತೇನೆ. ತಜ್ಞರು ಯಾವ ಒಂದು ಬೆಳೆಯನ್ನು ಬೆಳೆದರೆ ಸರಿಯಾದ ರೀತಿಯಲ್ಲಿ ಫಲ ದೊರಕುತ್ತದೆ ಎಂಬುದನ್ನು ತಿಳಿದಿರುತ್ತಾರೆ. ಅದಕ್ಕೆ ಬರತಕ್ಕ ಕ್ರಿಮಿ ಕೀಟಗಳ ಅರಿವು ಅವರಿಗೆ ಚೆನ್ನಾಗಿರುತ್ತದೆ. ಈ ಭೂಮಿಯಲ್ಲಿ ಇಷ್ಟು ಮೊತ್ತಕ್ಕೆ ಇಷ್ಟು ಬೆಳೆಯಾಗುತ್ತದೆ ಎಂಬುದನ್ನು ಇಷ್ಟು ಪ್ರತಿ ಫಲ ದೊರಕುತ್ತದೆ ಎಂಬುದನ್ನು ಕಂಡು ಹಿಡಿಯುವುದು ಈ ದಿವಸ ಬಹು ಮುಖ್ಯಾಂಶವಾಗಿದೆ. ದೇಶದಲ್ಲಿ ವ್ಯವಸಾಯ ಕಷ್ಟತರವಾದ ಒಂದು ಉದ್ಯೋಗ. ಇದನ್ನು ಮಾಡಲಿಕ್ಕೆ ಬಹಳ ಜನ ಈಗಾಗಲೇ ನಿರುತ್ಸಾಹಿಗಳಾಗಿದ್ದಾರೆ. ಏಕೆಂದರೆ ಕಷ್ಟಪಟ್ಟರೂ ಸರಿಯಾದ ಪ್ರತಿ ಫಲ ದೊರೆಯುತ್ತಾ ಇಲ್ಲ. ಒಂದು ಬೆಳೆಗೆ ಮಾಡುವ ಖರ್ಚಿಗೆ ತಕ್ಕ ಪ್ರತಿ ಫಲವೂ ದೊರಕದೇ ಇರುವುದೂ ಒಂದು ಕಾರಣವಾಗಿದೆ.

ನಾವು ತರಕಾರಿ ಬೆಳೆಯುವುದನ್ನು ಆಲೋಚನೆ ಮಾಡೋಣ. ರೈತರು ಉತ್ಸಾಹದಿಂದ ಕಷ್ಟಪಟ್ಟು ಖರ್ಚು ಮಾಡಿದ ಹಣ ವಾಪಸ್ಸು ಬರಬೇಕಾಗಿದ್ದರೆ ಸರ್ಕಾರದಲ್ಲಿ ಆಯಾ ಇಲಾಖೆಯ ನೆರವು ಬಹಳ ಅಗತ್ಯವಾಗಿ ಬೇಕು. ಅದಕ್ಕೆ ತಕ್ಕ ಅನುಕೂಲವನ್ನು ವ್ಯವಸಾಯ ಇಲಾಖೆ ಬಹಳ ಜಾಗರೂಕತೆಯಿಂದ ನೀಡಬೇಕಾಗಿದೆ. ಈಗ ಹಳ್ಳಿಯಲ್ಲಿರುವ ವ್ಯವಸಾಯ ಸಿಬ್ಬಂದಿ ಖಂಡಿತವಾಗಿ ಸಾಲದು. ಒಂದೊಂದು ಹೋಬಳಿಯೂ ಸ್ವಾವಲಂಬಿಯಾಗಿ ಇರಬೇಕು. ಪ್ರತಿ ವರ್ಷವೂ ರೈತನು ಮಾಡುವ ಕೆಲಸವನ್ನು ಪರೀಕ್ಷೆ ಮಾಡಿ ನೋಡಿ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವ ಹಾಗೆ ಇರಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬೇಕಾಗಿದೆ.

ರೈತರ ಆರ್ಥಿಕ ಪರಿಸ್ಥಿತಿಯನ್ನು ಯಾವರೀತಿ ಅಭಿವೃದ್ಧಿ ಪಡಿಸಬೇಕು ಎಂದರೆ ಕೈಗಾರಿಕೆಗಳನ್ನು ಮಾಡುವುದರ ಮತ್ತು ಇತರ ಉಪಕಸುಬುಗಳನ್ನು ಮಾಡುವುದರ ಜೊತೆಗೆ ಕಮರ್ಷಿಯಲ್ ಕ್ರಾಪ್‌ಗಳನ್ನು ಬೆಳೆಯಬೇಕು. ಮಾರು ಕಟ್ಟೆಗಳಲ್ಲಿ ಒಂದುಸರಿಯಾದ ಪ್ರತಿಫಲವನ್ನು ಪಡೆಯುವುದರ ಮೂಲಕ ಆರ್ಥಿಕ ಮಟ್ಟವನ್ನು ಅಭಿವೃದ್ಧಿಪಡಿಸಬೇಕು. ಬೆಂಗಳೂರಿನಿಂದ 8-10 ಮೈಲಿಗಳ ಪ್ರದೇಶದಲ್ಲಿರತಕ್ಕ ರೈತ ವರ್ಗದ ಜನರು ತರಕಾರಿ ಮತ್ತು ಕಮರ್ಷಿಯಲ್ ಕ್ರಾಪ್ಸ್‌ಗಳನ್ನು ಬೆಳೆಯುತ್ತಾರೆ. ಆಲೂಗೆಡ್ಡೆಯನ್ನು ಬೆಳೆಯ ತಕ್ಕವರಿಗೆ ವ್ಯಾಪಾರದ ವ್ಯವಸ್ಥೆ ಸರಿಯಾಗಿಲ್ಲದಿರುವುದರಿಂದ ಬಹು ಭಾಗದ ಲಾಭ ಮಧ್ಯವರ್ತಿ ಜನರಿಗೆ ಸೇರುತ್ತದೆ. ಬೆಳೆಯುವ ರೈತರಿಗೆ ಉತ್ಸಾಹ ಕಡಿಮೆಯಾಗಿದೆ. ಕಡೆಯಪಕ್ಷ ಹನ್ನೊಂದು ಹನ್ನೆರಡು ಲಕ್ಷ ಪ್ರಜಾಸಂಖ್ಯೆ ಗೋಸ್ಕರವಾಗಿ ಮೂವತ್ತು ನಲವತ್ತು ಮೈಲಿಗಳ ದೂರದವರೆಗೂ ರೈತನು ತರಕಾರಿ ಬೆಳೆಯಲು ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸರ್ಕಾರದಲ್ಲಿ ಮತ್ತು ವ್ಯವಸಾಯ ಸಂಘದ ಹಿಡಿತದಲ್ಲಿ ತರಕಾರಿ ಮಾರತಕ್ಕ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಬೇಕು. ಇದರಿಂದ ಮೂವತ್ತು ನಲವತ್ತು ಮೈಲಿಗಳಲ್ಲಿ ಇನ್ನೂ ಹೆಚ್ಚು ತರಕಾರಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ರೈತನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದರ ಜೊತೆಗೆ ಇಲ್ಲಿಗೆ ಬರುವ ಪ್ರಜೆಗಳಿಗೂ ಸೌಕರ್ಯ ಸೌಲಭ್ಯಗಳನ್ನು ಒದಗಿಸಿ ಕೊಡುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಗ್ರಾಮಾಂತರ ಪ್ರದೇಶಗಳ ವಿಚಾರದಲ್ಲಿ ಅನೇಕರು ಈಗಾಗಲೇ ಮಾತನಾಡಿದ್ದಾರೆ. ಇನ್ನು ಪಶುವೈದ್ಯ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮನುಷ್ಯನ ವರ್ಗಕ್ಕೆ ಯಾವರೀತಿ ಔಷಧಿ, ಡಾಕ್ಟರುಗಳು ಅವಶ್ಯಕ ವಿದೆಯೋ, ಅದೇರೀತಿ ರೈತನಿಗೆ ಮುಖ್ಯವಾಗಿ ಬೇಕಾಗಿರತಕ್ಕ ಜಾನುವಾರುಗಳಿಗೆ ಔಷಧಿ, ಡಾಕ್ಟರುಗಳು ಅನುಕೂಲತೆಯನ್ನುಂಟು ಮಾಡಲು ಹೋಬಳಿಗೆ ಒಂದರಂತೆ ವೆಟರ್ನರಿ ಡಿಸ್‌ಪೆನ್ಸರಿ ತೆರೆಯಬೇಕು. ಅನೇಕ ದನಗಳಿಗೆ ಬರತಕ್ಕ ಜಾಡ್ಯಗಳಿಂದ ನೂರಾರು ದನಗಳು ಒಂದೊಂದು ಜಾಗದಲ್ಲಿಯೇ ಸಾಯುತ್ತವೆ. ಇದರಿಂದ ಏನಾಗುತ್ತದೆ ಎಂದರೆ ರೈತನು ಯಾವ ಜಾನುವಾರುಗಳನ್ನು ಅವಲಂಬಿಸಿ ವ್ಯವಸಾಯ ಮಾಡಬೇಕೋ ಅವುಗಳಿಂದಲೇ ನಷ್ಟಹೊಂದಿ ವ್ಯವಸಾಯದಲ್ಲಿ ನಿರುತ್ಸಾಹಿಯಾಗುತ್ತಾನೆ. ಅವನಿಗೆ ಯಾವ ಸಹಾಯವೂ ಇರುವುದಿಲ್ಲ. ಇದರಿಂದ ವೆಟರ್ನರಿ ಇಲಾಖೆಗಳ ಡಾಕ್ಟರುಗಳ ಒಂದು ಔಷಧಾಲಯವನ್ನು ಒಂದೊಂದು ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿ ಸ್ಥಾಪಿಸಿ ಪ್ರತಿಯೊಂದು ಗ್ರಾಮಕ್ಕೂ 8-15 ದಿವಸಗಳಿಗೊಮ್ಮೆ ಹೋಗಿ ಅಲ್ಲಿ ಜಾನುವಾರುಗಳ ವಿಷಯದಲ್ಲಿ ರೈತರಿಗೆ ಸಲಹೆಯನ್ನು ಹೇಳುವ ವ್ಯವಸ್ಥೆಯನ್ನು ಮಾಡಬೇಕು. ವ್ಯವಸಾಯ ಸಂಘ ಎಷ್ಟರ ಮಟ್ಟಿಗೆ ನಮ್ಮ ದೇಶದಲ್ಲಿ ರೈತರ ನೆರವಿಗೆ ಹೋಗುತ್ತದೆ ಎಂಬುದನ್ನು ನೋಡಬೇಕು. ಅಖಿಲ ಭಾರತ ಸಂಘದ ಆಶ್ರಯದಲ್ಲಿ 19 ಜಿಲ್ಲೆಗಳಲ್ಲಿ ಅದಕ್ಕೆ ಅನ್ವಯಿಸಿದಂತೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಸಂಘ ಇದೆ. ವ್ಯವಸಾಯ ಸಂಘಕ್ಕೆ ವ್ಯವಸಾಯ ಇಲಾಖೆಯಿಂದ ಬರುವ ನೆರವು ಬಹಳ ಕಡಿಮೆ. ಅದಕ್ಕೆ ನಮ್ಮ ಸರ್ಕಾರದವರು ಹೆಚ್ಚಿನ ಮಟ್ಟದಲ್ಲಿ ಸಹಾಯ ಮಾಡಬೇಕು. ವ್ಯವಸಾಯ ಸಂಘದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವ ಅನೇಕ ವಿಷಯಗಳು ನಮ್ಮ ಮುಂದೆ ಇವೆ. ಸರ್ಕಾರದ ವ್ಯವಸ್ಥೆ ಹೇಗಿದೆ ಎಂಬುದನ್ನು ಅವರೇ ಭಾವನೆ ಮಾಡಿಕೊಳ್ಳಬಹುದು. ಆದ್ದರಿಂದ ಮೊದಲು ಈ ಸಂಘಗಳನ್ನು ಉತ್ತಮ ಪಡಿಸಬೇಕು. ಆಗ ಈ ಸಂಘದ ಮುಖೇನ ರೈತವರ್ಗಕ್ಕೆ ಹೆಚ್ಚಿನ ಪ್ರಚಾರ ಕಾರ್ಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈ ದಿವಸ ಈ ಬೇಡಿಕೆ ಬರೀ ವ್ಯವಸಾಯಕ್ಕೆ ಸಂಬಂಧಪಟ್ಟ ಒಂದೇ ವಿಷಯವಲ್ಲ. ಇದರಲ್ಲಿ ರೂರಲ್ ಡೆವಲಪ್‌ಮೆಂಟ್ ವಿಷಯವೂ ಸೇರಿದೆ. ಇಡೀ ದೇಶದ ಎರಡು ಕೋಟಿ ಜನಸಂಖ್ಯೆಯ ಭವಿಷ್ಯ ಇದರಲ್ಲಿ ಅಡಗಿದೆ. ಇದು ಸುಲಭವಾಗಿ ಮುಗಿಸಿ ಬಿಡುವ ವಿಷಯವಲ್ಲ. ಇದು ಬಹಳ ಮುಖ್ಯವಾದ ವಿಷಯ. ನಾಳೆಯೂ ಕೂಡ ಈ ಬೇಡಿಕೆಯ ಮೇಲೆ ಚರ್ಚೆಯನ್ನು ಮುಂದುವರಿಸಬೇಕಾಗಿದೆ. ಬರೀ ಡಿಪ್ರೆಸ್ಡ್ ಕ್ಲಾಸಿನವರೇ ಮಾತನಾಡಬೇಕೆಂದಲ್ಲ. Every one is interested in their welfare. ನಾಳೆಯೂ ಕೂಡ ಈ ಬೇಡಿಕೆಯ ಚರ್ಚೆಯನ್ನು ಮುಂದುವರಿಸಬೇಕೆಂದು ಇನ್ನೊಮ್ಮೆ ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಈಗಾಗಲೇ ಈ ವಿಷಯು ಚರ್ಚೆಯಾಗಿ ಅಧ್ಯಕ್ಷರು, ಆಡಳಿತ ಪಕ್ಷದ ಲೀಡರು ಮತ್ತು ವಿರೋಧ ಪಕ್ಷದ ಲೀಡರು ಸಮಾಲೋಚನೆ ನಡೆಸಿ ಆಯಾ ದಿವಸಗಳಲ್ಲಿ ತೆಗೆದುಕೊಳ್ಳುವ ಡಿಮ್ಯಾಂಡನ್ನು ಆಯಾ ದಿವಸವೇ ಮುಗಿಸಬೇಕೆಂದು ತೀರ್ಮಾನವಾಗಿದೆ. ಅದನ್ನು ಮತ್ತೆ ಬದಲಾಯಿಸುವುದು ಸೂಕ್ತವಲ್ಲ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ-ಅನುಸೂಚಿತ ಜಾತಿಗಳು).—ಹರಿಜನರ ಪುರೋಭಿವೃದ್ಧಿಯ ವಿಷಯದಲ್ಲಿ ಇವೊತ್ತಿನ ಬೇಡಿಕೆ ಇದೆ. ಆ ವಿಷಯದಲ್ಲಿ ಇದುವರೆಗೂ ಹರಿಜನ ಸದಸ್ಯರು ಮಾತನಾಡಲಿಲ್ಲ. ಬೇರೆಯವರು ಅವರ ವಿಷಯದಲ್ಲಿ ಮಾತನಾಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾವು ಕೊಡಬೇಕಾದ ಸಲಹೆಗಳು ಬೇಕಾದಷ್ಟಿವೆ. ಇಂತಹ ಒಂದು ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

Mr. DEPUTY SPEAKER.—I have no objection in calling the members mentioned in the list. But it is not possible to postpone the business. I have no objection to sitt for a longer time today.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ಎರಡು ಪಾರ್ಟಿಯವರೂ ಸೇರಿ ಚರ್ಚೆ ಮಾಡಿದರು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಬ್ಬೊಬ್ಬರಿಗೂ, ಒಂದಾವರ್ತಿ ಎಷ್ಟೆಷ್ಟು ಟೈಂ ಕೊಡಬೇಕೆಂಬುದನ್ನು ತಾವು ನಿಶ್ಚಯ ಮಾಡಬೇಕು. ನಾಳೆ ಈ ಬೇಡಿಕೆ ವಿಷಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

5 P.M.

Sri S. SHARAN GOWDA (Jewargi).—Sir, chance is not given even to one member coming from Hyderabad. We have been practically neglected. After all, what is the object of our coming here?

Mr. DEPUTY SPEAKER.—Hyderabad members are as important as any other member in this House. I am not making any difference. I am trying to accommodate as many as possible.

Sri S. SHARAN GOWDA.—Since four days we have not been given any chance. We have written letters to the Chair with no effect. If you say that we are not entitled to speak here, we will walk out.

Mr. DEPUTY SPEAKER.—You are entitled to speak. I have already said that I am trying to accommodate as many members as possible. Everybody is entitled to speak. There is no use of continuing discussion on this point any longer. I call upon Sri Narayana Gowda to speak.

*ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಮಾನ್ಯ ಅಧ್ಯಕ್ಷರೆ, ಈ ದಿನ ಸರ್ಕಾರ ಈ ಸಭೆಯ ಅನುಮೋದನೆಗೆ ಮಂಡಿಸಿರುವ ಡಿಮ್ಯಾಂಡ್ ನಂಬರು 40, 40ಎ, 41 ಈ ಮೂರು ಡಿಮ್ಯಾಂಡುಗಳನ್ನೂ ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡಲು ನಾನು ಇಚ್ಛಿಸುತ್ತೇನೆ.

ಸ್ವಾಮಿ, ನಮ್ಮ ದೇಶದ ಜನಸಂಖ್ಯೆಯಲ್ಲಿ ಹೆಚ್ಚು ಜನ ಅವಲಂಬಿಸಿರತಕ್ಕಂಥ ಒಂದು ವೃತ್ತಿ ಎಂದರೆ ವ್ಯವಸಾಯ. ಈ ಸರ್ಕಾರ ನಮ್ಮ ವ್ಯವಸಾಯಗಾರರಿಗೆ ಈ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ನೋಡಿದರೆ ಸಮುದ್ರದಲ್ಲಿ ಒಂದು ವೀಸೆ ಸಕ್ಕರೆ ಹಾಕಿದ ಹಾಗೆ ಕಾಣಿಸುತ್ತದೆ. ಸಮುದ್ರದ ನೀರನ್ನು ಸಿಹಿ ಮಾಡಬೇಕೆಂದು ಒಂದು ವೀಸೆ ಸಕ್ಕರೆಯನ್ನು ಸಮುದ್ರಕ್ಕೆ ಹಾಕಿದರೆ ಹೇಗೆ ಆಗುತ್ತದೆಯೋ ಹಾಗೆ ವ್ಯವಸಾಯದ ಬಾಬಿಗೆ ಒದಗಿಸಿರುವ ಹಣದ ವಿಚಾರದಲ್ಲೂ ಆಗಿದೆ ಎಂದು ಹೇಳಬೇಕಾಗಿದೆ. ವ್ಯವಸಾಯಕ್ಕೆ ಈ ದಿವಸ ಸಂಬಂಧಪಟ್ಟಿರುವುದು ರೈತವರ್ಗ. ಹತ್ತಾರು ವರ್ಷದಿಂದ ಜಿರಾಯ್ತು ಕೆಲಸಗಳಿಗಿದ್ದ ಸಹಾಯ ಈಗ ಮೊಟಕಾಗುತ್ತಿದೆ. ಹಿಂದೆ ಟ್ರ್ಯಾಕ್ಟರಿಂದ ಜಮೀನು ಉಳಬೇಕಾದರೆ ಎಕರೆಗೆ $3\frac{1}{2}$ ರೂಪಾಯಿಗಳ ದರ ರೈತರಿಗಿತ್ತು, ಅದು ಕೆಲವು ಕಾಲದ ನಂತರ ಎಂಟು ರೂಪಾಯಿ ಆಯಿತು, ಈಗ 18 ರೂಪಾಯಿ ಮಾಡಿದ್ದಾರೆ. ಅದೇ ರೀತಿ ಒಂದು ಜೊತೆ ಗಾಡಿ ಪಟ್ಟಿಗೆ 24 ರೂಪಾಯಿ ದರ ಇತ್ತು, ಈಗ 44 ರೂಪಾಯಿ ಮಾಡಿದ್ದಾರೆ. ಗೊಬ್ಬರಕ್ಕೆ ರೂ. 4-7-0 ಇತ್ತು, ಈ ದಿವಸ ಅಮೋನಿಯಾ ಸಲ್ಫೇಟಿಗೆ ರೂ. 4-15-0 ಆಗಿದೆ. ಹೀಗೆ ವರ್ಷಂ ಪ್ರತಿ ಎಲ್ಲಾ ರೈತರಿಗೂ ಬೇಕಾದ ವ್ಯವಸಾಯದ ಉಪಕರಣ ವಗೈರೆ ಒದಗಿಸಿ ಬೆಳೆ ಹೆಚ್ಚಾಗಿ ಬೆಳೆಯಲು ಪ್ರೋತ್ಸಾಹ ಕೊಟ್ಟು ರೈತರನ್ನು ಉದ್ಧಾರ ಮಾಡುತ್ತಿದ್ದೇವೆ ಎಂದು ಭೂತ ಕನ್ನಡಿ ತೋರಿಸುತ್ತಿದ್ದಾರೆ; ನಿಜವಾಗಿಯೂ ಸರ್ಕಾರದ ಯೋಜನೆಯಿಂದ ರೈತರಿಗೇನೂ ಸಹಾಯವಾಗುತ್ತಿಲ್ಲ. ಜಿಲ್ಲೆಗೆ ಒಂದು ಅಥವಾ ಎರಡು ಟ್ರ್ಯಾಕ್ಟರುಗಳನ್ನು ಸರಬರಾಯಿ ಮಾಡಿದ್ದಾರೆ. ರೈತರು ತಮ್ಮ ಬಂಜರು ಜಮೀನನ್ನು ಉಳಲು ಬೇಕಾಗಿರುವ ಟ್ರ್ಯಾಕ್ಟರಿಗೆ ಅಪ್ಲಿಕೇಷನ್ ಕೊಟ್ಟು ಆರು ತಿಂಗಳು, ವರ್ಷ ಆದರೂ ಅದು ಸಿಕ್ಕುತ್ತಿಲ್ಲ. ಯಾರೋ ಪ್ರಭಾವ ಶಾಲಿಗಳು ವರ್ಷವೆಲ್ಲಾ ಅದನ್ನು ಉಪಯೋಗಿಸಿಕೊಂಡು ಉಳುಮೆ ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಒಂದು ಜಮೀನಿರುವವರು ಟ್ರ್ಯಾಕ್ಟರು ಬೇಕೆಂದು ಅರ್ಜಿಹಾಕಿದರೆ ಗೌರಿಬಿದನೂರು ತಾಲ್ಲೂಕಿನಲ್ಲಿ ಒಬ್ಬ ರೈತ ಉಳುಮೆ ಮಾಡುತ್ತಿದ್ದಾನೆ, ಈಗ ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ನೋಟೀಸ್ ಕೊಟ್ಟರು. ಈ ರೀತಿ ಬೂಟಾಟಿಕೆ ಯೋಜನೆ ಮಾಡಿ ಹಳ್ಳಿಗಳಲ್ಲಿ ರೈತರಿಗೆ ಉಪಕಾರ ಮಾಡುತ್ತೇವೆಂದು ಬಾಯಲ್ಲಿ ದೊಡ್ಡ ತತ್ವ ಹೇಳಿದರೆ ಅದರಿಂದ ಅನುಕೂಲವಾಗುವುದಿಲ್ಲ. ಪ್ರತಿಯೊಂದು ತಾಲ್ಲೂಕಿಗೂ ಒಂದು ಟ್ರ್ಯಾಕ್ಟರನ್ನು ಕೊಟ್ಟು, ಒಂದು ಲಾರಿಯನ್ನೊದಗಿಸಿ ರೈತರು ಕೇಳಿದಾಗ ಟ್ರ್ಯಾಕ್ಟರು, ಲಾರಿ, ಬೀಜದ ಬತ್ತ, ಗೊಬ್ಬರ, ಬೇಕಾದ ಸಲಕರಣೆ ಅವರಿಗೆ ಒದಗಿಸಬೇಕಾದ್ದು ಸರ್ಕಾರದ ಕರ್ತವ್ಯ. ಹಿಂದೆ ಬಾವಿಗಳನ್ನು ತೆಗೆಯಲು ರೈತರಿಗೆ ಒಂದು ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದರು. ನಿಜವಾಗಿಯೂ ಹೇಳಬೇಕಾದರೆ ನಮ್ಮ ಸರ್ಕಾರದ ಎಲ್ಲಾ ಯೋಜನೆಗಳಿಗಿಂತಲೂ ರೈತರಿಗೆ ಜಾಸ್ತಿಯಾಗಿ ಸಹಾಯ ನೀಡುವ ಯೋಜನೆಯೆಂದರೆ ಸಬ್ಸಿಡಿ ಯೋಜನೆ. ಇದರಿಂದ ಲಕ್ಷಾಂತರ ರೈತರು ಬಾವಿ

(ಶ್ರೀ ಇ. ನಾರಾಯಣಗೌಡ.)

ತೆಗೆಸಿಕೊಂಡು ಸೌಕರ್ಯ ಪಡೆಯುತ್ತಿದ್ದರು. ಈ ದಿವಸ ಸರ್ಕಾರ ಈ ಅನುಕೂಲವನ್ನು ಮೊಟಕು ಮಾಡುತ್ತಿದೆ. ಒಂದು ಸಾವಿರ ರೂಪಾಯಿ ಕೊಡ ತ್ತಿದ್ದುದನ್ನು 500 ರೂಪಾಯಿಗೆ ಇಳಿಸಿದರು, ಆ ಮೇಲೆ ಮತ್ತೆ 250 ರೂಪಾಯಿಗೆ ಇಳಿಸಿದರು. ಈಗ ಆ 250 ರೂಪಾಯಿ ತೆಗೆದುಕೊಳ್ಳಬೇಕಾದರೆ 125 ರೂಪಾಯಿ ಲಂಚ ಕೊಡ ಬೇಕಾಗುತ್ತದೆ. ಹೀಗಾದರೆ ಏನು ಪ್ರಯೋಜನ? ನೀರಾವರಿ ಸೌಕರ್ಯಕ್ಕೆ ಮೊದಲಿನಂತೆ ಈಗಲೂ ಏಕೆ ಸಾಕಷ್ಟು ಅನುಕೂಲ ಕೊಡಬಾರದು ! ಕೋಲಾರ ಜಿಲ್ಲೆ ಕ್ಷಾಮಪೀಡಿತ ಪ್ರದೇಶ, ಮೂರು ವರ್ಷಗಳಿಗೊಂದು ಸಲ ಕ್ಷಾಮ ಕ್ಕೀಡಾಗುತ್ತದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗು ತ್ತಿದೆ. ಈಚೆಗೆ ಮಳೆಯಿಲ್ಲದೆ ರೈತರು ಸಕಾಲದಲ್ಲಿ ಬಿತ್ತನೆ ಮಾಡುವುದಕ್ಕೆ ಅನುಕೂಲವಾಗಿಲ್ಲ. ಎಂಟು-ಹತ್ತು ದಿವಸಗಳಲ್ಲಿ ಮಳೆ ಬಾರದಿದ್ದರೆ ಅದನ್ನು ಮತ್ತೆ ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸಬೇಕಾಗಿ ಬರುತ್ತದೆ.

ಹೆಚ್ಚು ಆಹಾರ ಬೆಳೆಯಿರಿ ಎಂಬುದು ಬೂಟಾಟಿಕೆಯ ಯೋಜನೆಯೆಂದು ಹೇಳಬೇಕಾಗಿದೆ. ಈಗ ಗ್ರೋಮೋರ್ ಫುಡ್ ಎಂಬುದು ನೋಮೋರ್ ಫುಡ್ ಆಗಿದೆ. ಹೆಚ್ಚು ಆಹಾರ ಬೆಳೆಯಿರಿ ಎಂದು ಲಾಲ್‌ಬಾಗ್, ಮತ್ತು ಕಬ್ಬನ್‌ಪಾರ್ಕ್ ಮುಂತಾದ ಕಡೆ ಓಡಾಡಿ ಪ್ರಚಾರ ಮಾಡಿದರೆ ಇರುವ ಸಮಸ್ಯೆ ಬಗೆ ಹರಿಯುವುದಿಲ್ಲ. ಗ್ರಾಮಗಳಿಗೆ ಹೋಗಿ ಹೆಚ್ಚು ಆಹಾರ ಬೆಳೆಯಲು ಯಾವರೀತಿಯಲ್ಲಿ ಭೂಮಿ ಆ ಬಾದು ಮಾಡಬೇಕು, ಯಾವ ಭೂಮಿಗಳಲ್ಲಿ ಯಾವ ಬೆಳೆ ಹೇಗೆ ತೆಗೆಯಬೇಕು ಎಂದು ಸಲಹೆ ಕೊಡಬೇಕು. ಸುಮ್ಮನೆ ಬೆಂಗಳೂರು ನಗರದ ಟಾರು ರಸ್ತೆಗಳಲ್ಲಿ ತಿರುಗಿ ಪ್ರಚಾರ ಮಾಡಿದರೆ ಹೆಚ್ಚಾಗಿ ಬೆಳೆಯುವುದಿಲ್ಲ.

ಗ್ರಾಮಾಭಿವೃದ್ಧಿ ಕಾರ್ಯದ ವಿಚಾರದಲ್ಲಿ ಕೆಲವು ಸಲಹೆ ನೀಡುತ್ತೇನೆ. ಗ್ರಾಮಾಭಿವೃದ್ಧಿ ಕೆಲಸಗಳಿಗೆ ಸರ್ಕಾರ ಗ್ರಾಂಟನ್ನೊದಗಿಸುವಾಗ ಸಕಾಲದಲ್ಲಿ ಒದಗಿಸಬೇಕು. ಹೋದವರ್ಷ ಬಂಗಾರಪೇಟೆ ತಾಲ್ಲೂಕು ಅಭಿವೃದ್ಧಿಕಾರ್ಯಗಳಿಗೆ ಅಗ್ರಿಕಲ್ಚರಲ್ ಕಾಲೋನಿಗೆ 30 ಸಾವಿರ ರೂಪಾಯಿಗಳ ಗ್ರಾಂಟನ್ನು ಫೆಬ್ರುವರಿ ಹತ್ತನೆಯ ತಾರೀಖು ಕೊಟ್ಟರು, ಮಾರ್ಚಿ ಒಂದನೆಯ ತಾರೀಖು ಅದು ಲ್ಯಾಪ್ಸ್ ಆಯಿತು. ಹೀಗೆ ವರ್ಷಾಖೈರಿನಲ್ಲಿ ಹಣ ಒದಗಿಸಿ ಅದನ್ನು ಸಕಾಲದಲ್ಲಿ ಉಪಯೋಗಿಸದೆ ಉಳಿತಾಯ ಮಾಡಿ ಲ್ಯಾಪ್ಸಾಗಲು ಅವಕಾಶ ಮಾಡಿದರೆ ಜನರಿಗೆ ಸಹಾಯವಾಗುವುದಿಲ್ಲ. ಅಧಿಕಾರಿಗಳು ಅಸಡ್ಡೆಯಿಂದ ಸಕಾಲದಲ್ಲಿ ಕೆಲಸ ಮಾಡದೆ ತೊಂದರೆಯಾಗುತ್ತದೆ, ನಿಜವಾಗಿಯೂ ಗ್ರಾಮಾಭಿವೃದ್ಧಿ ಕಾರ್ಯವಾಗ ಬೇಕಾದರೆ ಸರ್ಕಾರ ದವರು ಯಾವುದಾದರೂ ಯೋಜನೆ ಮಾಡಿ ಹಣಒದಗಿ ಸುವಾಗ ಬಡ್ಜೆಟ್ ಅಧಿವೇಶನ ಮುಗಿದ ಕೂಡಲೆ ಗ್ರಾಂಟನ್ನು ಕಳುಹಿಸಬೇಕು. ಏಕೆಂದರೆ ಅಧಿಕಾರಿಗಳು ಅಂದಾಜು ಮಾಡಿ ಕೆಲಸ ಕೈಗೊಳ್ಳಲು ಸಾಕಷ್ಟು ಕಾಲಬೇಕು, ಆದ್ದರಿಂದ ಸಕಾಲದಲ್ಲಿ ಗ್ರಾಂಟನ್ನು ಕಳುಹಿಸಬೇಕು. ಅಲ್ಲದೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಕೊಟ್ಟಿಲ್ಲ, ಎಷ್ಟೋ ಹಳ್ಳಿಗಳಲ್ಲಿ ರಸ್ತೆಯಿಲ್ಲ, ಕುಡಿಯುವ ನೀರಿನ ಭಾವಿಗಳಿಲ್ಲ. ನಿಜವಾಗಿಯೂ ರೈತರಿಗೆ ನ್ಯಾಯವಾಗಿ ಒದಗಿಸ ಬೇಕಾದ ಸೌಕರ್ಯ ಒದಗಿಸದಿದ್ದರೆ ಯಾವ ಸರ್ಕಾರವೂ ಉಳಿಯುವುದಿಲ್ಲ. ನನ್ನ ಸ್ವಂತ ಅನುಭವ ಹೇಳುವುದಾದರೆ ಒಂದೊಂದು ಗ್ರಾಮಕ್ಕೆ 250 ರೂಪಾಯಿನಂತೆ ಕೆಲವು ಗ್ರಾಮಗಳಿಗೆ ಹಂಚಿಕೆ ಮಾಡಿದ್ದಾರೆ. ಹಾಗೆ ಮಾಡಿದರೆ ಎಷ್ಟು ಸೌಕರ್ಯ ನೀಡಲು ಸಾಧ್ಯವಾದೀತು ? ಚೆರಂಡಿ ವ್ಯವಸ್ಥೆಗೆ ಅದು ಸಾಕೆ ! ಆದ್ದರಿಂದ ಹೆಚ್ಚು ಗ್ರಾಮಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ವರ್ಷಕ್ಕೆ ಹತ್ತು ಗ್ರಾಮಗಳನ್ನು ಚುನಾಯಿಸಿ ಕೊಂಡು ಅವುಗಳಿಗೇನು ಸೌಕರ್ಯ ಬೇಕೋ ಅದನ್ನೊದಗಿಸಲು ಗ್ರಾಂಟು ಕೊಡಬೇಕು. ಅದನ್ನು ಬಿಟ್ಟು ಎಲ್ಲಾ ಗ್ರಾಮಗಳಿಗೂ ತಲಾ ನೂರು ರೂಪಾಯಿ ಕೊಟ್ಟರೆ ಕಂಟ್ರಾಕ್ಟರಿಗೆ 50 ರೂಪಾಯಿ ಹೋಗುತ್ತದೆ. ಕೆಲಸವೇನೂ ಆಗುವುದಿಲ್ಲ, ಅನ್ಯಾಯವಾಗಿ ಹಣ ಖರ್ಚಾಗುತ್ತದೆ. ಆದ್ದರಿಂದ ಕಡೆಯದಾಗಿ ಮನವಿ ಮಾಡುವುದು ಪ್ರತಿತಾಲ್ಲೂಕಿನಲ್ಲೂ ಹತ್ತಾರು ಗ್ರಾಮ ಚುನಾಯಿಸಿಕೊಂಡು ಅವುಗಳ ಅವಶ್ಯಕತೆಯೇನೆಂಬುದನ್ನು ಸಬ್ ಓವರ್ಸಿಯರಿಂದ ಅಂದಾಜು ಮಾಡಿಸಿ ವರ್ಷದ ಆಖೈರಿನೊಳಗಾಗಿ ಬೇಕಾದ ಸೌಕರ್ಯ ಅಲ್ಲಿಗೆ ಮಾಡಿಕೊಟ್ಟು ಗ್ರಾಮಗಳ ಅಭಿವೃದ್ಧಿ ಮಾಡಬೇಕು.

ಶ್ರೀ ವೈ. ರಾಮಕೃಷ್ಣ (ಬೆಂಗಳೂರು ಉತ್ತರ ತಾಲ್ಲೂಕು).—ಮಾನ್ಯ ಸಭಾಧ್ಯಕ್ಷರೇ, ಈದಿನ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತ ಹರಿಜನರ ಅಭಿವೃದ್ಧಿ ವಿಚಾರದಲ್ಲಿ ಕೆಲವಾರು ಸಲಹೆಗಳನ್ನು ನೀಡಲು ನಾನು ಬಯಸುತ್ತೇನೆ. ನಿಮ್ನ ವರ್ಗದವರ ಅಭಿವೃದ್ಧಿಯ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ ಕಳೆದ ಹತ್ತುವರ್ಷಗಳಿಂದ ಹರಿಜನರ ಪುರೋಭಿವೃದ್ಧಿ, ನಾವು ಎಷ್ಟು ನಿರೀಕ್ಷಿಸಿದ್ದೆವೋ ಅಷ್ಟು ಪೂರ್ಣವಾಗಿ ಸಫಲವಾಗಲಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೆ. ಒಂದು ನಿರ್ದಿಷ್ಟವಾದ ಯೋಜನೆಯನ್ನು ನಾವು ಅವರ ಪುರೋಭಿವೃದ್ಧಿಗೆ ಹಾಕಿಕೊಂಡಿಲ್ಲ. ಈಗ ಇರತಕ್ಕ ಹೌಸಿಂಗ್‌ಸ್ಕೀಮು ಏನಿದೆಯೋ, ಅದು, ಹರಿಜನರನ್ನು ಅಭಿವೃದ್ಧಿ ಮಾಡುವ ಬದಲು ಅವರನ್ನು ಎಷ್ಟು ಹಿಂದೆ ಹಾಕಬೇಕೋ ಅಷ್ಟನ್ನ ಮಾತ್ರ ಅದು ಮಾಡುತ್ತಿದೆ. ಏಕೆಂದರೆ, ನಾವು ಇವೊತ್ತಿನ ದಿವಸ ದೇಶದಲ್ಲಿ ಇರತಕ್ಕ ಎಲ್ಲ ಹರಿಜನರಿಗೂ 300-350 ರೂಪಾಯಿಗಳನ್ನು ಕೊಟ್ಟು ಹರಿಜನರ ಉದ್ಧಾರಮಾಡುತ್ತೇವೆಂದು ಸಾರುತ್ತಿರುವುದರಲ್ಲಿ ಸಾರ್ಥಕವಾಗುತ್ತಿಲ್ಲ. ಆದರೆ ಯಾರಿಗೆ ತಾಲ್ಲೂಕು ಆಫೀಸಿನಲ್ಲಿ ಬೆಂಬಲವಿದೆಯೋ ಅಂತಹವರಿಗೆ ಮಾತ್ರ ಸಹಾಯವಾಗುತ್ತಿದೆ. ಸುಮಾರು ಎರಡು ಮೂರು ಸಾವಿರ ಜನಗಳ ಪೈಕಿ ಒಬ್ಬಿಬ್ಬರಿಗೆ ಈ ಸ್ಕೀಮಿನಿಂದ ಅನುಕೂಲಗಳು ಆಗಿರಬಹುದು. ತನ್ನಲ್ಲಿದ್ದ ಎತ್ತುಗಳನ್ನು ಮಾರಿಯೋ ಅಥವಾ ತನ್ನಲ್ಲಿದ್ದ ಒಂದೆರಡು ಎಕರೆ ಜಮೀನನ್ನು ಮಾರಿಯೋ ಮನೆಗಳನ್ನು ಕಟ್ಟಿಸುವುದಕ್ಕೆ, ಸಾಮಾನುಗಳನ್ನು ಕೊಡುತ್ತಾರೆಂದು ಭಾವಿಸಿ ಗೋಡೆಗಳನ್ನು ಹಾಕಿಕೊಳ್ಳುತಾರೆ. ಅನಂತರ ತಿನ್ನುವುದಕ್ಕೆ ಅನ್ನವಿಲ್ಲದೆ, ಉಳಲು ಜಮೀನಿಲ್ಲದೆ ಮತ್ತು ಎತ್ತುಗಳಿಲ್ಲದೆ ಕಷ್ಟಪಡುತ್ತಾರೆ. ಆದುದರಿಂದ ಈ ಸ್ಕೀಮು ಫಲಕಾರಿಯಾಗಿ ಯಶಸ್ವಿಯಾಗಿ ನಡೆಯುವುದಿಲ್ಲ ಎಂದು ನಾನು ಇಲ್ಲಿ ಘಂಟಾಘೋಷವಾಗಿ ಹೇಳುತ್ತೇನೆ. ಕಳೆದ ಐದಾರು ವರ್ಷಗಳಿಂದ ನಾವು ಈ ಹೌಸಿಂಗ್ ಸ್ಕೀಮನ್ನು ಇಟ್ಟುಕೊಂಡು ದೊಡ್ಡದಾಗಿ ಏನು ಸಾಧಿಸಿದೆವು ಏನ್ನುವುದನ್ನು ಶ್ರೀಮಾನ್ ದುಗ್ಗಪ್ಪನವರು ಬಹಳಚೆನಾಗಿ ಹೇಳಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನೇನೋ ಕಟ್ಟಿದ್ದಾರೆ. ಆದರೆ ಕೆಲವುದಿನಗಳಾದಮೇಲೆ ನೋಡಿದರೆ ನಮಗೆ

ಕಾಣುತ್ತದೆ ಮೋಟುಗೋಡೆ, ಒಡಕಲುಹೆಂಚು, ಮುರುಕಲ ಬಾಗಿಲು, ಇವು ನಿಜವಾದ ಸಂಗತಿ. ಆದ್ದರಿಂದ ಹರಿಜನರ ಪ್ರಗತಿಯಾಗುವಂತೆ ಮಾಡಲು ಇದನ್ನು ಸರಕಾರದವರು ತೀರ್ವವಾಗಿ ಪರಿಶೀಲಿಸಿ ಈಗಿರುವಂತೆ ಈ ಸ್ಕೀಮನ್ನು ಮುಂದುವರಿಸಬಾರದೆಂದು ನಾನು ಸರ್ಕಾರದಲ್ಲಿ ಮನವಿಮಾಡಿ ಕೊಳ್ಳುತ್ತೇನೆ. ಬರೀ ಒಂದು ಹೌಸಿಂಗ್ ಸ್ಕೀಮನ್ನು ಮುಂದೆ ಇಟ್ಟುಕೊಂಡರೆ ಸಾಲದು, ಅವರ ಆರ್ಥಿಕಸ್ಥಿತಿ ಅಭಿವೃದ್ಧಿಯಾಗಬೇಕಾದರೆ, ವಿದ್ಯಾಭ್ಯಾಸ ಮುಂದುವರಿಯಬೇಕಾದರೆ, ಅವರಿಗೆ ಸಮಾಜದಲ್ಲಿ ಇರತಕ್ಕ ನ್ಯೂನತೆಗಳನ್ನು ಹೋಗಲಾಡಿಸಬೇಕಾದರೆ, ಅವರಿಗೇ ಪ್ರತ್ಯೇಕ ಒಂದು ಸ್ಕೀಮು ಇರಬೇಕು.

ಮೊನ್ನೆತಾನೇ ಇದಕ್ಕೆ ಸಬಂಧಪಟ್ಟ ಮಂತ್ರಿಗಳಾದ ಶ್ರೀ ಆರ್. ಚನ್ನಿಗರಾಮಯ್ಯನವರು "Policy Committee" ಎಂದು ಒಂದು ಸಲಹಾ ಸಮಿತಿಯನ್ನು ಮಾಡಿದ್ದಾರೆ. ದೇಶದಲ್ಲಿ ಇರತಕ್ಕ ಹರಿಜನರ ಆಗು ಹೋಗುಗಳನ್ನರಿಯಲು ಮತ್ತು ಅಭಿವೃದ್ಧಿ ಕಾರ್ಯಗಳನ್ನು ನೋಡಿಕೊಳ್ಳುವುದಕ್ಕಾಗಿ ಇದನ್ನು ಮಾಡಿದೆ ಎಂದು ಹೇಳಿದರು. ಇಂತಹ ಪಾಲಿಸಿ ಕಮಿಟಿಗಳ ರಚನೆಮಾಡುವುದರಿಂದ ಯಾವಪ್ರಯೋಜನವೂ ಆಗುವುದಿಲ್ಲ. ಇದರಲ್ಲಿ ಅದೇನು ಪಾಲಿಸಿ ಇ ದೆಯೋ ನನಗೇನೂ ಗೊತ್ತಾಗುವುದಿಲ್ಲ. ಇದನ್ನು Backward Class Commission Report ಗೆ ವಿರೋಧವಾಗಿ ಮಾಡಿದ್ದಾರೆ. ಅದನ್ನು ಕೇವಲ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇವೊತ್ತಿನ ದಿವಸ ಕರ್ಣಾಟಕವಾಯಿತು. ದೇಶದೊಡ್ಡದಾಯಿತು. ಹಿಂದೆ 18 ಲಕ್ಷ ಜನ ಇದ್ದ ಹರಿಜನರು ಈಗ 36 ರಿಂದ 40 ಲಕ್ಷವಾಯಿತು. ಆದರೆ ನಾವು ಖಂಡಿತವಾಗಿ ನೋಡುತ್ತಿರುವುದು ಏನೆಂದರೆ ನಿರಾಶೆ. ಎಲ್ಲಿಗೆಹೋದರೂ ಕೂಡ ಅವರಿಗೆ ತಕ್ಕ ಸೌಕರ್ಯಗಳು ದೊರೆಯುತ್ತಿಲ್ಲ. ಈವತ್ತಿನ ದಿವಸ ನಮಗೆ ಬರೀ ಬಾಯಿಮಾತಿನಲ್ಲಿ ಉತ್ತೇಜನ ದೊರೆಯುತ್ತಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆತಾನೇ ಒಂದು ಭಾಷಣದಲ್ಲಿ ಅಪ್ಪಣೆ ಕೊಡಿಸಿದರು' 'ಹರಿಜನರನ್ನು ನೂರಾರು ವರ್ಷಗಳಿಂದಲೂ ತುಳಿದಿಟ್ಟಿದ್ದೇವೆ, ಅವರಿಗೆ ನಮ್ಮನ್ನು ಟೀಕಿಸುವ ಹಕ್ಕಿದೆ ಅವರು ನಮ್ಮನ್ನು ಹಿಡಿದು ಹೊಡೆದರೂ ತಪ್ಪಲ್ಲ'' ಎಂಬುದಾಗಿ ಹೇಳಿದರು. ಅಷ್ಟೇಅಲ್ಲ ಮುಂದುವರಿದು ಹೇಳಿದರು ಹರಿಜನರಿಗೆ ಗೊತ್ತು ನನ್ನ ಅಂತಃಕರಣ ಏನು ಎನ್ನುವುದು ಎಂದು, ನಮಗೂ ಗೊತ್ತು, ಮುಖ್ಯಮಂತ್ರಿಗಳ ಅಂತಃಕರಣ ಹರಿಜನರ ವಿಷಯದಲ್ಲಿ ಹೇಗಿದೆ ಎಂಬುದು, ಅದನ್ನು ಚೆನ್ನಾಗಿ ಮನಗಂಡಿದ್ದೇನೆ. ಏಕೆಂದರೆ ಬಡ್ಜೆಟ್ಟು ಎಸ್ಟಿಮೇಟುಗಳಲ್ಲಿ ಹರಿಜನರ ಪ್ರಗತಿಗಾಗಿ ಎಷ್ಟು ಅನುಕೂಲಗಳನ್ನು ಒದಗಿಸಿದ್ದಾರೆ, ಹರಿಜನರ ವಿದ್ಯಾಭಾಸಕ್ಕಾಗಿ ಎಷ್ಟು ಹಣವನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ ಖಂಡಿತ ಇವರ ಅಂತಃಕರಣ ಎಷ್ಟಿದೆ ಎಂಬುದು ತನ್ನಷ್ಟಕ್ಕೆತಾನೇ ಎದ್ದುಕಾಣುತ್ತದೆ. ಇನ್ನೊಂದು ವಿಚಾರವನ್ನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಹರಿಜನ ಸದಸ್ಯರೊಬ್ಬರಿಗೆ ಸ್ಥಳಕೊಡಬೇಕಾಗಿದೆ. ಅನೇಕ ವರ್ಷಗಳಿಂದಲೂ ಈ ಬೇಡಿಕೆ ಇದೆ. ಅರ್ಹತೆ ಇರುವವರು ಯಾರಾದರೂ ಸಿಕ್ಕಿದರೆ ಅಂತಹವರಿಗೆ ಸ್ಥಾನಕೊಡುತ್ತೇವೆಂದು ಹೇಳಿದರು. ಖಂಡಿತ ಹೇಳುತ್ತೇನೆ ಹರಿಜನರಲ್ಲಿ ಅರ್ಹತೆಗಾಗಲೀ ದಕ್ಷತೆಗಾಗಲೀ ಯಾವ ಅಭಾವವೂ ಇಲ್ಲ. ಒಂದಕ್ಕೆ ಮಾತ್ರ ಅಭಾವವಿದೆ ಅದು ಅವಕಾಶಕ್ಕೆ ಅಭಾವ-ದಕ್ಷತೆ ಇದೆ, ಅರ್ಹತೆಯಿದೆ, ನಮ್ಮಲ್ಲಿ, ಗ್ರ್ಯಾಜ್ಯುಯೇಟುಗಳು ಡಬ್ಬಲ್ಲು, ಟ್ರಿಬಲ್ಲು ಗ್ರ್ಯಾಜ್ಯುಯೇಟುಗಳು ಇದ್ದಾರೆ. ಅನುಭವ ಪಡೆದವರೂ, ರಾಜಕೀಯದಲ್ಲಿ ಅರಿತು ನುರಿತವರೂ ಎರಡು ಮೂರು ವರ್ಷಗಳಕಾಲ ಮಂತ್ರಿಮಂಡಲದಲ್ಲಿದ್ದವರೂ ಇದ್ದಾರೆ. ಹಿಂದೆ ಪಾರ್ಲಿಮೆಂಟಿನ ಸದಸ್ಯರೂ ಮಂತ್ರಿಗಳಾಗಿದ್ದವರೂ ಇದ್ದಾರೆ. ಆದರೆ ಯಾರನ್ನೂ ಪಬ್ಲಿಕ್‌ಸರ್ವಿಸ್ ಕಮಿಷನ್ನಿನ ಸದಸ್ಯರನ್ನಾಗಿ ತೆಗೆದುಕೊಳ್ಳಲಿಲ್ಲ. ಹಾಗೆ ತೆದುಕೊಳ್ಳುವ ನಂಬಿಕೆಯೂ ಇಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ನೋಡಿದರೆ ಹರಿಜನರ ವಿಚಾರದಲ್ಲಿ ಇವರ ಅಂತಃಕರಣವೇನಿದೆಎಂಬುದು ವ್ಯಕ್ತವಾಗುತ್ತದೆ.

(MR. SPEAKER in the Chair)

ಈಗ ಈ ಬೇಡಿಕೆಯಲ್ಲಿ ಹಿಂದಿನ ವರ್ಷಗಳಲ್ಲಿ ಕೊಡುತ್ತಿದ್ದ 19 ಲಕ್ಷ ರೂಪಾಯಿಗಳನ್ನು ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಒದಗಿಸಿದ್ದಾರೆ. ಅದನ್ನು ನೋಡಿದರೆ ನಮ್ಮಮೇಲೆ ಎಷ್ಟು ಅಂತಃಕರಣವಿದೆಎನ್ನುವುದು ಬಹಳ ಚೆನ್ನಾಗಿ ತಿಳಿಯುತ್ತದೆ. ಹಿಂದೆ ಹಳೆಯ ಮೈಸೂರಿನಲ್ಲಿ 18 ಲಕ್ಷ ಹರಿಜನರಿದ್ದರು. ಈಗ ಕರ್ನಾಟಕದಲ್ಲಿ 40 ಲಕ್ಷದಷ್ಟು ಹೆಚ್ಚಿಗೆ ಹರಿಜನರಿದ್ದರೂ ಅವರಿಗೆ ದುಡ್ಡು ಎಷ್ಟನ್ನು ಖರ್ಚುಮಾಡುತ್ತಿದ್ದಾರೆಂದು ಹೇಳುವುದಾದರೆ ಹಿಂದಿನ ಬಡ್ಜೆಟ್ಟಿನಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಹರಿಜನರ ಪುರೋಭಿವೃದ್ಧಿಗಾಗಿ ತೆಗೆದಿಟ್ಟಿದ್ದರು. ಅದರಲ್ಲಿ ನಾಲ್ಕೈದು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿ ಉಳಿದಿರತಕ್ಕ ಹಣವನ್ನು ಲ್ಯಾಪ್ಸುಮಾಡುತ್ತಿದ್ದರು. ಖಂಡಿತವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ, ಈಗ ನಮಗೆ ಸಿಕ್ಕಿರತಕ್ಕ ಅವಕಾಶಗಳು ಮುಂದೆ ಇರುವುದಿಲ್ಲ. ರಾಜ್ಯಂಗದಲ್ಲಿ ಗೊತ್ತುಪಡಿಸಿರುವ ಅವಕಾಶ, ಸೌಲಭ್ಯಗಳಾಗಲಿ ಅಥವಾ ರಿಸರ್ವೇಷನ್ನುಗಳಾಗಲೀ ಇರುವುದಿಲ್ಲ. ನಮ್ಮ ಪುರೋಭಿವೃದ್ಧಿ ಕೆಲಸ ಕಾರ್ಯಗಳು ಕೆಲವು ದಿವಸಗಳಲ್ಲಿ ಮುಗಿಯಬೇಕು. ಹರಿಜನರ ಪುರೋಭಿವೃದ್ಧಿಗಾಗಿ ಸ್ವಲ್ಪ ಹೆಚ್ಚಿನ ಹಣವನ್ನು ಇಟ್ಟರೆ ದೇಶಕ್ಕೆ ಒಳ್ಳೆಯದು. ಹರಿಜನರ ಪ್ರಗತಿಗಾಗಿ ಇಟ್ಟಿರುವ ಹಣವನ್ನು ಲ್ಯಾಪ್ಸ್‌ಮಾಡುವುದು ಯಾವ ನ್ಯಾಯ ? ಆದುದರಿಂದ ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ ಖಂಡಿತ ಹಣವನ್ನು ಲ್ಯಾಪ್ಸ್‌ಮಾಡುವುದಕ್ಕೆ ಅವಕಾಶಕೊಡಬೇಡಿ. ಆ ರೀತಿ ಲ್ಯಾಪ್ಸ್ ಆಗುವಹಾಗಿದ್ದರೆ ಒಂದು ನಿಧಿಯನ್ನು ಏರ್ಪಡಿಸಿ ಹರಿಜನರ ಅಭಿವೃದ್ಧಿಗಾಗಿ ಈ ಹಣವನ್ನು ವಿನಿಯೋಗಿಸಿದರೆ ಬಹಳ ಅನುಕೂಲವಾಗುವುದೆಂದು ತಿಳಿಸಲಿಚ್ಛಿಸುತ್ತೇನೆ.

ಸ್ವಾಮಿ, ಇವೊತ್ತಿನ ದಿವಸ ಹರಿಜನರಸ್ಥಿತಿ ಹೇಗಿದೆಯೆಂದರೆ ಅವರಲ್ಲಿ ಶೇಕಡ 80ರಷ್ಟು ಮಂದಿಗೆ ಇರುವುದಕ್ಕೆ ಮನೆಯಿಲ್ಲ, ಉಳುವುದಕ್ಕೆ ಭೂಮಿಯಿಲ್ಲ. ತಿನ್ನುವುದಕ್ಕೆ ಅನ್ನವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಅಧ್ಯಕ್ಷರು.—ನಮ್ಮ ಮುಂದೆ Agriculture Demand ಇದೆ. Rural development ಮೇಲೆ ಇಲ್ಲಿ ಯಾವುದರ ಮೇಲೆ ಮಾತನಾಡುತ್ತಿದ್ದೀರಿ ?

ಶ್ರೀ ವೈ. ರಾಮಕೃಷ್ಣ.—Rural Development ಮೇಲೆ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—Backward Class ಮೇಲೆಮಾತನಾಡುತ್ತಾ, Rural Development Services for Backward Class ಗಳ ವಿಷಯವಾಗಿ ಹೇಳುತ್ತಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ಹೌದು ಸ್ವಾಮಿ ಇನ್ನೊಂದು ವಿಷಯ ಹಿಂದೆ ಹಳೆಯ ಮೈಸೂರಿನಲ್ಲಿ

(ಶ್ರೀ ವೈ. ರಾಮಕೃಷ್ಣ)
ಏನಿತ್ತು ಎಂದರೆ ಹರಿಜನರ ಪುರೋಭಿವೃದ್ಧಿಗೆ ಪ್ರತ್ಯೇಕ ಇಲಾಖೆ ಇತ್ತು, ಅದರಲ್ಲಿ ಹರಿಜನರೇ ಆದ ಕಮಿಷನರೊಬ್ಬರನ್ನು ನೇಮಕಮಾಡಿದ್ದರು, ಅದರಿಂದ ಆಗ ಕೆಲಸಕಾರ್ಯಗಳು ಬಹಳ ಸುಲಭವಾಗಿ ಸುಲಲಿತ ವಾಗಿ ನಡೆಯುತ್ತಿದ್ದವು. ಅದು ಈಗೇನಾಯಿತೋ ಗೊತ್ತಿಲ್ಲ. ಅದನ್ನು ತೆಗೆದುಬಿಟ್ಟು ಅದಕ್ಕೆ ಒಂದು ಇಲಾಖೆಯನ್ನು ಕಲ್ಪಿಸಿ, ಹಿಂದೆ ಇದ್ದಂಥಕಮಿಷನ ರಿಗೆ ಎಷ್ಟು ಕೆಲಸವಿತ್ತೋ ಅದಕ್ಕಿಂತ ಎರಡು ಮೂರರಷ್ಟು ಜಾಸ್ತಿ ಕೆಲಸವಿರುವಾಗ ಏಕೆ ಸ್ವಾಮೀ, ಪ್ರತ್ಯೇಕ ಇಲಾಖೆಯನ್ನು ಹರಿಜನರ ಪುರೋಭಿವೃದ್ಧಿ ಗಾಗಿ ತೆಗೆಯಬಾರದು ? ಪ್ರತಿಯೊಂದು ಡಿಸ್ಟ್ರಿಕ್ಟ್ ನಲ್ಲಿಯೂ ಕೂಡ Depressed Class Special officers ಗಳನ್ನು ನೇಮಕಮಾಡಿದ್ದಾರೆ. ಅವರ Designation ಗೆ ತಕ್ಕಹಾಗೆ ಅವರನ್ನು Special ಆಗಿ ಸರಕಾರದವರು ಇಟ್ಟಿದ್ದಾರೆ. ಯಾವ ಅಧಿಕಾರವೂ ಅವರಿಗೆ ಇಲ್ಲ. ಆವರು ಏನು ಮಾಡಬೇಕು ಎಂದರೆ ಆವಲ್ದಾರರ ಆಫೀಸ್‌ಗೆ ಹೋಗಿ, ರಿಕಾರ್ಡು ಗಳನ್ನು ಹುಡುಕಿ ಏನಾದರೂ ಕೆಲಸವಿದ್ದರೆ ನೋಡಿ ಕೊಂಡು ಹೋಗಬಹುದು. ಅವರಿಗೆ ಒಂದು ಎಕರೆ ಜಮೀನನ್ನು ಕೂಡ ಕೊಡುವ ಹಕ್ಕಿಲ್ಲ, ಒಂದುನೂರು ರೂಪಾಯಿಗಳನ್ನು ಕೂಡಗ್ರಾಂಟು ಮಾಡುವ ಅವ ಕಾಶವಿಲ್ಲ. ಅವರ ಗ್ರೇಡನ್ನು ಜಾಸ್ತಿಮಾಡಿ ಅಮ ಲ್ದಾರರ ದರ್ಜೆಗೆ ತರಬೇಕು. ಮತ್ತು ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿ ಹರಿಜನರೇ ಆದ ಒಬ್ಬರು ಕಮೀಷನರನ್ನು ಅದಕ್ಕೆ ನೇಮಕ ಮಾಡಬೇಕೆಂದು ವಿನಯದಿಂದ ಅರಿಕೆ ಮಾಡಿಕೊಳ್ಳು ತ್ತೇನೆ. ನಾನು ಹೀಗೆ ಕೇಳಿದರೆ, ಕೋಮುವಾರು ಭಾವನೆಯಿಂದ ಕೇಳುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಬಹಳ ಜನ ಹರಿಜನರು ಹಳ್ಳಿ ಗಳಿಂದ ಬರುತ್ತಾರೆ. ಮೊದಲೇ ದೊಡ್ಡ ಅಧಿಕಾರಿ ಗಳೆಂದರೆ ಅವರಿಗೆ ಭಯ, ಎರಡನೆಯದಾಗಿ ಅವರು ಬೇರೆ ಜಾತಿಯವರೆಂದರೆ ಇನ್ನೂ ಹೆಚ್ಚು ಭಯ. ಆದುದರಿಂದ ಯಾರು ಆ ಜನರೊಡನೆ ಮಿಳಿತ ವಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಾರೋ ಅಂಥವರನ್ನು ನೇಮಿಸಿದರೆ ಅವರಿಂದ ದೇಶದ ಹಾಗೂ ಹರಿಜನರ ಅಭಿವೃದ್ಧಿಯಾಗುತ್ತದೆಂದು ಹೇಳುತ್ತೇನೆ.

ಮತ್ತೊಂದು ವಿಚಾರವೆಂದರೆ, ವಿದ್ಯಾಭ್ಯಾಸದ ವಿಚಾರ. ಇದನ್ನು ಹೇಳುವಾಗ ನನಗೆ ತುಂಬ ವ್ಯಥೆ ಯಾಗುತ್ತದೆ. ಹರಿಜನರ ವಿದ್ಯಾಭ್ಯಾಸದ ಸಂಬಂಧ ವಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವುದ ಕ್ಕಿಂತ ಮುಂಚೆ ಎಷ್ಟು ಮೊಬಲಗು ಮೀಸಲಾಗಿಡಲ್ಪಡು ತ್ತಿತ್ತೋ ಅಷ್ಟೇ ಹಣವನ್ನಿಟ್ಟಿರುವುದನ್ನು ಈ ದಿನ ನೋಡುತ್ತಿದ್ದೇವೆ. ಬಹಳ ಜನರು ವಿದ್ಯಾವಂತರಾಗು ತ್ತಿದ್ದಾರೆ; ಬಹುಜನರಿಗೆ ವಿದ್ಯಾರ್ಥಿವೇತನ ಸಿಕ್ಕು ತ್ತಿಲ್ಲ. ನೂರಕ್ಕೆ ಐದು ಜನರಿಗೆ ಸಿಕ್ಕುತ್ತದೆ. ಇನ್ನು 95 ಜನರಿಗೆ ಸಿಕ್ಕುವುದಿಲ್ಲ. ಇವರಿಗೆ ಹಾಸ್ಟೆಲ್ ಅನು ಕೂಲವೂ ಸಿಕ್ಕುವುದಿಲ್ಲ. ಪ್ರತಿಯೊಬ್ಬ ಹರಿಜನ ವಿದ್ಯಾ ರ್ಥಿಗೂ ಪ್ರೈಮರಿ ಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲಿನಲ್ಲಿ ಓದುವವನಿಗೆ ಐದು ರೂಪಾಯಿ, ಹತ್ತು ರೂಪಾಯಿ, 15 ರೂಪಾಯಿನಂತೆ ವೇತನ ಕೊಟ್ಟರೆ ಇನ್ನು ಹತ್ತು ಹದಿನೈದು ವರ್ಷಗಳಲ್ಲಾದರೂ ಹರಿ ಜನರ ಪುರೋಭಿವೃದ್ಧಿಯನ್ನು ನಾವು ನೋಡುವ ಭರವಸೆಯಿರುತ್ತದೆಂದು ಹೇಳುತ್ತೇನೆ.

ಹರಿಜನ ಫಂಡಿನಿಂದ ಹಾಸ್ಟೆಲುಗಳನ್ನು ಕೆಲವು ಕಡೆ ಕೊಟ್ಟಿದ್ದಾರೆ. ಆದರೆ ಮೈಸೂರು, ಬೆಂಗಳೂರಿ ನಲ್ಲಿರುವ ಹಾಸ್ಟೆಲುಗಳಿಗೆ ಸ್ವಂತ ಕಟ್ಟಡಗಳಿಲ್ಲ. ಬೆಂಗಳೂರಿನ ನರಸಿಂಹರಾಜಾ ಹಾಸ್ಟೆಲ್ ಅನೇಕ ವರ್ಷಗಳಿಂದಿದೆ, ಇದಕ್ಕೂ ಕಟ್ಟಡವಿಲ್ಲ. ಆದುದರಿಂದ ಇವೆರಡಕ್ಕೂ ಕಟ್ಟಡಗಳನ್ನು ಕಟ್ಟಿಸಬೇಕೆಂದು ಪ್ರಾರ್ಥಿಸುತ್ತೇನೆ.

ಕಡೆಯದಾಗಿ ಒಂದು ವಿಚಾರ ಹೇಳುತ್ತೇನೆ. ಸ್ವಾಮಿ, ಹರಿಜನ ಕೇರಿಗಳನ್ನು ಊರಿನಿಂದಾಚೆ ನಿರ್ಮಾಣ ಮಾಡುವುದನ್ನು ತಪ್ಪಿಸಬೇಕು, ಹರಿಜನರ ಅಭಿವೃದ್ಧಿಯಾಗಬೇಕು, ಅವರೂ ಇತರರ ಮಟ್ಟಕ್ಕೇ ಬರಬೇಕು ಎಂದು ಹೇಳುತ್ತಾರೆ. ಆದರೆ ಹರಿಜನರ ಕೇರಿಗಳನ್ನು ಊರಿನ ಹೊರಗೆ ನಿರ್ಮಾಣ ಮಾಡು ತ್ತಾರೆ. ಇನ್ನು ಮುಂದಾದರೂ ಹರಿಜನರ ಕೇರಿ ಗಳನ್ನು ನಿರ್ಮಾಣ ಮಾಡುವಾಗ ಊರಿನೊಳಗೆ ಮಾಡ ಬೇಕೇ ಹೊರತು ಹೊರಗೆ ಮಾಡಲು ಅವಕಾಶ ಕೊಡ ಬಾರದು. ಪ್ರತ್ಯೇಕವಾಗಿ ಹರಿಜನರಿಗೆ ಬಾವಿಗಳನ್ನೂ ಕೊಡಬಾರದು. ನಿಮ್ಮವರ್ಗದ ಉದ್ಧಾರಕ್ಕಾಗಿಟ್ಟಿರುವ 19ಲಕ್ಷ ರೂಪಾಯಿಗಳಲ್ಲಿ ಇದಕ್ಕೂ ಕೊಡುತ್ತಾರೆ ಹೀಗೆ ಮಾಡಬಾರದು, ಜನರಲ್ ಫಂಡಿನಿಂದಕೊಡಬೇಕು.

ಅಸ್ಪೃಶ್ಯತೆಯ ನಿರೋಧಕ್ಕಾಗಿ ಒಂದು ಕಾನೂ ನಾಗಿದೆ. ಆದರೆ ಇದು ಎಲ್ಲಿಯೂ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಆ ಕಾನೂನು ಮಾಡಿದಾಗ ಎಲ್ಲ ಕಡೆಯೂ ಇದನ್ನು ಜಾರಿ ಮಾಡಿ ಅಸ್ಪೃಶ್ಯತೆ ಯನ್ನು ತೊಡೆದುಹಾಕುತ್ತಾರೆಂದು ನಂಬಿದ್ದೆವು. ಆದರೆ ಈ ಹೊತ್ತು ನೋಡಿದರೆ ಯಾವ ಹರಿಜನರಿಗೂ ಸರಿಯಾದ ಗೌರವ ಮನ್ನಣೆಗಳು ಸಿಕ್ಕುತ್ತಿಲ್ಲ. ಇದು ಸಿಕ್ಕಬೇಕಾದರೆ ಆ ಕಾನೂನು ಸರಿಯಾಗಿ ಜಾರಿಯಾಗ ಬೇಕು, ಈಕಡೆ ಸರ್ಕಾರ ಹೆಚ್ಚು ನಿಗಾ ಕೊಡಬೇಕು. ಹರಿಜನರಲ್ಲಿ ಅನೇಕರು ವಿದ್ಯಾವಂತರಾಗಿದ್ದಾರೆ, ಆದರೆ ಅವರಿಗೆ ಕೆಲಸವಿಲ್ಲ. ಶೇಕಡ 18ರಷ್ಟು ಸ್ಥಾನ ಗಳನ್ನೇನೋ ಸರ್ಕಾರ ಮೀಸಲಾಗಿಡಲು ಆಜ್ಞೆ ಮಾಡಿ ದ್ದಾರೆ. ಇದೇ ರೀತಿ ಸರ್ಕಾರಿ ಕೈಗಾರಿಕೆಗಳಲ್ಲಿ ಮಾಡುತ್ತಿಲ್ಲ. ಇದನ್ನು ಕೂಡಲೇ ಜಾರಿಗೆ ತರಬೇಕು.

ಕಡೆಯದಾಗಿ ಅನೇಕ ಹರಿಜನರು ತಮಗೆ ಸಮಾಜ ದಲ್ಲಿ ಗೌರವ ದೊರಕುತ್ತಿಲ್ಲವೆಂದು ತಮ್ಮ ಹಿಂದೂ ಧರ್ಮವನ್ನು ಬಿಟ್ಟು ಬೌದ್ಧ ಧರ್ಮವನ್ನೋ ಕ್ರೈಸ್ತ ಧರ್ಮವನ್ನೋ ಅವಲಂಬಿಸುತ್ತಿದ್ದಾರೆ. ಇದನ್ನು ತಡೆಗಟ್ಟಬೇಕಾದರೆ, ಹಿಂದೂ ಧರ್ಮದಲ್ಲಿರುವ ಅಸ್ಪೃಶ್ಯತೆಯನ್ನು ತೊಲಗಿಸಬೇಕು. ಹೀಗೆ ಮಾಡಿದ ಹೊರತು ಹರಿಜನರು ಅನ್ಯಮತಾವಲಂಬಿಗಳಾಗು ವುದನ್ನು ತಪ್ಪಿಸಲು ಸಾಧ್ಯವಿಲ್ಲ. ಆದುದರಿಂದ ಇದನ್ನು ಮಾಡಿ ಗಾಂಧೀಜಿಯವರ ಕನಸು ನನಸಾಗು ವಂತೆ ಮಾಡಬೇಕೆಂದು ಪ್ರಾರ್ಥಿಸಿ, ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri C. M. ARUMUGHAM (Kolar Gold Fields—Scheduled Casts).—Mr. Speaker, Sir, I am speaking on the rural development scheme of the Government of Mysore. I want to register a protest that the upliftment of Scheduled Castes or their amelioration has been included in the rural development scheme, whereas in the other States they have given a separate heading and a separate department. In the Mysore State they have clubbed this upliftment of the Scheduled Castes with the rural development and treated

the Scheduled Castes problem in a very light way. I want to quote what the saviour of Hinduism and the saviour of our nation, that is, Mahatma Gandhi said about the untouchables. He said:

> "I do not want to be born. If I have to be re-born, I should be born as an untouchable so that I may share their sorrows and sufferings and the affronts levelled at them in order that I may endeavour to free myself from that miserable condition. I therefore pray that if I should be born again, I should do so not as a Brahmin, not as a Kshatriya, not as a Vaisya or Sudra, but as an Adi Sudra."

The Government of Mysore will never improve the lot of the Scheduled Castes. Only the Scheduled Castes have to pray that Mahatma Gandhi himself should be re-born in this country to solve this problem. Until such period, the Congress Government should not bring this Scheduled Castes' problem under the rural development; they must treat it in a separate way and in a better way. In other States like Andhra they have got a development department which deals with the advancement of the Scheduled Castes, which deals with the upliftment or amelioration of these people. In Assam there is a separate department called Tribal Department. There is the Director for the Department who deals with the welfare of the Scheduled Caste people in respect of appointments, and promotions and using wells, roads and everything concerned with the Scheduled Castes. You were in Bombay, Sir, and you know that in Bombay there is a Backward Class Welfare Department which deals with the welfare of these people. In Madhya Pradesh also there is a separate department. I want to be very proud of Madras because they have got a separate department with more power, with more money to be spent for the amelioration of the Scheduled Castes. You may have read in the papers that they have allotted Rs. 1,94,00,000 for the upliftment of the Scheduled Castes. They have got a separate department and a separate Director who has got more power, to deal with Scheduled Castes problem. In Uttar Pradesh also there is a separate department. Even in Kerala there is a separate department called the Department for the advancement of Backward Classes. But I do not know why in Mysore they have clubbed this with social welfare department under the Director of Social Welfare. What do you mean by social welfare? The social problems deal with problems like widow re-marriage, dowry, age consent, etc. But the problem of the Scheduled Castes is not a social problem. It is a problem to get liberty, equality of opportunity from the major community who refuse to give liberty to the minority. So it is altogether a different problem; it is a problem of political importance. If you treat this as a social problem, then why do you reserve seats in the Legislature, why do you reserve seats in the Executive and why do you reserve appointments in the public services? Therefore the Scheduled Castes problem should be treated in a different way and should not be clubbed with the rural development scheme. I am going to suggest the method that you must adopt to ameliorate the condition of the Scheduled Castes. The Government is getting an enormous amount from the Government of India as an aid to remove untouchability. But as far as we can see here, they spend money for propaganda to remove untouchability. They spend thousands of rupees and put some wall posters and appoint some persons for propaganda. They publish a book called 'March of Harijan'. Only a certain percentage of people is able to read and know what it is. You must go to the village parts and see what is untouchability. Untouchability, as Dr. Ambedkar remarked, is a gold mine for the Hindus, because we know the Hindus make the untouchables work for pride and dignity and treat them as forced labourers. Therefore, untouchability is a gold mine. To remove untouchability what is the method you have adopted? Can you show me a village where there is no untouchability? Can you show me a village where both caste Hindus and

(SRI C. M. ARUMUGHAM)

untouchables take water in a common well ?

5-30 P.M.

HON'BLE MEMBERS.—Yes.

Sri C. M. ARUMUGHAM.—Definitely not. I am the secretary of the Scheduled Castes organisation and I have toured in that capacity and seen the actual state of affairs. Where is that village ? There is mere talk and nothing in action.

Sri H. K. VEERANNA GOWDH (Minister for Public Works)—Why do you talk without knowing ? You ask Sri Mallikarjunappa Gowda. In his village, there is only one well and all people draw water from that well.

Sri C. M. ARUMUGHAM.–There may be one or two exceptions.

A MEMBER.—On a point of information, Sir.

Sri C. M. ARUMUGHAM—Why should these Congress people fear when I stand to speak ? I do not yield, Sir. I am speaking on facts only.

Sri H. S. RUDRAPPA.—You must speak on facts.

Sri C. M. ARUMUGHAM.–I am speaking on facts. What have you done for the last ten years ? You have clubbed this untouchability problem with rural development and you have clubbed caste Hindus with rural development. Have you taken a model village or model colony where the caste Hindus and untouchables live side by side ? Have you established a model colony where the caste Hindus and untouchables take water from the same well ? I have received any number of complaints and I have got reports that untouchability is being practised. I submit to the Hon'ble Ministers let them go and see there for themselves. It is not only one place. There are so many places. The Congress people are afraid of saying it openly. I say it is a mockery to say that suffering of some people brings joy to others. What solace is it to a dying man to know that from his decaying body thousands of worms will come into life. It is only joy to the Congress Government to say that they are providing wells. It may be a matter of joy for the Congress Government to say that they are providing education. I am going to quote one instance and I want a definite reply from the Minister concerned. You have made separate allotments and call it as Scheduled Caste Amelioration Fund. About two years back, you have spent three lakhs and built a hostel for students in Kolar. It is a beautiful building. You have constructed definitely out of the Scheduled Caste Amelioration Fund. What have you done ? Is that building used exclusively for Scheduled Caste students ? After seeing that magnificent building you became so jealous and you have decided not to allow it to be used by Scheduled Castes. You made it a general hostel. It is something like this: when you are in search of a girl for your son and after seeing her beauty you want to marry her yourself ! (*Laughter*). You are so jealous about Scheduled Caste people. What is the reply from the Government ? I want to know, why you have spent three lakhs from the Scheduled Caste Amelioration fund and afterwards directed that it should be a general hostel. There are very many such instances which I can quote. I am not speaking without facts. If the caste Hindus want a temple, the Amildar says, we have the Scheduled Caste Amelioration Fund and so they can have the temple. There are many instances of this type happening daily. Sir, if you refer to figures, you will find that 65 lakhs have been spent for the amelioration of Scheduled Castes, backward-classes, and Scheduled Tribes for wells. I want to make a sincere statement before I go further.

You give some money because you are so broad-minded; the Congress Government are so broad-minded; the Ministers, especially the Finance Minister is so broad-minded as to allot 65 lakhs for the amelioration of backward-classes, Scheduled Castes and Scheduled Tribes. Dispite the Madras Government being very narrow minded, they have allotted Rs. 1,94,000. You allotted 19 lakhs to build houses for Scheduled Castes. Some amount is placed at the disposal of Amildar of the taluk. He being a caste-Hindu, feels

very jealous, and therefore allows the amount to lapse.

Sri R. CHENNIGARAMIAH.—There are so many Harijan Amildars now.

Sri C. M. ARUMUGHAM.—I am not concerned with it. I am not saying that there are not. In the first place, I do not accept that word Harijan. I will not accept it. I will never say that word for myself. What do you mean by Harijan ? I object to the very use of that word 'Harijan'. When they allot this amount, what will they do ? Because they feel very jealous they never use it for the proper cause. I am not saying that poor people are found only among Scheduled Castes. There are poor people even in other castes and communities. There are poor people even among Brahmins. There are poor people in every caste. What you should do is that you should allot money to every community to be utilised for the purpose of housing, education, etc., say at the rate of Rs. 3C0 per head. But before that money reaches the party, Rs. 100 goes to somebody, Rs. 100 goes to the patel of the village and Rs. 50 to some others and it is only the rest of Rs. 50 that reaches the poor Scheduled Castes and what kind of building you can expect him to put up ? Naturally he cannot build. How many houses have been built like this, can you tell me ? You allot such inadequate funds and you are saying that you are abolishing untouchability ; you want to remove the caste system. I know Hinduism is built on caste system. It will be there for ever. I know definitely you cannot abolish it. There is somebody else who will do it. When you say you want to remove untouchability, why do you want to provide separate wells for Scheduled Castes ? Why not only one well for both the Scheduled Castes and Hindus ? When you are discrimi.ating in this way, how can you expect untouchability to be abolished ? Further, Sir, the Scheduled Castes have not been given any education of any kind. It is only on paper. It is not implemented. In every village the Scheduled Castes suffer very much the hands of caste-Hindus. Eeverything is in the hands of caste-Hindus. Hindus never allow the Scheduled Caste people to take water from their well. I can give you an instance. In a village called Thorai near Malur, because a new well was provided to the Scheduled Castes the caste Hindus took objection and assaulted the Scheduled Castes and burnt a few houses. To avoid such incidents I want to make a few suggestions.

The Speaker is very kind to me in allowing some more time.

Mr. SPEAKER.—Please finish as early as possible.

Sri C. M. ARUMUGHAM.—Yes, Sir. This is a subject on which I want to speak. After all I speak only on a few occasions. This is a very important matter.

Mr. SPEAKER.—The Hon'ble Member has been speaking on every subject. He may please finish soon.

Sri C. M. ARUMUGHAM.—I will finish, Sir. My suggestion to the Government is, every year, they must earmark in the budget at least two crores of rupees which should be spent only for education. You say, you give grants to build houses and wells. It is your moral duty to provide wells and houses for the people. It is your elementary duty to provide wells for the Scheduled Castes in the same way as you provide wells for others. You must provide roads for the Scheduled Castes. You must do these things for every body else. You must provide education. You must give 2 crores every year. The Andhra Government has done this. They are spending one crore on the education, secondary—university and advanced—of the Scheduled Castes.

Number 2 is—all the Government lands must be reserved for the separate settlement of the Scheduled Castes through a Settlement Commissioner. Representation for the Scheduled Castes according to their needs and numbers and importance must be adequately provided, in the Executive, and Judicial, public service and in the Public Service Commission. There must be a Scheduled Caste member in the Public Service Commission to look after the interests of the Scheduled Castes. There should be a Commissioner with a Police force under him.

(SRI C. M. ARUMUGHAM)

This Commissioner should look after the interests of the Scheduled Castes in their appointment, promotion and transfer. He must be vested with a Police force to use them wherever untouchability is practised. Lastly, if you remove untouchability, first of all absorb all the untouchable people in industries. In industries, nobody can practise untouchability. In the Kolar Gold Field Mines, nobody can say that he is an untouchable, because it is an industrial area and without the help of the Scheduled Castes they cannot carry on the work. If you want to abolish untouchability and improve the Scheduled Castes, Government should take my suggestion and it will work out all right. Provision of 25 or 30 lakhs in this year's Budget for the improvement of the Scheduled castes is inadequate and we protest.

Thanking you, Sir.

ಶ್ರೀಮತಿ ಚಂಪಾಬಾಯಿ ಭೋಗಲೆ (ಹುಕ್ಕೇರಿ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಸರ್ಕಾರದವರು ಹಿಂದುಳಿದ ವರ್ಗಗಳವರ ಸಲುವಾಗಿ ಬೇಕಾದಷ್ಟು ಸವಲತ್ತುಗಳನ್ನು ಒದಗಿಸುತ್ತಿದ್ದಾರ, ಹಾಗೂ ಕಾಯಿದೆಗಳನ್ನು ಪಾಸು ಮಾಡುತ್ತಿದ್ದಾರೆ. ಆದರೆ ಕೆಳಗಿನ ಅಮಲ್ದಾರರುಗಳು ಯೋಗ್ಯರೀತಿಯಲ್ಲಿ ಅವುಗಳ ಅಮಲ ಬಜಾವಣೆಯನ್ನು ಮಾಡುತ್ತಿರುವುದಿಲ್ಲ. ಕೆಳಗಿನ ಸಂಬಂಧಪಟ ಅಧಿಕಾರಿಗಳು ಈ ರೀತಿ ದುರ್ಲಕ್ಷ್ಯದಿಂದ ಹಾಗೂ ಸ್ವಾರ್ಥತೆಯಿಂದ ಕಾಂಗ್ರೆಸ್‌ಸರ್ಕಾರಕ್ಕೆ ಕೆಟ್ಟಹೆಸರು ತರುತ್ತಿದ್ದಾರೆ. ಸರ್ಕಾರದವರು ಹಿಂದುಳಿದ ವರ್ಗದವರನ್ನು ಇಂತಿಷ್ಟು ಪ್ರಮಾಣದಲ್ಲಿ ನೌಕರಿಗೆ ತೆಗೆದುಕೊಳ್ಳಬೇಕೆಂದು ಕಾಯಿದೆಯೇನೋ ಮಾಡಿದ್ದಾರೆ. ಆದರೆ ಕೆಳಗಿನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಿದೆ. ಸದ್ಯದ ಬಡ್ಜೆಟ್ಟಿನ ಅಂಕಿಗಳಿಂದ ನೋಡುವುದಾದರೆ ಹಿಂದುಳಿದ ವರ್ಗದವರಿಗೆ ಬಹಳ ಅನ್ಯಾಯವಾಗಿದೆ. ನಿಜವಾಗಿ ಅವರ ಕಲ್ಯಾಣವಾಗಬೇಕಾದರೆ ಅವರ ಜನಸಂಖ್ಯೆಯು ಪ್ರಮಾಣದಲ್ಲಿ ಹಣ ಮಂಜೂರು ಮಾಡಬೇಕು. ಈಗ ಮಂಜೂರು ಮಾಡಿರುವ ಹಣ ತೀರ ಕಡಮೆಯಾಗಿದೆ.

ಈಗಿನ ಅನ್ನಧಾನ್ಯದ ಕಠಿಣ ಪರಿಸ್ಥಿತಿಯಲ್ಲಿ ಹರಿಜನರ ಪರಿಸ್ಥಿತಿಯು ಬಹಳ ಕೆಡುತ್ತಿದೆ. ಬೆಳಗಾಂ ಜಿಲ್ಲೆಯ ಹರಿಜನರ, ಅದರಲ್ಲಿಯೂ ಚಿಕ್ಕೋಡಿ, ಹುಕ್ಕೇರಿ, ರಾಯಭಾಗ, ಅಥಣಿ, ಖಾನಪುರ ಗೋಕಾಕಗಳಲ್ಲಿರುವ ಹರಿಜನರ ಪರಸ್ಥಿತಿಯು ಚಿಂತಾಜನಕವಾಗಿದೆ. ಅವರ ಸಲುವಾಗಿ ಸರ್ಕಾರದವರು ಅಲ್ಲಲ್ಲಿ ಉದ್ಯೋಗದ ಕೇಂದ್ರಗಳನ್ನು ತೆಗೆದು ಅವರ ಉಪವಾಸವನ್ನು ಕೂಡಲೆ ನಿಲ್ಲಿಸಬೇಕು. ಎಷ್ಟೋ ವೇಳೆ ಕೆಲವು ಕೆಲಸಗಳು ಕೆಳಗಿನ ಆಫೀಸುಗಳಲ್ಲಿ ವರ್ಷಗಟ್ಟಲೆ ಖಾಲಿ ಬಿದ್ದಿರುತ್ತದೆ. ಅವುಗಳಿಗೆ ಜಿಲ್ಲಾಧಿಕಾರಿಗಳೇ ಜವಾಬ್ದಾರಿಗಳಾಗಿರುತ್ತಾರೆ. ಇಂಥವುಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ತಕ್ಕ ಸೂಚನೆ ಕೊಡಬೇಕೆಂದು ಹೇಳುತ್ತೇನೆ. ಹಿಂದುಳಿದ ವರ್ಗದವರ ಸಲುವಾಗಿ ಮಂಜೂರಾದ ಹಣವು ಖರ್ಚಾಗದೆ ತಿರುಗಿ ಸರ್ಕಾರಕ್ಕೆ ಹೋಗುತ್ತಿರುವುದು ಕಂಡುಬಂದಿದೆ. ಹೀಗಾಗದಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಫಡ ಭೂಮಿಗಳನ್ನು ಕೊಡಬೇಕೆಂದು ಸರ್ಕಾರದವರೇನೋ ಕಾಯದೆ ಪಾಸುಮಾಡಿದ್ದಾರೆ. ಆದರೆ ಊರ ಜನರ ತಕರಾರು ಬಂದುಬಿಟ್ಟರೆ ಅದನ್ನು ಹರಿಜನರಿಗೆ ಕೊಡಬಾರದೆಂದು ಮಾಡಿದ್ದೀರಿ. ಊರ ಜನರಂತೂ ಹರಿಜನರನ್ನು ಎಂದಿನಿಂದಲೂ ಊರ ಹೊರಗೇ ಇಟ್ಟಿರುತ್ತಾರೆ. ಅಂದಮೇಲೆ ಹರಿಜನರ ಕಲ್ಯಾಣವಾಗಬೇಕೆಂದು ಅವರು ಹೇಗೆ ತಾನೆ ಇಚ್ಛಿಸುವರು ? ಆದ್ದರಿಂದ ಹರಿಜನರಿಗೆ ಭೂಮಿ ಕೊಡಬೇಕಾದರೆ ಊರಜನರ ಕಬೂಲಿ ಕೇಳದೆ ಕೊಡಬೇಕೆಂದು ಹೇಳುತ್ತೇನೆ.

ಈ ಎಲ್ಲಾ ಕಾರ್ಯಗಳ ಅಮಲ ಬಜಾವಣೆಯು ಯೋಗ್ಯರೀತಿಯಲ್ಲಿ ಮಾಡುವುದಕ್ಕಾಗದಿದ್ದರೆ ನಾವು ಪ್ರಜಾ ಪ್ರಭುತ್ವವನ್ನು ಆಚರಣೆಯಲ್ಲಿ ತರಲು ಅಯೋಗ್ಯರೆಂದು ತಿಳಿಯಬೇಕು ಅಷ್ಟೆ. ನಮಗೆ ರಾಜ್ಯ ನಡೆಸುವುದಕ್ಕೆ ಬರದಿದ್ದರೆ ಸ್ವರಾಜ್ಯವನ್ನು ಪಡೆದೂ ಉಪಯೋಗವಿಲ್ಲವೆನ್ನಬೇಕು. ಆದ್ದರಿಂದ ಸರ್ಕಾರದವರು ಹೆಚ್ಚು ತತ್ಪರತೆಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಹುಕ್ಕೇರಿ, ಗೋಕಾಕ್ ತಾಲ್ಲೂಕುಗಳಲ್ಲಿಯ ಹರಿಜನರು ಬಹಳ ಹಿಂದುಳಿದವರಾಗಿದ್ದಾರೆ. ಅಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಕೊರತೆ ಬಹಳವಾಗಿದೆ. ಆದ್ದರಿಂದ ಹುಕ್ಕೇರಿ ತಾಲ್ಲೂಕ್ ಸಂಕೇಶ್ವರದಲ್ಲಿ ಒಂದು ಹೆಣ್ಣು ಮಕ್ಕಳ ಬೋರ್ಡಿಂಗನ್ನು ಸರ್ಕಾರದವರು ತಮ್ಮ ಸ್ವಂತ ಖರ್ಚಿನಿಂದ ತೆರೆಯಬೇಕೆಂದು ಹೇಳುತ್ತೇನೆ.

ಆಮೇಲೆ ಕಾನಾಪುರ ತಾಲ್ಲೂಕಿನಲ್ಲಿ ಸುರಪುರ ಮತ್ತು ಕರಿಕಟ್ಟಿಹೊಸ-ಗ್ರಾಮಗಳಲ್ಲಿ ಹರಿಜನರು 35—40 ಕುಟುಂಬಗಳಿವೆ. ಅವರಿಗೆ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಬೀಳು ಭೂಮಿಯನ್ನು ಕೊಟ್ಟಿದ್ದು, ಅನಾವಶ್ಯಕವಾಗಿ ಅದನ್ನು ಅವರಿಗೆ ರಿಜಿಸ್ಟರ್ ಮಾಡಿಕೊಟ್ಟಿರುವರು. ಕೇವಲ ಉದರ ನಿರ್ವಹಣೆಗಾಗಿ ಖರ್ದಿ ಟಿಕಾಣಿ ಮಾಡುವ ಆ ಹಳ್ಳಿಯ ಜನರಿಗೆ ಈ ಭೂಮಿಯನ್ನು ಕೇವಲ ನಾಲ್ಕಾಣೆಯ ಕಂದಾಯದ ಅವರಿಗೆ ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಸರಿಯಾದ ಭೂಮಿಯನ್ನು ಅವರಿಗೆ ಕೊಟ್ಟಿಲ್ಲ, ಅವರು ಬಡವರಾಗಿದ್ದು ಹುಲ್ಲಿನ ಜೋಪಡಿಗಳಲ್ಲಿ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಕೋಳಿಗಳಂತೆ ಜೀವಿಸುತ್ತಿದ್ದಾರೆ. ಅವರು ಸರಿಯಾದ ಮನೆ ಕಟ್ಟಿಕೊಳ್ಳಬೇಕೆಂದು ಎಷ್ಟೋ ವೇಳೆ ಸಹಾಯ ಕೇಳಿದರೂ ಇಲ್ಲಿಯ ತನಕವೂ ಅವರನ್ನು ಹೇಗಿದ್ದಾರೆ ಏನಾಗಿದ್ದಾರೆಂದು ಸರ್ಕಾರದವರು ಕೇಳಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಅವರ ಕಷ್ಟಗಳ ಕಡೆ ನಿಗಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನ್ಯಾಯವಾಗಿ ಅವರಿಗೆ ಸರ್ಕಾರದವರು ಭೂಮಿಯ ದುರಸ್ತಿಯ ಸಲುವಾಗಿ ಬೇಕಾದಷ್ಟು ಸೌಕರ್ಯಗಳನ್ನು ಮತ್ತು ಬುಲ್‌ಡೋಜರುಗಳನ್ನು ತಮ್ಮ ಸ್ವಂತ ಖರ್ಚಿನಿಂದ ಒದಗಿಸಿ ಕೊಡಬೇಕಾಗಿತ್ತು. ಇಲ್ಲಿಯತನಕ ಏನೂ ಕೊಟ್ಟಿಲ್ಲ.

ಸ್ವಲ್ಪಮಟ್ಟಿಗೆ ಸಾಲವನ್ನೇನೋ ಕೊಟ್ಟಿರುತ್ತಾರೆ. ಉದರ ನಿರ್ವಹಣೆಗಾಗಿಯೇ ಬಹಳ ಕಷ್ಟಪಡುತ್ತಿರುವ ಆ ಹರಿಜನರಿಗೆ ಈ ಸಾಲವನ್ನು ಮೊಫಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮೊದಲನೆಯ ಪಂಚವಾರ್ಷಿಕ ಯೋಜನೆ ಷುರುವಾಗಿ ಇಲ್ಲಿಗೆ 7 ವರ್ಷಗಳಾದವು. ಇಷ್ಟಾದರೂ ಅವರಿಗೊಂದು ಬಾವಿಯಿಲ್ಲ, ಮನೆಯಿಲ್ಲ. ಅಲ್ಲಿ 700 ಎಕರೆ ಬೀಳು ಭೂಮಿಯಿದೆ. ಸಾವಿರಾರು ಎಕರೆ ಜಂಗಲಿರುವ ಆ ಪ್ರದೇಶದಲ್ಲಿ ಇವರುಗಳಿಗೆ ಹತ್ತು—ಹತ್ತು ಎಕರೆಯಾದರೂ ಮಂಜೂರು ಮಾಡಿಕೊಟ್ಟು ಸಹಾಯಮಾಡಬೇಕು. ಮಾನ್ಯ ಮಂತ್ರಿಗಳಾದ ರುದ್ರಪ್ಪನವರು ಸುರಪುರ, ಕರಿಕಟ್ಟಿ ಸೊಸೈಟಿಗೆ ಭೇಟ್ಟಿಕೊಟ್ಟು ಅಲ್ಲಿನ ಸ್ಥಿತಿಗತಿಗಳನ್ನು ನೋಡಿಬಂದಿದ್ದಾರೆ. ಆದರೂ ಇಲ್ಲಿಯವರೆಗೂ ಆ ಹರಿಜನರ ಯೋಗಕ್ಷೇಮದ ಕಡೆ ತಾವು ಲಕ್ಷ್ಯಕೊಟ್ಟಿಲ್ಲ. ಆ ಹರಿಜನರು ಸ್ವಂತ ಕಾಲಮೇಲೆ ನಿಂತು ಉದರ ನಿರ್ವಹಣೆ ಮಾಡಬೇಕೆಂದು ಇಚ್ಛೆಪಡುತ್ತಾರೆ. ಅವರಿಗೆ ಸಹಾಯ ನೀಡುತ್ತಾರೆಂದು ನಂಬಿದ್ದೇನೆ. ತಪಾಸಿಯುವರು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಸುರಪುರಕ್ಕೆ ಒಂದು ತಮ್ಮ ಸ್ವಂತ ಹಸ್ತದಿಂದ ಉಧ್ಘಾಟನೆ ಮಾಡಿ ಹೋದರು. ಆದರೆ ಇಲ್ಲಿಯ ತನಕ ಅದರ ಕಡೆ ಗಮನ ಕೊಟ್ಟಿಲ್ಲ. ನಾನು ಈಗಲಾದರೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅವರ ಕಡೆ ಗಮನ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

[Sri Talwalkar spoke in Marathi. His speech is printed in the Appendix tot his volume].

Sri B. SHAM SUNDER (Bhalki).—Sir, you should continue the debate till we all get a chance. We are sitting here like spectators. We have come here just to see and not to talk.

Mr. SPEAKER.—It is not possible for me to give chance to everybody. As far as possible I will try to give chance to members. After all today the highest number of speakers are from the Scheduled Castes.

Sri B. SHAM SUNDER.—We have come here not as party men. We are the people who represent lakhs of people. We are not here as individuals and the community we represent is the most downtrodden one.

Mr. SPEAKER.—It is not a question of making a lecture here. The Hon'ble Member has to behave well in the House.

(Sri Sham Sunder was standing)

If the Hon'ble Member is going to stand while I am on my legs it is not fair to the House. As the Hon'ble Member knows it, he will resume his seat so that I may speak.

(Sri Sham Sunder took his seat)

So far five members from Scheduled Castes have spoken today. I will try to give chance to others if it is possible. If anybody argues with me that he must be given a chance I will not give him a chance. If he makes a request I will consider. It is not a question of having a right to speak in the House. The right is conditioned by the fact that the Speaker gives a chance to the Members. There is no absolute right vested in the members. If the Hon'ble member is under the impression that he has a right and that right he has to perform, I would only say that he is under a wrong impression. If he makes a request to me then I will consider it. After all who is the member here who does not represent the people? Everybody does represent the people. I also represent people from my constituency. So, if he makes a request to me I will consider. If the member speaks in the strain he does, I cannot help him.

Sri B. SHAM SUNDER.—All that we speak is only a request.

Mr. SPEAKER.—If the Hon'ble Member makes a revolting speech, it is impossible. for me to accommodate him If it is a request I will consider.

6 P.M.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಮಾನ್ಯ ಅಧ್ಯಕ್ಷರೆ, ಈ ದಿವಸ ಸಭೆಯು ಮುಂದೆ ಮಂಡಿಸಿರತಕ್ಕಂಥ, ಆಗ್ರಿಕಲ್ಚರ್, ರೂರಲ್ ಡೆವಲಪ ಮೆಂಟ್, ವೆಟರಿನರಿ ಬೇಡಿಕೆಗಳನ್ನು ಅಂಗೀಕರಿಸುತ್ತಾ, ನನ್ನ ವಿಚಾರಗಳನ್ನು ಈ ಸಭೆಯು ಮುಂದೆ ಇಡಲು ಇಷ್ಟಪಡುತ್ತೇನೆ. ವ್ಯವಸಾಯಕ್ಕೆ ಸಂಬಂಧಪಟ್ಟ ಅಂದರೆ ಆಗ್ರಿಕಲ್ಚರಲ್ ಸ್ಕೂಲ್ಸ್ ಐಟಂಗೆ 14,27,000 ರೂಪಾಯಿ ಹಣ ಒದಗಿಸಲಾಗಿದೆ. ಹಳೆಯ ಮೈಸೂರಿನಲ್ಲಿ ಅಂಥ ಸ್ಕೂಲ್ಸ್ ಕೇವಲ ಒಂದೆರಡು ಇದ್ದುದು ಕಂಡುಬರುತ್ತದೆ. ಹಳೆಯ ಮೈಸೂರಿನಲ್ಲಿ ವ್ಯವಸಾಯದ ವಿಚಾರದಲ್ಲಿ ನಿರ್ಲಕ್ಷಿಸಲಾಗಿದೆ. ಆದುದರಿಂದ ಅಷ್ಟೊಂದು ಉತ್ಸಾಹದಾಯಕವಾಗಿಲ್ಲವೆಂದು ಹೇಳಬಯಸುತ್ತೇನೆ. ವ್ಯವಸಾಯವನ್ನು ಅವಲಂಬನಮಾಡಿರತಕ್ಕಂಥ ಜನ ನಮ್ಮ ಭಾರತ ದೇಶದಲ್ಲಿ ನೂರಕ್ಕೆ 80 ರಷ್ಟು ಇದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅಮೇರಿಕಾ ದೇಶದಲ್ಲಿ ಕೇವಲ ಶೇಕಡಾ 20ರಷ್ಟು ಜನ ವ್ಯವಸಾಯವನ್ನು ಅವಲಂಬಿಸಿರತಕ್ಕಂಥವರು ಇದ್ದರೆ ನಮ್ಮ ದೇಶದಲ್ಲಿ 80 ರಷ್ಟು ಜನರು ವ್ಯವಸಾಯದಿಂದಲೇ

(ಶ್ರೀ ಡಿ. ಟಿ. ಸೀತಾರಾಮರಾವ್)

ಜೀವನ ನಡೆಸಿಕೊಳ್ಳಬೇಕಾಗಿದೆ. ಶೇಕಡಾ 80 ರಷ್ಟು ಜನ ಇವೊತ್ತಿನ ದಿವಸ ವ್ಯವಸಾಯದಲ್ಲಿ ದುಡಿದರೆ 20ರಷ್ಟು ಜನ ಬೇರೆ ಉದ್ಯೋಗದಲ್ಲಿ ತೊಡಗಿದ್ದಾರೆ. ಈ ವ್ಯವಸಾಯವನ್ನೆ ಅವಲಂಬಿಸಿರತಕ್ಕಂಥ ಶೇಕಡಾ 80ರಷ್ಟು ಜನಕ್ಕೆ ಸಾಕಷ್ಟು ಕೆಲಸವಿಲ್ಲ. ಇವರಲ್ಲಿ ಕೆಲಸವಿಲ್ಲದೆ ಅನಾವಶ್ಯಕವಾಗಿರತಕ್ಕಂಥ ಜನ ಹೆಚ್ಚಾಗಿ ಇದ್ದಾರೆ. ಅಂಥವರ ಬಗ್ಗೆ ಸರಕಾರದವರು ಏನಾದರೂ ಒಂದು ಗ್ರಾಮೋದ್ಯೋಗವನ್ನು ಕಲ್ಪಿಸಿ ಕೊಟ್ಟಿದ್ದಾರೆಯೇ ? ಆದರೂ ಇಷ್ಟು ಹೆಚ್ಚು ಜನ ವ್ಯವಸಾಯದ ಮೇಲೆಯೇ ಅವಲಂಬಿಸಿರತಕ್ಕಂಥವರು ಆಗಿರುವದರಿಂದ ಅವರ ಸ್ಥಿತಿ ಚಿಂತಾಜನಕವಾಗಿದೆ. ಇಂಥ ಜನರಿಗೆ ಒಂದು ಕೈಗಾರಿಕೆಯ ಉದ್ಯೋಗವನ್ನು ಕಲ್ಪಿಸಿಕೊಡುವ ವಿಚಾರದ ಬಗ್ಗೆ ಸರಕಾರದವರು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮಲೆನಾಡಿಗೆ ಈ ವರ್ಷದಲ್ಲಿ ಒಂದು ಅಗ್ರಿಕಲ್ಚರಲ್ ಸ್ಕೂಲ್ ಕೊಡಬೇಕೆಂದು ನಾನು ಹೇಳುತ್ತೇನೆ. ಯಾಕೆಂದರೆ ಮಲೆನಾಡಿನ ರೈತಾಪಿ ಜನರ ಪರಿಸ್ಥಿತಿ ಶೋಚನೀಯವಾಗಿದೆ. ಅವರ ಏಳಿಗೆ ಆಗಬೇಕು. ವ್ಯವಸಾಯಕ್ಕೆ ಬೇಕಾಗತಕ್ಕಂಥ ಉಪಕರಣಗಳು ದೊರೆಯುವದು ಕಠಿಣವಾಗಿದೆ. ಮಲೆನಾಡಿನಲ್ಲಿ ಬೇಕಾದಂಥ ಟಿಂಬರ್ ದೊರೆಯುತ್ತದೆ. ಭದ್ರಾವತಿ ಕಬ್ಬಿಣ ಕಾರ್ಖಾನೆ ಇದೆ. ಆದರೂ ಸಹ ವ್ಯವಸಾಯಕ್ಕೆ ಬೇಕಾಗತಕ್ಕಂಥ ಕಬ್ಬಿಣ ಸಾಮಾನುಗಳು ಉಪಕರಣಗಳು ಸಿಕ್ಕುವದಿಲ್ಲ. ಈ ರೀತಿಯಾಗಿ ಮಲೆನಾಡಿನಲ್ಲಿ ಪರಿಸ್ಥಿತಿಯು ಇರುವುದು ಶೋಚನೀಯವಾದ ವಿಷಯ. ಶಿವಮೊಗ್ಗಾ ಜಿಲ್ಲೆಯಲ್ಲಿ ಮಲೆನಾಡಿನ ವಿಚಾರವಾಗಿ ಹೇಳುವುದಾದರೆ, ಅಲ್ಲಿಯ ಡಿಪೋಗಳಲ್ಲಿ ಮೆನ್ಯೂರ್ ಇಲ್ಲವೆಂದು ಹೇಳಿದರೆ ಶೋಚನೀಯವಾದ ವಿಚಾರ. ಅಲ್ಲಿ ಅಗ್ರಿಕಲ್ಚರಿಸ್ಟಿಗೆ ಯಾವಯಾವ ಉಪಕರಣಗಳು ಬೇಕೋ, ಎಷ್ಟೆಷ್ಟು ಸಾಮಾನುಗಳು ವ್ಯವಸಾಯಕ್ಕೆ ಬೇಕೋ ಅಷ್ಟೂ ಇಲ್ಲ. ಅಷ್ಟನ್ನೂ ಅಲ್ಲಿ ಒದಗಿಸಬೇಕು. ಅದನ್ನು ಹೊರ ವ್ಯಾಪಾರ ಮಾಡುವುದರಿಂದ ರೈತರಿಗೆ ಯಾವ ಅನುಕೂಲವನ್ನೂ ಕೊಟ್ಟಂತಾಗುವುದಿಲ್ಲ.

ಎರಡನೆಯದಾಗಿ ಹರಿಜನರ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಹಾತ್ಮ ಗಾಂಧಿಯವರು ಅವರ ಅಭಿವೃದ್ಧಿಗೋಸ್ಕರ ಅವರ ಮೇಲ್ಮೆಗಾಗಿ ತಮ್ಮ ಪ್ರಾಣವನ್ನೇ ತೆತ್ತರು. ಅವರೊಡನೆ ಬಹಳ ಪ್ರೀತಿಯಿಂದ ಇದ್ದು ಕಾಲ ಕಳೆದರು. ಆದ್ದರಿಂದ ಮಾನ್ಯ ಮಂತ್ರಿಗಳು ತಮ್ಮ ಪ್ರವಾಸಕಾಲದಲ್ಲಿ ಅವರ ಪ್ರೋಗ್ರಾಂ ಜೊತೆಗೆ ಹರಿಜನರ ಬೀದಿಗಳನ್ನು ಅಗತ್ಯವಾಗಿ ಭೇಟಿಮಾಡಿ ಅವರ ಕುಂದುಕೊರತೆಗಳನ್ನು ವಿಚಾರಿಸಿ ಅವರನ್ನು ಉನ್ನತ ಸ್ಥಿತಿಗೆ ತರುವ ವ್ಯವಸ್ಥೆಯನ್ನು ಮಾಡಬೇಕು. ಮಲೆನಾಡಿನಲ್ಲಿ ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳೇ ಇಲ್ಲ. ನಮ್ಮ ದೇಶ ವ್ಯವಸಾಯ ದೇಶವೆಂದು ಪಾಶ್ಚಾತ್ಯ ದೇಶಗಳಲ್ಲೆಲ್ಲಾ ಹೇಳುತ್ತಿದ್ದಾರೆ. ನಮ್ಮಲ್ಲಿ ಶೇಕಡ 80 ರಷ್ಟು ಜನ ವ್ಯವಸಾಯ ಮಾಡುವವರು ಇದ್ದಾರೆ. ಆದರೆ ವ್ಯವಸಾಯಕ್ಕೆ ಬೇಕಾದಂಥ ಉಪಕರಣಗಳು, ಸರಿಯಾದ ರಸ್ತೆ, ಮಾರ್ಗಗಳು, ಮುಖ್ಯ ಮುಖ್ಯವಾದ ಸ್ಥಳಗಳಲ್ಲಿ ಸೇತುವೆಗಳು, ಇವುಗಳನ್ನು ಏರ್ಪಾಡು ಮಾಡುವುದರಲ್ಲಿ ನಮ್ಮ ಸರ್ಕಾರ ತುಂಬ ನಿರ್ಲಕ್ಷ್ಯ ಮಾಡಿದೆ, ಅಲಕ್ಷ್ಯಮಾಡಿದೆ, ಸಿಟಿಗಳಲ್ಲಿ ರಸ್ತೆ ಸೌಕರ್ಯ ತೃಪ್ತಿಯಾಗಿದೆಯೆಂದು. ಹೇಳಿದರೆ ಸಾಕೇ ? ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಈ ಸೌಕರ್ಯಗಳನ್ನು ಒದಗಿಸಿದ್ದಾರೆ ಎಂದರೆ ನಿಜವಾಗಿಯೂ ಅಲಕ್ಷ್ಯ ಮಾಡುತ್ತಿದ್ದಾರೆ. ವ್ಯವಸಾಯಗಾರರನ್ನು ಕಂಡರೆ ತುಂಬ ಮಮತೆ ಇಟ್ಟುಕೊಳ್ಳಲೇಬೇಕು. ಯಾವ ಪಕ್ಷದವರೇ ಆಗಲಿ ವ್ಯವಸಾಯಗಾರರ ಜೊತೆಗೆ ಸೇರಿ ಅಲ್ಲಿನ ಎಲ್ಲಾ ಜನಗಳ ಸ್ಥಿತಿಗತಿಗಳನ್ನರಿಯಬೇಕು. ಷೆಡ್ಯೂಲ್ ಟ್ರೈಬ್ಸ್ ಮತ್ತು ಹಿಂದುಳಿದ ಪಂಗಡದವರ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕು. ಇವರು ಒಂದು ಪಕ್ಷದವರು, ಅವರು ಇನ್ನೊಂದು ಪಕ್ಷದವರು ಎಂಬ ಭೇದ ಭಾವನೆ ಮಾಡದೆ ಸರ್ವ ಪಕ್ಷದವರೂ ಸರ್ಕಾರದವರೂ ಸೇರಿ ಹರಿಜನರೋದ್ಧಾರಕ್ಕಾಗಿ ಮತ್ತು ಅಸ್ಪೃಶ್ಯತೆ ನಿವಾರಣೆಗೋಸ್ಕರ ತಕ್ಕ ಏರ್ಪಾಡುಗಳನ್ನು ಮಾಡಿದರೆ, ಆಗ ದೇಶ ಉನ್ನತಿಯಾಗುತ್ತದೆ, ಇಲ್ಲದಿದ್ದರೆ ಅದು ಒಂದು ನಾಟಕವಾಗುತ್ತದೆ. ಮಾನ್ಯ ಮಿತ್ರರಾದ ಶ್ರೀಮಾನ್ ಪುಟ್ಟಣ್ಣನವರು ಒಂದು ದಿವಸ ಹರಿಜನರ ಮಧ್ಯೆ ಅಸ್ಪೃಶ್ಯತಾ ಕಾರ್ಯಕ್ರಮ ನಡೆಸಿರಬಹುದು. ಆ ರೀತಿ ಪ್ರತಿನಿತ್ಯ ಮಾಡುತ್ತಿದ್ದಾರೆಯೋ ಇಲ್ಲವೋ ಎಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಜಾತಿಭೇದಗಳು ಮತ್ತು ಜಾತ್ಯಭಿಮಾನ ಎಲ್ಲಿಯವರೆಗೂ ಹೋಗುವುದಿಲ್ಲವೋ ಅಲ್ಲಿಯವರೆಗೆ ಯಥಾಪ್ರಕಾರ ಹಾಗೆಯೇ ಉಳಿಯುತ್ತದೋ, ಅಲ್ಲಿಯವರೆಗೂ ಗಾಂಧೀ ತತ್ವವನ್ನು ಪರಿಪಾಲಿಸಿದಂತೆ ಆಗುವುದಿಲ್ಲ. ಇದನ್ನು ಸರ್ವಥಾ ಪ್ರಯತ್ನಿಸಬೇಕು. ದೈವಧರ್ಮಿಷ್ಠರಾದವರು ನಾನು ಆ ಜಾತಿಯವನು ನಾನು ಈ ಜಾತಿಯವನು ಎಂದು ಅವರವರೇ ಹೇಳಿಕೊಳ್ಳುತ್ತಾ ಹೋದರೆ ಏನೂ ಅನುಕೂಲವಾಗುವುದಿಲ್ಲ. ಸರ್ಕಾರದವರು ದೊಡ್ಡಮನಸ್ಸು ಮಾಡಿ ಈಗಿರುವ ಸ್ಕೂಲುಗಳಲ್ಲಿ ಹರಿಜನರಿಗೆ ಅವಕಾಶವನ್ನು ಕಲ್ಪಿಸಬೇಕು. ಪ್ರತ್ಯೇಕ ಸ್ಕೂಲುಗಳು ಬೇಡ. ಈ ಮಾನ್ಯ ಸಭೆಯಲ್ಲಿ ಎಲ್ಲರೂ ಉದ್ದೇಶಪಟ್ಟಿರುವ ಹಾಗೆ, ಅವರೆಲ್ಲರನ್ನೂ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಸೇರಿಸಿದರೆ ಆಗ ದೇಶಕ್ಕೆ ಒಳ್ಳೆಯದಾಗುತ್ತದೆ ಮತ್ತು ಹರಿಜನೋದ್ಧಾರವಾಗುವುದರಲ್ಲಿ ಏನೂ ಸಂದೇಹವಿಲ್ಲ. ಅವರನ್ನು ಪ್ರತ್ಯೇಕವಾಗಿ ಯಾವಾಗಲೂ ಇಡಬಾರದು. ಅವರನ್ನು ಪ್ರತ್ಯೇಕ ಮಾಡುವ ಮನೋಭಾವನೆ ಇರಬಾರದು. ಹರಿಜನರಿಗೆ ಬೇರೆ, ಮರಾಠೆಯವರಿಗೆ ಬೇರೆ, ಅವರಿಗೆ, ಇವರಿಗೆ ಎಂದು ಬೇರೆ ಬೇರೆ ಮಾಡದೆ ಎಲ್ಲರೂ ಒಟ್ಟಾಗಿ ಬೆರೆತಿರುವ ಹಾಗೆ ಏರ್ಪಾಡು ಮಾಡಬೇಕು. ಭಾರತೀಯರೆಲ್ಲರೂ ಉತ್ತಮ ವರ್ಗಕ್ಕೆ ಸೇರಿದವರು ಎನ್ನುವರೀತಿ, ಸವರ್ಣ ಹಿಂದುಗಳ ಮನಸ್ಸು ಪರಿವರ್ತನೆಯಾಗುವಂತೆ ನಿಜವಾಗಿಯೂ ಗಾಂಧೀ ತತ್ವವನ್ನು ಕಾರ್ಯತಃ ಅನುಸರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಎರಡನೆಯದಾಗಿ ಮಲೆನಾಡಿನಲ್ಲಿ ಸಾಕಷ್ಟು ಪಶುವೈದ್ಯ ಸೌಕರ್ಯವಿಲ್ಲ. ಬೀಜದ ಹೋರಿಗಳು ಮತ್ತು ಬೀಜದ ಕೋಣಗಳನ್ನ ಪ್ರತಿಯೊಂದು ಹೋಬಳಿಯಲ್ಲೂ ಎರಡುಮೂರು ಕಡೆ ಇಡುವುದಕ್ಕೆ ಏರ್ಪಾಡು ಮಾಡಬೇಕು. ಆಸ್ಪತ್ರೆಗಳಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಮೆಡಿಕಲ್ ಟ್ರೀಟ್‌ಮೆಂಟ್ ಕೊಡಿಸುವ ಏರ್ಪಾಟು ಮಾಡಬೇಕು. ರೈತರಿಗೆ ಬೇಕಾಗುವ ಸಲಕರಣೆಗಳನ್ನು ಹೆಚ್ಚು ಹೆಚ್ಚಾಗಿ ಕೊಡಬೇಕು. ಅವರಿಗೆ ಅಲ್ಪಾವಧಿ ಸಾಲವನ್ನು ಕೋಆಪರೇಟಿವ್ ಸೊಸೈಟಿಗಳ ಮೂಲಕ ಕೊಟ್ಟು ವರ್ಷಾಂತ್ಯದಲ್ಲಿ ಅದನ್ನು ವಾಪಸ್ಸು ತೆಗೆದುಕೊಳ್ಳುವಹಾಗೆ ಮಾಡಬೇಕು. ಒಂದು ಕಡೆ 100 ಜನರಿಗೆ ಸಾಲ ಕೊಟ್ಟಿದ್ದರೆ ಸೊಸೈಟಿಯವರು

ಡಿಸ್ಟ್ರಿಕ್ಟ್ ಬ್ಯಾಂಕಿಗೆ, ತೆಗೆದುಕೊಂಡ ಹಣವನ್ನು ಪೂರ್ತಿಯಾಗಿ ಪಾವತಿ ಮಾಡುವತನಕ ರೈತರಿಗೆ ಹೊಸದಾಗಿ ಸಾಲಕೊಡುವ ಹಾಗಿಲ್ಲ. ಸಾಲ ಕೊಡದೆ ಇದ್ದವರ ಮೇಲೆ ದಾವ ಮಾಡುವುದಕ್ಕೆ ಅವಕಾಶವಿದೆ. ಅವರು ಮಾರ್ಟ್‌ಗೇಜ್ ಮಾಡಿದ ಆಸ್ತಿಯಿಂದ ಹಣವನ್ನು ವಾಪಸ್ಸು ಪಡೆಯಬಹುದು. ಆದ್ದರಿಂದ ನಾಲ್ಕಾರು ಜನರು ಸಾಲವನ್ನು ಹಿಂದಕ್ಕೆ ಕೊಡದೇ ಇದ್ದರೂ ಪರವಾ ಇಲ್ಲ. ಅವರ ಮೇಲೆ ದಾವಾಹಾಕಿ ಅವರಿಂದ ಹಣ ವಸೂಲು ಮಾಡಬಹುದು. ಆದರೆ ಸರ್ಕಾರದವರು ಉಳಿದವರಿಗೆ ಸಾಲ ದೊರೆಯುವ ವ್ಯವಸ್ಥೆ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಹೀಗೆ ಅಗ್ರಿಕಲ್‌ಚರಲ್ ಕೋ-ಆಪರೇಟಿವ್ ಸೊಸೈಟಿಯವರು ರೈತರಿಗೆ ಷಾರ್ಟ್ ಟರ್ಮ್ ಲೋನ್ ಕೊಡುವಹಾಗೆ ಅವಕಾಶ ಮಾಡಿಕೊಡಬೇಕು. ಮುಖ್ಯವಾಗಿ ರೈತಾಪಿ ಜನಗಳ ವಿಷಯದಲ್ಲಿ ನಮ್ಮ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri B. SHAM SUNDER.—Sir, last time when I spoke in this House, I saw that my words were falling on deaf ears. The Ministers were gazing in a vacancy and were trying to catch my words not by their ears but by their eyes. That was a horrible sight to see. That is why today I have decided to speak in a language which might be a mirror to them and in which they might be able to see the image of their own deeds. I want to place before them the picture of the state of affairs as reflected in the Budget presented to this House. These Ministers speak very highly about the removal of untouchability, social disabilities and other things. It is said that these are all social problems. May I take you to the days of the Round Table Conference of 1931 and 1935 when Gandhiji pleaded for the Depressed Classes in one way and Dr. Ambedkar pleaded for them in another way? Was it a social affair? No, it was a political affair altogether. When Gandhiji came back to India after the Conference he threatened to give up his life in case the Depressed Classes were given separate rights. Then the Poona Pact was concluded. It was not a social pact; it was a political pact altogether.

Now, may I ask the Hon'ble Members of this House who are sitting opposite to me what amount they have allotted for the amelioration of 40 lakhs of people of this State who are downtrodden? They speak very high of their deeds in fine language and we are made to believe that they are doing everything for the upliftment of the Depressed Classes in the State. But I would request them to go to the villages and see what is happening there. The Depressed Classes are still held as untouchables and they are not allowed to draw water from the wells. Our Ministers often go to villages to perform some opening ceremonies. Possibly, at that time to show to the world that there is no untouchability existing, the Depressed Classes are allowed to draw water, but once the Ministers go away from the villages, these people are not allowed to draw water and they are treated as untouchables. This mentality has aggravated the situation.

The people who have been guiding the destinies of this country are the cause of the downfall of the country and the subjugation of several lakhs of people. They had kept us under subjugation in the past. Due to them India was under foreign rule for centuries together. When India became independent it brought all happiness to them, but not for us. We are still in the same downtrodden condition in which we were centuries before.

The Government declare that they want to open more schools. But where are those schools? Who manage them? Not we, I am sure.

Educational policy of a country shapes the future of a country. All the philosophers of the world from Plato to Bertrand Russel have said much about this fundamental principle and policy. They say that the party in power which shapes and controls the educational policy of the country rules the State. We certainly are not shaping the educational policy of this State. We want equal status for all the people of this country.

There is a couplet in Urdu, which I will quote:

" Tere waide per jeeia haum to jan
jhoot jana

Khushi se mar na jate gar itaibar
hota

(SRI B. SHAM SUNDER)

Tum ne to bijliun se Nashiman
jala diya
Main bijliun me aag laga doon to
kya karo ?"

What does this mean ? "If he had believed in you, we would have been dead by this time. We have been struggling all these days not to lay our life for those who have been conspiring to enslave us, but to take the life of those who want to take our life."

Sir, there is a revolution brewing throughout the country. Who will be responsible for this ? Not we. The people who are chosen to represent us in the various bodies like the local boards, educational boards and the like are of your own kind.—Illiterate people who could do little or no service for the community. A few minutes ago an Hon'ble Member of this House—a Congress Member—spoke. When I heard the Hon'ble Member I realized what type of Congress people the party-in-power gets elected. You may not realise what harm these tactics are doing to us. It is not going to solve the problems of this country, nor would it help you take a place in the comity of the nations of the world.

Sri V. P. DEENADAYALU NAIDU.—On a point of order, Sir. Is it not tantamount to an insinuation for the Hon'ble Member to refer to another member of this august House as "what type of Congressman." I have no objection if he just referred to a Congressman but to speak of the type of Congressmen who have been elected is an insinuation.

Mr. SPEAKER.—It is not an insinuation because he is expressing only an opinion.

Sri B. SHAM SUNDER.—To support what I said I will quote in Urdu :

"Aaina keun na doon ke Tamasha
kahein jeese
Aisa khaun se laun ke tujh sa
kahain jeese."

Mr. SPEAKER.—Please do not repeat.

Sri B. SHAM SUNDER.—I am not repeating, Sir, all this talk of solving problems of the Depressed Classes is mere propaganda intended to serve a political purpose, *i.e.*, to keep us in the situation in which we are today. All these talks about shramdan, bhoodan, and what not are meaningless because we do not want 'dans.' We only want what is due to us. It should come to us as a right.

Let me give an example. I can name a Chief Minister of a State—a Congressman, of course. May I give his name, Sir ?

Mr. SPEAKER.—Please do not give names.

Sri B. SHAM SUNDER.—I should not ? All right, Sir. He had accumulated one crore of rupees despite his tall talks of social reforms and democratic principles.

Mr. SPEAKER.—What has that got to do here ?

Sri B. SHAM SUNDER.—Sir, I want to prove that we cannot leave the problems of the Depressed Classes in the hands of the Congress Leaders and their Government. As the Government have treated the problem as a social one by including it in the Rural Development Department it has done agreat injustice to the Depressed Classes. Their problems should be attended to by a separate Department. We should create a separate Directorate, a separate Secretariat and a separate Ministry to deal with the problems of the Depressed Classes. Because I have got very little time at my disposal, I am not going to deal with the subject in detail. That is why I want to give only a substance of the political ideology that we want to plead, not to preach to this House, but to plead throughout the country.

Mr. SPEAKER.—Hon'ble Member can expound his political faith but not preach it in this House.

Sri B. SHAM SUNDER.—My only suggestion is this. I have been in this field for more than two or three decades. I have addressed many assemblies not only in this country but also outside. I have addressed international assemblies also. My experience says, unless you acknowledge the full status, political status, of the Depressed Classes or if you want to give full status to them in the country,

a separate department should be created which should be manned fully by the Depressed Classes alone. For the time being, earmark in your Budget at least Rs. 2 crores or more for this purpose. Secondly, at least 50 per cent of the gazetted posts should go to the Depressed Classes. Why I want these executive posts for the Depressed Classes is quite apparent. The Government orders and enactments meant for the benefit of the Depressed Classes are not properly implemented. Those who are meant to implement these orders and enactments are persons who themselves believe in the practice of untouchability. If you want to romove untouchability from this country, appoint to 50 per cent of the gazetted posts only persons belonging to Depressed Classes. Then alone we will be creating a healthy atmosphere in the country. Then alone the caste Hindus will realise their folly.

Under the Rural Development Schemes, you have got so many schemes like housing scheme, education scheme and all that. As far as education schemes are concerned, I do not know what it means to you, but for us it is a scheme to keep us in perpetual darkness. Other nations have built their countries within a few years, but we due to caste-mindedness and religious belief, Sectarion out look and communal bent of mind, have failed even to achieve the unity of the people.

My friend Sri Arumugham quoted Gandhiji a few minutes ago. Gandhiji had said that if he should be born again, he would very much like to be born as a sudra to serve the sudras. I have got my own interpretation of this quotation. He wished to be born as a sudra for he wanted to retain caste system. If I am allowed, if I get any chance, I will remove all the books which teach caste, system from all the libraries. Thank you very much Sir.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಇವೊತ್ತು ನಮ್ಮ ಮುಂದಿರುವ ಮೂರು ಬೇಡಿಕೆಗಳಮೇಲೆ ವಿಪುಲವಾದ ಚರ್ಚೆ ನಡೆದಿದೆ, ನಾನು ಮಾನ್ಯ ಸಭೆಯ ಕಾಲವನ್ನು ಹೆಚ್ಚಿಗೆ ತಗೆದುಕೊಳ್ಳಬೇಕೆಂದು ಇಷ್ಟಪಡುವುದಿಲ್ಲ. ಆದರೂ ಕೂಡ ಬಹು ಮುಖ್ಯವಾದಂತಹ ವ್ಯವಸಾಯಕ್ಕೆ ಸಂಬಂಧಪಟ್ಟ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸಿರತಕ್ಕ ಹಣಗಳ ಬೇಡಿಕೆಗಳಾದುದರಿಂದ ನನಗೆ ತಿಳಿದ ಒಂದೆರಡು ಸಲಹೆಗಳನ್ನು ತಮ್ಮ ಮುಂದೆ ಇಡಲಿಚ್ಛಿಸುತ್ತೇನೆ. ಮೊಟ್ಟಮೊದಲು ವ್ಯವಸಾಯ ಕ್ಷೇತ್ರದಲ್ಲಿ ನಮ್ಮ ಇಂಡಿಯಾ ದೇಶದಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿ ಆಹಾರಾಭಾವಕಂಡದ್ದು 1943 ನೆಯ ಇಸವಿಯಲ್ಲಿ. ಆ ವರ್ಷದಿಂದಲೂ ಮೈಸೂರು ಸಂಸ್ಥಾನದಲ್ಲಿ ಅಧಿಕ ಆಹಾರೋತ್ಪತ್ತಿಮಾಡಬೇಕೆಂಬ ಒಂದು ಯೋಜನೆಯನ್ನಿಟ್ಟುಕೊಂಡು ಕೆಲಸಮಾಡಿದರು. 1951ನೆಯ ಇಸವಿಯಲ್ಲಿ ನಾವು ಯಾವ ಅಂಕಿ ಅಂಶಗಳ ಆಧಾರದಮೇಲೆ ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಮಾಡಿದೆವೋ ಆ ಅಂಕಿ ಅಂಶಗಳು ಸರಿಯಾಗಿರಲಿಲ್ಲವಾದಕಾರಣ ನಿಜವಾಗಿಯೂ ಸರಿಯಾದ ಒಂದು ಮಾರ್ಗದಲ್ಲಿ ನಾವು ಹೊರಡಲಿಲ್ಲವೆಂದು ನನ್ನ ಭಾವನೆ. ಏಕೆಂದರೆ, ವ್ಯವಸಾಯ ಇಲಾಖೆ ಅಂಕಿ ಅಂಶಗಳನ್ನು ತರಿಸುವುದು ಗ್ರಾಮಾಧಿಕಾರಿಗಳಿಂದ. ಸ್ಟಾಟಿಸ್ಟಿಕ್ಸ್ ಇಲಾಖೆಯಿಂದ ಸರ್ವೆ ಮಾಡಿಸಿ ಶೇಖರಿಸಿದ ಅಂಕಿ ಅಂಶಗಳನ್ನು ಹೋಲಿಸಿದರೆ ಬಹಳ ವ್ಯತ್ಯಾಸವಿದೆ. ವ್ಯವಸಾಯದ ಇಲಾಖೆಯವರು ಒದಗಿಸಿದ ಅಂಕಿ ಅಂಶಗಳಲ್ಲಿ ಉತ್ಪ್ರೇಕ್ಷೆಯಿದ್ದು ಅವು ಸತ್ಯಾಂಶಕ್ಕೆ ದೂರವಾಗಿವೆ. ಇವರು ತಮ್ಮ ಪ್ರಾಮುಖ್ಯತೆಯನ್ನು ತೋರಿಸಿಕೊಳ್ಳುವುದಕ್ಕೆ ಅಂಕಿಅಂಶಗಳನ್ನು ಕೊಡುತ್ತಾರೆಯೇ ಹೊರತು ಅನ್ಯಥಾ ಇಲ್ಲವೆಂಬುದು ವ್ಯಕ್ತವಾಗುತ್ತದೆ. ಇವರು ಕೊಡುವ ಅಂಕಿಅಂಶಗಳು ಸತ್ಯವಾಗಿದ್ದ ಪಕ್ಷದಲ್ಲಿ ನಾವು ಸ್ವಾವಲಂಬನೆ ಪಡೆಯೋಣವೆಂಬ ಯಾವ ಒಂದು ಧೋರಣೆಯಿತ್ತೋ ಅದು ಫಲಕಾರಿ ಆಗಿಯೇ ಆಗುತ್ತಿತ್ತು. ಅವರು ಕೊಟ್ಟಿರುವ ಅಂಕಿ ಅಂಶಗಳಪ್ರಕಾರ 1952ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸುಮಾರು ಹನ್ನೊಂದು ಲಕ್ಷ ಟನ್ ಆಹಾರ ಉತ್ಪತ್ತಿಯಾಗಬೇಕೆಂದಿಟ್ಟುಕೊಂಡಿದ್ದರು. ಆದರೆ ಒಂಬತ್ತು ಲಕ್ಷ ಚಿಲ್ಲರೆ ಟನ್ ಆಯಿತೆಂದು ಒಂದು ವರದಿಯಲ್ಲಿ ತೋರಿಸಿದ್ದಾರೆ. ಇದುಕೂಡ ಸತ್ಯಾಂಶಕ್ಕೆ ದೂರವಾಗಿದೆ ಎಂಬುದು ಸ್ಟ್ಯಾಟಿಸ್‌ಟಿಕ್ಸ್ ಇಲಾಖೆಯ ಅಂಕಿಗಳಿಂದ ಕಂಡುಬಂದಿದೆ. ಸರಿಯಾಗಿ, ವ್ಯವಸ್ಥಿತವಾದರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕಾಗಿದ್ದರೆ ಮೊಟ್ಟಮೊದಲು ಅಂಕಿಅಂಶಗಳು ಮುಖ್ಯ ಆಧಾರ.

ಎರಡನೆಯದಾಗಿ ಇಲಾಖೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಲ್ಲಿ ತೃಪ್ತಿಯಿರಬೇಕು. ಅವರಿಗಿರಬೇಕಾದ ಭದ್ರತೆ, ಸಂಬಳಸಾರಿಗೆ, ವರ್ಗ, ಪ್ರಮೋಷನ್ ಮುಂತಾದವುಗಳ ಸೌಲಭ್ಯ ತೃಪ್ತಿಕರವಾಗಿರಬೇಕು. ಈ ಇಲಾಖೆಯ ಅಧಿಕಾರಿಗಳಲ್ಲಿ ಅನ್ಯೋನ್ಯಭಾವನೆ ಬಂದು ದೇಶದ ಕೆಲಸಮಾಡುವ ಮನೋಭಾವ ಬೆಳೆಯಬೇಕು. ಇದು ಈ ಇಲಾಖೆಯಲ್ಲಿ ಹೆಚ್ಚು ಬೆಳೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನೊಂದು ವಿಷಯ. ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡಬೇಕೆಂದು Grow More Food ಯೋಜನೆಯ ಮೇರೆಗೆ ಅನೇಕ ಜಮೀನುಗಳನ್ನು ಸಾಗುವಳಿಗೆ ಕೊಟ್ಟರು. ಆದರೆ ನಿಜವಾಗಿಯೂ ಆ ಜಮೀನ ಗಳಲ್ಲಿ ಸಾಗುವಳಿಯಾಯಿತೆ ಎಂದು ನೋಡಲಿಲ್ಲ. ಸಾಗುವಳಿಗೆಂದು ಕೊಟ್ಟ ಜಮೀನನ್ನೆಲ್ಲಾ ಲೆಕ್ಕ ಹಾಕಿಕೊಂಡು ಎಕರೆಗೆ ಇಷ್ಟು ಬೆಳೆಯಾಗುತ್ತದೆಂದು ಲೆಕ್ಕ ಹಾಕಿದರು. ಹಿಡುವಳಿ ಜಮೀನು ಎಷ್ಟೋ ಬಂಜರು ಬಿದ್ದಿವೆ. Fallow Lands Act ಜಾರಿಯಲ್ಲಿದ್ದರೂ ಕೂಡ ಅದನ್ನು ಸರಿಯಾಗಿ ಜಾರಿಗೆ ಕೊಡದೇಯಿರುವಕಾರಣ ಎಷ್ಟು ಉತ್ಪತ್ತಿ ಆಗಬೇಕೋ ಅಷ್ಟು ಆಗುತ್ತಿಲ್ಲ. ಈ ಕಾನೂನನ್ನು ತಿದ್ದುಪಡಿ

(ಶ್ರೀ ಬಿ. ರಾಚಯ್ಯ)

ಯಾದರೂಮಾಡಿ ವ್ಯವಸಾಯಮಾಡದೆ ಹಾಗೆಯೆ ಬಿಟ್ಟಿರುವ ಹಿಡುವಳಿ ಜಮೀನುಗಳನ್ನು ಸರ್ಕಾರ ಕಿತ್ತುಕೊಳ್ಳುವುದಕ್ಕೆ ಅವಕಾಶಮಾಡಬೇಕು. ಅಲ್ಲದೆ ಜೋಡಿ ಮತ್ತು ಇನಾಮ್‌ಗಳನ್ನು ರದ್ದುಮಾಡುತ್ತೇವೆಂದು ಹೇಳಿ ಐದು ಹತ್ತು ವರ್ಷಗಳು ನಿಧಾನಮಾಡಿದುದರಿಂದ, ಜಮೀನ್ದಾರರ ಜಮೀನುಗಳನ್ನೇ ಅವಲಂಬಿಸಿಕೊಂಡಿದ್ದ ಗೇಣಿದಾರರನ್ನು ಜಮೀನ್ದಾರರು ಹೊರದೂಡಿದುದರಿಂದಲೂ ಎಷ್ಟು ಉತ್ಪತ್ತಿ ಆಗಬೇಕೋ ಅಷ್ಟು ಆಗದೇ ಕಡಮೆಯಾಗಿದೆ. ಸರ್ಕಾರ 'ರಿಕ್ಲಮೇಷನ್' ನೀರಾವರಿ ಯೋಜನೆಗಳು, ರೈತರಿಗೆ ಬೇಕಾದ ಗೊಬ್ಬರ, ಬೀಜ ಮತ್ತು ಇತರ ಉಪಕರಣಗಳನ್ನು ಇಟ್ಟುಕೊಂಡಿದ್ದರೂಕೂಡ ಯಾವ ರೈತನಿಗೆ ಸಾಲರೂಪವಾಗಿ ಸಹಾಯ ಸಲ್ಲಬೇಕೋ ಆತನಿಗೆ ಸಲ್ಲಲಿಲ್ಲ. ಇದರಿಂದ ಅನೇಕ ರೈತರು ಈ ಸೌಲಭ್ಯ ಪಡೆದು ಹೆಚ್ಚು ಬೆಳೆಯಲು ಸಾಧ್ಯವಾಗಲಿಲ್ಲ, ಮ್ಯುಟೇಷನ್ ಮತ್ತು ರಿಕಾರ್ಡ್ ಆಫ್ ರೈಟ್ಸ್ ರಿಜಿಸ್ಟರುಗಳೂ ರಿಕಾರ್ಡುಗಳೂ ತಾಲ್ಲೂಕು ಕಚೇರಿಗಳಲ್ಲಿ ಸರಿಯಾಗಿಲ್ಲದೇಯಿದ್ದುದರಿಂದ ಯಾರದೋ ಜಮೀನನ್ನು ಇನ್ಯಾರೋ ಉಳುಮೆ ಮಾಡುತ್ತಾ ಇದ್ದು ಅವರಿಗೆ ವ್ಯವಸಾಯಕ್ಕೆ ಬೇಕಾದ ಗೊಬ್ಬರ, ಸಾಲ ಮುಂತಾದ ಸೌಲಭ್ಯಗಳು ಸರ್ಕಾರದಿಂದ ದೊರೆಯದೆ ತೊಂದರೆಯಾಯಿತು. ಸಾಮಾನ್ಯವಾಗಿ ರೈತನಿಗೆ ಸರ್ಕಾರದಿಂದ ಎಷ್ಟು ಸೌಲಭ್ಯ ಒದಗಬೇಕಾಗಿತ್ತೋ ಅಷ್ಟು ಒದಗಲಿಲ್ಲ. ಇಷ್ಟೇ ಅಲ್ಲದೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವಾಗ ಕೆಲವು ಅಪ್ರಯೋಜಕವಾದ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಸಣ್ಣಪುಟ್ಟ ಕೆರೆಗಳನ್ನು ಕಟ್ಟಿಸುವುದರಿಂದ ಅಥವಾ ಜೀರ್ಣೋದ್ಧಾರ ಮಾಡುವುದರಿಂದ ಎಲ್ಲಿ ನೀರಾವರಿ ಅನುಕೂಲವಾಗುತ್ತದೆಂಬುದನ್ನು ಸರ್ವೆ ಮಾಡಿಸದೆ ಯಾವುದೋ ಇಷ್ಟಬಂದಕಡೆ, ಸರಿಯಾದ ಯೋಜನೆಯನ್ನೂ ಇಟ್ಟುಕೊಳ್ಳದೇ ಕೆಲಸಮಾಡಿದುದರಿಂದ ಹೆಚ್ಚು ಖರ್ಚುಮಾಡಿ ಕಡಮೆ ಉತ್ಪತ್ತಿ ಬರುತ್ತಿದೆ. ಈ ದೃಷ್ಟಿಯಿಂದ ವ್ಯವಸಾಯ ಮಂತ್ರಿಗಳಿಗೆ ತಮ್ಮ ಮೂಲಕ ನಾನು ನಿವೇದಿಸುವುದೇನೆಂದರೆ, Natural resources ಎಲ್ಲೆಲ್ಲಿದೆಯೋ ಅಲ್ಲಿ ಸಣ್ಣಪುಟ್ಟ ಕೆರೆಗಳನ್ನು ಕಟ್ಟುವುದಕ್ಕೂ, ಕೆರೆಗಳನ್ನು ರಿಪೇರಿ ಮತ್ತು ಜೀರ್ಣೋದ್ಧಾರಮಾಡುವುದಕ್ಕೂ ಏರ್ಪಾಡುಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತರಿಗೆ ಗೊಬ್ಬರ ಮತ್ತು ಇತರ ಸೌಲಭ್ಯಗಳನ್ನೊದಗಿಸುವಾಗ ಸಾಮಾನ್ಯವಾಗಿ ಅವರು ಬೆಳೆಯುವ ಬೆಳೆಯಮೇಲೆ ಒದಗಿಸಬೇಕೆಂದು ಸಲಹೆಮಾಡುತ್ತೇನೆ.

6-30 P.M.

ಇನ್ನು ಈ ಜಮೀನುಗಳನ್ನು ವಿಲೇವಾರಿ ಮಾಡುವಾಗ ಅವುಗಳನ್ನು ಬಡವರಿಗೂ ಜಮೀನಿಲ್ಲದ ವ್ಯವಸಾಯಗಾರರಿಗೂ ಹಂಚಲು ಈಗಿರತಕ್ಕ ಕಾನೂನುಗಳು ಅಷ್ಟು ಅನುಕೂಲವಾಗಿಲ್ಲ. ಸುಲಭ ರೀತಿಯಲ್ಲಿ ಹಂಚಿಕೆ ಮಾಡಲು ಅನುಕೂಲವಾಗಿರತಕ್ಕ ಕಾನೂನುಗಳಿಲ್ಲ. ಈ ದಿವಸ ಸರ್ಕಾರದವರು ಅಗ್ರಿಕಲ್ಚರಲ್ ಕೋ-ಆಪರೇಟೀವ್ ಫಾರಂಗಳನ್ನು ಪ್ರಾರಂಭಮಾಡಬೇಕೆಂಬ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಬಹಳ ಸಂತೋಷ. ಆದರೆ ಈ ಕೋ-ಆಪರೇಟೀವ್ ಫಾರ್ಮಿಂಗ್ ಸಿಸ್ಟಂನ ಕಾಯಿದೆ ಯಾವ ರೀತಿ ಇದೆಯೋ ಅದು ನನಗೆ ಗೊತ್ತಿಲ್ಲ. ಅಂತೂ ಈ ದಿವಸ ಹಾಲಿ ಇರತಕ್ಕ ಕಾನೂನುಗಳ ದೆಸೆಯಿಂದ ಬಡವನಿಗೂ ವ್ಯವಸಾಯ ಕೂಲಿಗಾರನಿಗೂ ಜಮೀನುಗಳು ದೊರೆಯದೆ ತೊಂದರೆಯುಂಟಾಗಿದೆ. ಈ ದಿವಸ ನಮ್ಮಲ್ಲಿ ಈ ಅಮೃತಮಹಲ್ ಕಾವಲು, ಡೇಟ್‌ಗ್ರೂಪ್ಸ್ ಇತ್ಯಾದಿಗಳಿಂದ ವ್ಯವಸಾಯಕ್ಕೆ ಬಿಡುಗಡೆ ಮಾಡಬಹುದಾದಂಥ ಜಮೀನು ಸುಮಾರು 80 ಸಾವಿರ ಎಕರೆಗೂ ಜಾಸ್ತಿ ಇರುತ್ತದೆ. ಈ ಜಮೀನನ್ನು ಆದಷ್ಟು ಬೇಗ ರಿಲೀಜ್ ಮಾಡಿಸಿ ಅಲ್ಲಿ ಜಮೀನಿಲ್ಲದ ಬಡವರಿಗೂ ಹರಿಜನರಿಗೂ ವ್ಯವಸಾಯದ ಕಾಲೋನಿಯನ್ನು ಮಾಡಿಕೊಡಿ. ಅದರಿಂದ ಉದ್ಯೋಗವಿಲ್ಲದ ಜನರನ್ನು ಅಲ್ಲಿ ರಿಹ್ಯಾಬಿಲಿಟೇಟ್ ಮಾಡಿದಂತಾಗುತ್ತದೆ. ಬಡಜನಗಳು ಊರುಪಕ್ಕದಲ್ಲಿರುವ ಜಮೀನುಗಳನ್ನು ಕೇಳಿದರೆ ಅವು ಎಂದಿಗೂ ಇವರಿಗೆ ದೊರೆಯುವುದಿಲ್ಲ. ಅವುಗಳೆಲ್ಲ ಹಣವಂತರಿಗೆ ಮೀಸಲಾಗಿರುತ್ತವೆ. ಆದರೆ ಈ ದಿವಸ ಹುಣಸೂರು ತಾಲ್ಲೂಕಿನಲ್ಲಿ ಎಕ್ಸ್-ಸರ್ವಿಸ್‌ಮೆನ್‌ಗಳಿಗೆ ಹೇಗೆ ಒಂದು ಅಗ್ರಿಕಲ್ಚರಲ್ ಕಾಲೋನಿ ಮಾಡಿಕೊಟ್ಟಿದ್ದಾರೋ ಇಲ್ಲಿಯೂ ಹಾಗೆ ಮಾಡಿಕೊಟ್ಟರೆ ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಬಹಳಮಟ್ಟಿಗೆ ಪರಿಹಾರಮಾಡಿದಂತಾಗುವುದು. ಇನ್ನು ರೂರಲ್ ಡೆವಲಪ್‌ಮೆಂಟ್ ಬಾಬಿನಲ್ಲಿ ಹರಿಜನರ ಅಭಿವೃದ್ಧಿ ವಿಚಾರ ಮಾತನಾಡೋಣವೆಂದರೆ ಅದರಿಂದ ಅನುಕೂಲಕ್ಕಿಂತ ತಲೆನೋವೇ ಜಾಸ್ತಿ ಇದೆ. ಆದುದರಿಂದ ಆ ವಿಚಾರಕ್ಕೆ ನಾನೀಗ ಕೈಹಾಕುವುದಿಲ್ಲ. ಆದರೆ ನಾನೀಗ ಹರಿಜನರಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರದವರು ಅಲ್ಲಲ್ಲೇ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳುತ್ತಿರುವ ವಿಚಾರಗಳನ್ನುದಲ್ಲಿ ಎರಡು ಮಾತುಗಳನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಹಾಗೆ ಅಕ್ವಯಿರ್ ಮಾಡಿಕೊಂಡ ಜಮೀನು ಹರಿಜನರಿಗೆ ಹಂಚತಕ್ಕ ಕಾರ್ಯದಲ್ಲಿ ಆಗಲೇ ಒಂದು ಮಂತ್ರಿಮಂಡಳ ಹೋಗಿ ಈಗ ಮತ್ತೊಂದು ಮಂತ್ರಿಮಂಡಳ ಬಂದಿದೆ. ಆದರೆ ಅವರಿಗೆ ಇನ್ನೂ ಸೈಟುಗಳು ಸಿಕ್ಕಿಲ್ಲ. ಸ್ಟೇಆರ್ಡರುಗಳೇ ಆಗುತ್ತಿವೆ. ಹೀಗೆ ಸರ್ಕಾರದವರು ಸ್ಟೇಆರ್ಡರುಗಳನ್ನು ಸರಾಗವಾಗಿ ಕೊಟ್ಟುಬಿಡುವುದರಿಂದ ಆ ವ್ಯಾಜ್ಯ ಪೂರೈಸುವುದರೊಳಗೆ ಆ ಭೂಮಿಯಲ್ಲಿ ತೆಂಗಿನ ಮರಗಳೋ ಬಾಳೆ ಮರಗಳೋ ದೊಡ್ಡದಾಗಿ ಬೆಳೆದಿರುತ್ತವೆ. ಅಲ್ಲಿಗೆ ಆ ಭೂಮಿ ವಿಚಾರ ಕೈಬಿಟ್ಟಹಾಗೆಯೇ ಸರಿ. ಆದರೆ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳುವ ವೇಳೆಯಲ್ಲಿ ಸ್ಥಳ ಪರೀಕ್ಷೆಗಾಗಿ ಅಮಲ್ದಾರರು, ಸಬ್‌ಡಿವಿಜನ್ ಅಧಿಕಾರಿಗಳು, ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರು ಇಷ್ಟೆಲ್ಲ ಜನರು ಹೋಗಿ ನೋಡಿಕೊಂಡು ಬಂದಿದ್ದಾಗ್ಯೂ ಅದಕ್ಕೆ ಒಂದು ಸ್ಟೇಆರ್ಡರನ್ನು ಸರಾಗವಾಗಿ ಕೊಡುವುದು ನ್ಯಾಯವಲ್ಲ; ಸೂಕ್ತವೂ ಅಲ್ಲ. ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮಾಭಿವೃದ್ಧಿ ಯೋಜನೆಯ ಬಗ್ಗೆ ಸರ್ಕಾರದವರು ಬಹಳ ಕಡಮೆ ಮೊಬಲಗನ್ನು ಒದಗಿಸಿದ್ದಾರೆ. ಇದರಿಂದ ಸಾಕಷ್ಟು ಹಣವಿಲ್ಲದೆ ಈ ದಿವಸ P.W.D. ಅವರೂ ಮತ್ತು ಜಿಲ್ಲಾಬೋರ್ಡುಗಳವರೂ ಗ್ರಾಮಗಳ ಜನರಿಗೆ ಅವರಿಗೆ ಬೇಕಾದಂಥ ಮಾರ್ಗಾನುಕೂಲಗಳನ್ನು ಅವರವರೇ ಕಲ್ಪಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಹೀಗಾಗಿ ಈ ದಿವಸ ಹರಿಜನರೂ-ಬಡವರೂ ಗ್ರಾಮಗಳಲ್ಲಿ ಸೋಮವಾರದ ಬಿಟ್ಟಿ ಕೆಲಸಗಳನ್ನು ಮಾಡಿಕೊಡಬೇಕಾಗಿದೆ. ಇದರಲ್ಲಿ ದೊಡ್ಡ ಮನುಷ್ಯರಿಗೆ ಲಾಭವಿದೆ. ಬಡಜನರಿಂದ ಬಿಟ್ಟಿ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಈ ದಿವಸ ರೂರಲ್ ಇಂಪ್ರೂವ್‌ಮೆಂಟ್ ಕಾರ್ಯಗಳನ್ನೂ, N.E.S. ಬ್ಲಾಕುಗಳಲ್ಲಿ ಆಗಬೇಕಾದ

ಕೆಲಸವನ್ನೂ ಬಡಬಗ್ಗರಿಂದ ಮಾಡಿಸುತ್ತಿದ್ದಾರೆ; ಆದ್ದರಿಂದ ಅಲ್ಲಿ ಈಗ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಕೊಳೆ, ರೊಚ್ಚು ಅಲ್ಲಲ್ಲೇ ಹೆಚ್ಚಾಗುತ್ತಿದೆ. ಈ ಬಾಬಿಗೆ ಸರ್ಕಾರದವರು ಹೆಚ್ಚು ನಿಗಾ ಕೊಟ್ಟು ಅಲ್ಲೆಲ್ಲಾ ಜಾಗ್ರತೆಯಾಗಿ ಡ್ರೈನೇಜುಗಳನ್ನೂ ಮತ್ತು ಹೆಲ್ತ್ ಸೆಂಟರುಗಳನ್ನೂ ತೆರೆಯಬೇಕೆಂದು ಸೂಚಿಸಿ ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಅಧ್ಯಕ್ಷರೇ, ಈ ದಿವಸ ಸರ್ಕಾರದವರು ವ್ಯವಸಾಯದ ಡಿಮ್ಯಾಂಡ್ ಮತ್ತು ರೂರಲ್ ಡೆವಲಪ್‌ಮೆಂಟ್ ಡಿಮ್ಯಾಂಡ್‌ಗಳನ್ನು ಸಭೆಯ ಮುಂದಿಟ್ಟಿದ್ದಾರೆ. ನಾನು ಇವುಗಳ ಪೈಕಿ ವ್ಯವಸಾಯಕ್ಕೆ ಸಂಬಂಧಪಟ್ಟ ಡಿಮ್ಯಾಂಡನ್ನು ಪೂರ್ಣವಾಗಿ ವಿರೋಧಿಸಬೇಕಾಗಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಆಹಾರವನ್ನೇ ಬೆಳೆಯುವುದಿಲ್ಲ!

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ನೀವು ಮಾಡುತ್ತಿರುವ ರೀತಿಯಿಂದಲೂ ಅಷ್ಟೇ ಆಗುತ್ತದೆ. ಏಕೆಂದರೆ, ಬೆಳೆಯುವವರಿಗೆ ಏನು ಪ್ರಯೋಜನವಾಗಬೇಕೋ ಅದು ಲಭಿಸುತ್ತಿಲ್ಲ. ಯಾವನು ಅನ್ಯರ ಹೊಲ ಉಳುತ್ತಾನೋ, ಅವನಿಗೇನು ಸಾಲ ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಈ ಇಲಾಖೆಯವರು ಒದಗಿಸುತ್ತಿರುವ ಸೌಲಭ್ಯಗಳು ನಿಜವಾಗಿ ಹೊಲ ಉಳುವವನಿಗೆ ಸಿಕ್ಕುತ್ತಿಲ್ಲ. ಈ ಸರ್ಕಾರದ ನೀತಿ ಒಂದಕ್ಕೊಂದಕ್ಕೆ conflict ಆಗುತ್ತದೆ. ಒಂದು ನೀತಿಯಿಲ್ಲದ ರೀತಿ ನಿಮ್ಮದಾಗಿದೆ. ಒಂದು ಕಡೆ ಹೇಳುತ್ತಾರೆ, ರೈತನು ಏಳಿಗೆಯಾಗಬೇಕಾದರೆ ಭೂಸುಧಾರಣೆಯಾಗಬೇಕು, ಭೂ ಸುಧಾರಣೆಯಿಂದ ಪ್ರತಿಯೊಬ್ಬ ರೈತನಿಗೂ ಜಮೀನು ಸಲ್ಲಬೇಕು ಎಂದು ಇನ್ನೊಂದು ಕಡೆ ಹೇಳುತ್ತಾರೆ.......

ಅಧ್ಯಕ್ಷರು.—ತಾವು ಸರಿಯಾಗಿ 6-46ಕ್ಕೆ ಮುಗಿಸಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆಗಲಿ. ಆದಷ್ಟು ಹೇಳಿ ಮುಗಿಸುತ್ತೇನೆ. ಮಿಕ್ಕದ್ದನ್ನು ನಮ್ಮ ಕಡೆಯವರು ಹೇಳುತ್ತಾರೆ.

ಸ್ವಾಮಿ, ನಾನೀಗ ವ್ಯವಸಾಯದ ಇಲಾಖೆಯ ವಿಚಕ್ಷಣೆಯನ್ನು ಹೇಳುತ್ತಿದ್ದೆ. ಈ ಇಲಾಖೆ ಬರೀ ಬಂಡವಾಳಗಾರರಿಗೆ ಅನುಕೂಲ ಮಾಡಿಕೊಡುವುದಕ್ಕೆ ಇರತಕ್ಕ ಇಲಾಖೆಯಾಗಿದೆ. ಟ್ರ್ಯಾಕ್ಟರುಗಳನ್ನು ಇಲಾಖೆಯವರು ಒದಗಿಸಿದ್ದಾರೆ. ಇದು ಯಾವನಿಗೆ ಸಿಕ್ಕುತ್ತದೆ? ಯಾವನ್ನು ಹೆಚ್ಚಿಗೆ ಜಮೀನು ಹೊಂದಿ ನೂರಾರು ಎಕರೆಗಳನ್ನಿಟ್ಟುಕೊಂಡು ಆಳುಕಾಳುಗಳಿಂದ ಕೂಡಿರುತ್ತಾನೋ ಅವನಿಗೆ ಅದೂ ಸುಲಭದರದಲ್ಲಿ, ಇದು ಸಿಕ್ಕುತ್ತದೆ, ಅಷ್ಟೇ. ನ್ಯಾಯವಾದ ರೈತನಿಗೆ ಅನ್ಯಾಯಮಾಡಿ ಯಾವನು ಅವನ ಜಮೀನನ್ನು ಬರೆಸಿಕೊಂಡು ದೊಡ್ಡವನಾಗಿರುತ್ತಾನೋ ಅವನಿಗೇ ನೀವೀಗ ಸಹಾಯ ಮಾಡುತ್ತಿದ್ದೀರಿ. ನಿಜವಾದ ರೈತ ದುಡ್ಡಿಲ್ಲದೆ ಜಮೀನು ಮಾರಿಕೊಂಡು ಕೊನೆಗೆ ಅವನ ಹತ್ತಿರವೇ ಆಳಾಗಿ ಉಳುತ್ತಿರುತ್ತಾನೆ. ರೈತನ ಜಮೀನು ಸುಲಭವಾಗಿ ಅವನಿಂದ ಬೇರೆಯವರ ಕೈಗೆ ತಟಾಯಿಸಿಹೋಗುವುದು ವಾಡಿಕೆಯಾಗಿಬಿಟ್ಟಿದೆ. ಹೀಗಿರುವಲ್ಲಿ ಸರ್ಕಾರದವರು ಒದಗಿಸುವ ಗೊಬ್ಬರ ಮುಂತಾದ ಸೌಲಭ್ಯಗಳು ಕೊನೆಗೂ ದುಡ್ಡಿದ್ದವನಿಗೇ ಹೋಗುತ್ತದೆ, ರೈತನ ಜಮೀನನ್ನು ಅನ್ಯಾಯವಾಗಿ ದುರಾಕ್ರಮಣ ಮಾಡಿದವನಿಗೇ ಹೋಗುತ್ತದೆ. ಹೀಗಿರುವಾಗ ನಿಜವಾಗಿ ಭೂಸುಧಾರಣೆ ಮಾಡುವ ಯೋಚನೆ ಸರ್ಕಾರಕ್ಕಿದೆಯೆ? ಎಲ್ಲಾ ರೈತರಿಗೂ ಜಮೀನಿರುವಂತೆ ಮಾಡಬೇಕೆಂಬ ಕಾನೂನು ಬರೀ ಕಡತದಲ್ಲಿಯೇ ಇರಬೇಕೇ ಅಥವಾ ಕಾರ್ಯರೂಪಕ್ಕೆ ಬರಬೇಕೇ ಎಂದು ಕೇಳುತ್ತೇನೆ. ಹಾಗಿರುವಾಗ ಈ ಇಡೀ ಇಲಾಖೆ ನಿಜವಾಗಿಯೂ ಇವೊತ್ತು ಪೂರ್ತಿಯಾಗಿ ಸ್ಕ್ರ್ಯಾಪ್ ಆಗಬೇಕು. ಟ್ರ್ಯಾಕ್ಟರು ಮತ್ತೊಂದು ಮಗದೊಂದು ಮಾಡುವುದರಲ್ಲಿ ಗಾಂಧಿವಾದ ಇಲ್ಲವೇ ಇಲ್ಲ. ಇದು ಪುನಃ ಹಿಂದೆ ಸ್ವರಾಜ್ಯಕ್ಕೆ ಮುಂಚೆ ಯಾವ ವಾದಗಳು ಇದ್ದವೋ ಅದಕ್ಕೆ ಸಮರ್ಥನೆ ನೀಡುತ್ತಿದೆ. ಕೂಲಿಯವನು ಕೂಲಿಯೇ ಮಾಡಬೇಕೆಂದು ಏನು ಇತ್ತೋ ಅದೇ ವಾದಕ್ಕೆ ಈ ಇಲಾಖೆ ಸಹಾಯ ಮಾಡುತ್ತಿದೆ. ಒಂದು ಅನುಕೂಲವಾದ ಸೌಲಭ್ಯ ಕಲ್ಪಿಸುವುದಾಗಿದೆಯೇ ವಿನಾ ರೈತಾಪಿ ಜನರಿಗೆ, ಬಡಜನರಿಗೆ ಪ್ರಯೋಜನವಾಗುತ್ತಿಲ್ಲ. ಇಡೀ ದೇಶದ ಇಷ್ಟು ಹಣವನ್ನು ತೆಗೆದುಕೊಂಡುಬಂದು ಈ ಇಲಾಖೆಗೆ ಕೊಟ್ಟು, ಗೊಬ್ಬರದ ರಿಯಾಯಿತಿ ಎಂದು ಕೊಡುತ್ತೀರಿ, ಆ ರಿಯಾಯಿತಿಯ ಹೆಚ್ಚು ಭಾಗ ಯಾರಿಗೆ ಹೋಗುತ್ತದೆ?—ನನಗೆ ಹೆಚ್ಚು ಜಮೀನಿದ್ದರೆ ನನಗೆ ಬರುತ್ತದೆ—ಯಾರಿಗೆ ಹೆಚ್ಚು ಜಮೀನಿರುತ್ತದೆಯೋ ಅವರಿಗೆ ಹೋಗುತ್ತದೆ. ಆ ಹಣ ಬಡವರಿಗೆ ಎಂದೆಂದಿಗೂ ಸೇರುವುದಿಲ್ಲ. ತಾವು ಭೂಸುಧಾರಣೆ ಮಾಡಬೇಕೆಂದು ಹೇಳುತ್ತಿರುವಾಗ ಇಷ್ಟು ದೊಡ್ಡ ಹಣ ಖರ್ಚು ಮಾಡಬೇಕಾಗತಕ್ಕ ಟ್ರ್ಯಾಕ್ಟರುಗಳು ಬೇಕಾಗಿಲ್ಲ. ಹೊಲ ಉಳುವವನಿಗೆ ಹಿಂದಿನಿಂದ ಬಂದಂಥ ನೇಗಿಲು ಇದೆ. ಅದನ್ನೇ ಇಟ್ಟುಕೊಂಡು ಹೆಚ್ಚಾಗಿ ಬೆಳೆಯುತ್ತಾ ಇದ್ದಾನೆ. ಟ್ರ್ಯಾಕ್ಟರ್ ಯಾರಿಗೆ ಬೇಕಾಗಿದೆ? ಇನ್ನೊಂದು ವಿಷಯ ಏನೆಂದರೆ, ಇದರಿಂದ ಅಗ್ರಿಕಲ್ಚರಲ್ unemployment ಉದ್ಭವವಾಗಿದೆ. ಟ್ರ್ಯಾಕ್ಟರ್‌ಗಳಿಂದ ಅನೇಕರಿಗೆ ಪಾಪ ಕೂಲಿ ಮಾಡುವುದಕ್ಕೂ ಕೂಡ ಅವಕಾಶವಿಲ್ಲದಂತೆ ಮಾಡಿ—ಜಮೀನ್ದಾರನ ಮನೆಯಲ್ಲಿ ಜೀತ ಮಾಡಿಸಿಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟಕ್ಕೆ ಭದ್ರ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಬಂಡವಾಳಶಾಹಿ ನೀತಿ ಯಾವುದಿದೆಯೋ ಇದು ಹಾಳಾಗುವತನಕ ದೇಶ ಉದ್ಧಾರವಾಗುವುದಿಲ್ಲ. ಈ ಸರ್ಕಾರದ ನೀತಿ ಬಂಡವಾಳಶಾಹೀ ನೀತಿ. ಬಂಡವಾಳಶಾಹಿಗಳ ಕೈಗೇ ಸರ್ಕಾರ transfer ಆಗಿದೆ. ಬಡಜನರು ಓಟು ಕೊಡುವವರೆಗೂ ಅವರವರಾಗಿ ಓಟು ಕೊಟ್ಟಾದಮೇಲೆ ಪುನಃ ಇವರು ಚಕ್ರವರ್ತಿಗಳಾದರೆ ಇದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಅವರೂ ಇವರ ಮನೆಗೆ ಬಂದು ಜೀತ ಮಾಡಲು ಎಷ್ಟು ಬೇಕೋ ಅಷ್ಟನ್ನು ಮಾಡುತ್ತಾ ಇದ್ದಾರೆ.

Mr. SPEAKER.—That does not come under '40 Agriculture.'

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ವ್ಯವಸಾಯದ ಇಲಾಖೆಯ ಈ ಯೋಜನೆಯಿಂದ ಪ್ರಯೋಜನವಿಲ್ಲ ಎಂದು ಹೇಳುತ್ತಾ ಇದ್ದೇನೆ. ಯಾವನು ಹೊಲ ಉಳುತ್ತಾನೆಯೋ ಅವನಿಗೆ ಪ್ರಯೋಜನವಾಗುವುದಿಲ್ಲ. ಯಾವನು ಹೊಲ ಉಳುವುದಿಲ್ಲವೋ, ಯಾರು ತಲೆ ಹೊಡೆದು ಜಮೀನು ಮಾಡಿಕೊಂಡಿದ್ದಾನೆಯೋ, ಯಾವನು ರೈತಾಪಿಜನರ, ಬಡಬಗ್ಗರ ಜಮೀನನ್ನು ಒಳಗೆ ಹಾಕಿಕೊಂಡಿರುತ್ತಾನೆಯೋ.................

Mr. SPEAKER.—All those things do not arise.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಇಲಾಖೆ ಬೇಡ ಎಂದು ಹೇಳುತ್ತಾ ಇದ್ದೇನೆ. I oppose the Demand, Sir.

Mr. SPEAKER.—I am very sorry that the way in which the Hon'ble Member conducts himself is rather not so dignified.

Sri B. K. PUTTARAMIYA.—I want to know from the Chair how, Sir.

Mr. SPEAKER.—When I was speaking the Hon'ble Member should not persist in speaking.

Sri B. K. PUTTARAMIYA.—I did not, Sir.

Mr. SPEAKER.—You did.

Sri B. K. PUTTARAMIYA.—If I have done it, I withdraw it. But I want to know how......

Mr. SPEAKER.—When I am speaking you persisted in speaking. It is not dignified. The second point is, we are not discussing on Land Revenue now. At the time, when we discuss land reforms all the remarks that the Hon'ble Member made may be relevant. But today we are discussing Agriculture. What the Hon'ble Member is saying is in regard to land policy.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಲ್ಯಾಂಡ್ ಪಾಲಿಸಿ ವಿಷಯ ಹೇಳುತ್ತಿಲ್ಲ. ಸರ್ಕಾರದ ಪಾಲಿಸಿ ಕಾನ್ಫ್ಲಿಕ್ಟ್ ಆಗಿದೆ, ಲ್ಯಾಂಡ್ ಪಾಲಿಸಿ ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಅಗ್ರಿಕಲ್ಚರಲ್ ಟ್ರ್ಯಾಕ್ಟರ್ಸ್ ತಂದು ಇಡುತ್ತಾ ಇದ್ದಾರೆ. ಟ್ರ್ಯಾಕ್ಟರುಗಳನ್ನು ಯಾವಾಗ ಕೊಡುತ್ತಾರೆಯೋ ಆಗ ಸರ್ಕಾರದ ಪಾಲಿಸಿ ಒಂದಕ್ಕೆ ಒಂದು ಕಾನ್ಫ್ಲಿಕ್ಟ್ ಆಗುತ್ತಾ ಇದೆ ಎಂದು ಹೇಳುತ್ತಾ ಇದ್ದೇನೆ.

ಎರಡನೆಯದಾಗಿ ಹರಿಜನರ ವಿಷಯಕ್ಕೆ ರೂರಲ್ ಡೆವಲಪ್‌ಮೆಂಟ್‌ಗೆ ನಮ್ಮ ಸರ್ಕಾರ ಸಹಾಯ ಮಾಡುತ್ತಾ ಇದೆ. ಅದು ಏನು ಎನ್ನುವುದನ್ನು ಒಂದೆರಡು ನಿಮಿಷ ಹೇಳಬೇಕಾಗಿದೆ. ಮೀನಿಗೆ ಗಾಳ ಹಾಕುವಾಗ ಹುಳು ಹಾಕುತ್ತಾರೆ, ಹುಳಹಾಕಿ ನೀರಿನಿಂದ ಗಾಳ ಎಳೆಯುತ್ತಾರೆ. ಆಗ ಆ ಹುಳಕ್ಕೆ ಮೀನು ಕಚ್ಚಿಕೊಳ್ಳುತ್ತದೆ. ಹಾಗೆ ಇದರಲ್ಲಿ ಆಗಿದೆ. ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಒಂದು ಹುಳ ಹಾಕಿದಹಾಗೆ, ಒಂದು ಹೊಲ ಒಬ್ಬ ಮನುಷ್ಯನಿಗೆ ಕೊಡುತ್ತೀರಿ. ಅಲ್ಲಿ ನೀರಿನ ಆಸರೆಗೆ ಬಾವಿ ಇದ್ದ ಹೊರತು ಪ್ರಯೋಜನವಾಗುವುದಿಲ್ಲ. ಅವನು ಏನು ಮಾಡಬೇಕು? ಸರ್ಕಾರದವರು ಕೊಟ್ಟರಲ್ಲಾ ಎಂದು ಹೇಳಿ ಸರ್ಕಾರದ ಹಿಂದೆ ಅದರ ಹಿಂಬಾಲಕನಾಗಿ ಜೀವಾವಧಿ ನಿಂತುಕೊಳ್ಳಬೇಕು.

ಇದು ನಿಜವಾಗಿಯೂ ಏನೂ ಸಹಾಯ ಆಗುವುದಿಲ್ಲ ಒಂದು ತಾಲ್ಲೂಕಿನಲ್ಲಿ ಹತ್ತು ಊರುಗಳನ್ನೋ ಐದು ಊರುಗಳನ್ನೋ ತೆಗೆದುಕೊಂಡು ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಪ್ರತಿಯೊಬ್ಬನಿಗೆ ಇಲ್ಲವಾದರೆ ಪ್ರತಿಯೊಂದು ಮನೆಗೆ ಹಂಚಬೇಕು. ಒಂದು ತಾಲ್ಲೂಕಿನ ನಾಲ್ಕು ಮನೆಗಳಿಗೆ ಕೊಡುವುದು ಎಂದರೆ ಬಾಯಲ್ಲಿ ಹೇಳುವುದು ಒಂದು ಕೈಯಿಂದ ಮಾಡುವುದು ಒಂದು ಆಗುತ್ತದೆ. ಹೀಗೆ ಮಾಡುವುದು ಬೇಡ. ಈಗ ಸರಕಾರವು ಒದಗಿಸಿರುವ ಹಣ ಹರಿಜನರ ಅಭಿವೃದ್ಧಿಗಾಗಿ ಏನೇನೂ ಸಾಲದು. ಈಗ ಕೊಡುತ್ತಿರುವ ಹಣವನ್ನು ಸಹ ನಿಮ್ಮ ಬೆಂಬಲಿಗರಿಗೇ ಹಂಚುತ್ತಿದ್ದೀರಿ. ಇದೇ ರೀತಿಯಾಗಿ ಶೋಷಿಸಿದವರನ್ನೇ ಮತ್ತೆ ಮತ್ತೆ ಶೋಷಿಸಲಾಗುತ್ತಿದೆ. ಈ ಅಲ್ಪ ಹಣವನ್ನು ಒದಗಿಸಿ ಹರಿಜನರನ್ನು ದಾಕ್ಷಿಣ್ಯಕ್ಕೆ ಒಳಪಡಿಸಿ ಹರಿಜನರು ಸಂಘಟಿತರು ಆಗದಂತೆ ಮಾಡುತ್ತಿದ್ದೀರಿ.

ಹರಿಜನರಿಗೆ ನಿವೇಶನ ಒದಗಿಸಲು ಸರಕಾರ ಜಮೀನನ್ನು ವಶಪಡಿಸಿಕೊಳ್ಳುವ ನೀತಿಯನ್ನು ಇದೇ ರೀತಿಯಾಗಿ ಮುಂದೆಯೂ ಅನುಸರಿಸಿಕೊಂಡು ಬಂದರೆ ಹರಿಜನರನ್ನು ಪ್ರತ್ಯೇಕವಾಗಿ ಇಡಲು ಪ್ರಯತ್ನಿಸುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ ಸವರ್ಣ ಹಿಂದುಗಳ ಜೊತೆಗೆ ಇರುವಂತೆ ಮಾಡಲು ಅವರ ಮನೆಗಳ ಹತ್ತಿರವೇ ಹರಿಜನರಿಗೂ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಸೈಟ್ ಕೊಡಬೇಕಾಗಿತ್ತು. ಈಗಲೂ ಸರಕಾರ ಅನುಸರಿಸುತ್ತಿರುವ ರೀತಿಯನ್ನು ನೋಡಿದರೆ ಪ್ರತ್ಯೇಕ ಪ್ರತ್ಯೇಕವಾಗಿ ದೂರ ಇಡುವಂತೆ ಮಾಡುತ್ತಿದ್ದಾರೆ. ನನ್ನ ತಾತ ಮುತ್ತಾತರು ನಮ್ಮ ಮನೆಯ ಹತ್ತಿರವೇ ಹರಿಜನರಿಗಾಗಿ ಒಂದು ಕಾಲನಿ ಮಾಡಿ 30 ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಹರಿಜನರ ಮನೆಗಳನ್ನು ಕಟ್ಟುವುದಕ್ಕೆ ನಾಲ್ಕು ಎಕರೆ ಭೂಮಿಯನ್ನು ಅಭಿಮಾನದಿಂದ ಹರಿಜನರಿಗೆ ಕೊಟ್ಟಿದ್ದಾರೆ. ನಾನು ಕೊಟ್ಟಿದ್ದೇನೆಂದು ಹೇಳುವುದಿಲ್ಲ. ನಮ್ಮ ತಾತಮುತ್ತಾತರು ಕೊಟ್ಟದ್ದನ್ನು ನಾನೂ ಸಹ ಉಳಿಸಿಕೊಂಡು ಬಂದಿದ್ದೇನೆ. ಹರಿಜನರ ಕಾಲನಿಯನ್ನು ನಮ್ಮ ಮನೆಯಹತ್ತಿರವೇ ಕಟ್ಟಿಸಿಕೊಟ್ಟಿದ್ದಾರೆ. ಈ ರೀತಿಯಾಗಿ ಹರಿಜನರ ಬಗ್ಗೆ ಅಭಿಮಾನ ಸಹಾನುಭೂತಿಯುಳ್ಳವರು ಕೆಲವರು ಇದ್ದಾರೆ. ನಮ್ಮ ಬೇವೂರ ಹಳ್ಳಿಗೆ ಬಂದು ನೋಡಿದರೆ ಇದು ಸತ್ಯವಾದದ್ದೆಂದು ಎಲ್ಲರೂ ಮನಗಾಣಬಹುದು. ಮಾನ್ಯ ಮಂತ್ರಿಗಳೂ ನಾನೂ ಒಂದೇ ತಾಲ್ಲೂಕಿನಿಂದ ಬಂದವರಾಗಿರುವುದರಿಂದ ಅವರಿಗೆ ಈ ವಿಷಯ ಗೊತ್ತು. ನಮ್ಮ ತಾತ ಹೀಗೆ ಮಾಡಿದ್ದಾರೆ ಅವರ ತಾತ ಹಾಗೆ ಮಾಡಲಿಲ್ಲ ಎಂದು ನಾನು ಹೇಳುವುದಿಲ್ಲ ಹರಿಜನರಲ್ಲಿ ಒಬ್ಬರಿಗೆ ಒಂದು ಮನೆ ಕಟ್ಟಿಸಿಕೊಟ್ಟರೆ ಎಲ್ಲರಿಗೂ ಕೊಟ್ಟಂತೆ ಆಗುವುದೇ? ಎಲ್ಲ ಹರಿಜನರಿಗೆ ವಾಸಮಾಡಲಿಕ್ಕೆ ಸಾಧ್ಯವೆ? ಇಷ್ಟೇ ಅಲ್ಲದೆ ಊರಿನ ಆಚೆಗೆ ಒಂದು ಒಂದೂವರೆ ಮೈಲಿ ದೂರದಲ್ಲಿ ಹರಿಜನರ ಕಾಲನಿಯನ್ನು ಮಾಡಿಬಿಟ್ಟಿದ್ದಾರೆ. ಹರಿಜನರ ಉದ್ಧಾರಕ್ಕಾಗಿ, ಹರಿಜನರ ಅಭಿವೃದ್ಧಿಗಾಗಿ ಭಾಷಣಮಾಡಿ ಮಾತನಾಡುವವರೇ ಹರಿಜನರನ್ನು ದೂರ ಇಟ್ಟಿದ್ದಾರೆ. ಈ ರೀತಿಯಾಗಿ ಕೇವಲ ಭಾಷಣ ಮಾಡುವುದು ಬೇಡ. ಹರಿಜನರ ಅಭಿವೃದ್ಧಿಗಾಗಿ ಕಳಕಳಿಯಿದ್ದರೆ, ನಿಷ್ಪಕ್ಷಪಾತತನವಿದ್ದರೆ, ಹರಿಜನರ ಉದ್ಧಾರ ನಿಜವಾಗಿ ಆಗಬೇಕೆಂದು ಮನಸ್ಸಿನಲ್ಲಿ ಇದ್ದರೆ, ಏನಾದರೂ ಕೃತಿಯು ಕಾರ್ಯ ಮಾಡಿ ತೋರಿಸಬೇಕು. ಮಾನ್ಯ ಸದಸ್ಯರಾದ ಶ್ರೀ ಶಾಮ ಸುಂದರ್‌ರವರು ಹೇಳಿದ ಹಾಗೆ ಒಂದು ಪ್ರತ್ಯೇಕವಾದ ಡಿಪಾರ್ಟ್‌ಮೆಂಟು ಮಾಡಿ ಹರಿಜನರ ಅಭಿವೃದ್ಧಿಗಾಗಿ ಇನ್ನೂ ಹೆಚ್ಚು ಹಣ ಕೊಡಬೇಕು. ಅವರ ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟು ಹಣ ಬೇಕಾಗುತ್ತದೆ ಎಂಬುದಕ್ಕೆ ಎಸ್ಟಿಮೇಟ್ ಮಾಡಿ ಅಷ್ಟು ಹಣವನ್ನು ಒದಗಿಸಬೇಕು.

Sri C. K. RAJAIAH SETTY (Chiknaikanahalli).—Sir, I rise to oppose the three Demands placed before us today,

not for one reason but for many reasons. We havespent crores of rupees and we are spending crores and we have to spend crores for grow more food schemes and many other schemes. Let us see what we have achieved in the First Five-Year Plan which was sponsored for food production. I see in the Agricultural Department so many tractors, bulldozers, and jeeps; what is their condition ? Some of them are in the Central Stores, some of them are in the Office of the Director of Agriculture and most of them are out of order. What is the amount we have invested on them ? We have invested crores and we are following a wrong method which ought not to have been followed. If we go deep into the matter we see that we are copying America on one side and Japan on the other. For growing paddy we are copying Japan. By getting tractors and bull-dozers we are copying America. Let us see what exactly the position in America is. In this connection something comes to my mind. When a farmer's son was questioned in America as to wherefrom food came he said that it came from Agriculture, Horticulture and Animal Husbandry. When an Indian farmer's son is questioned he says it comes from Burma, from Canada. If this is the position after spending about 370 crores for first plan, can we say that the department has done anything ? It is really a shame on our part being an agricultural country that we have wasted about 370 crores for the sake of development and improvement of agriculture. (An Hon'ble Member: 50 per cent success) It is only 20 per cent, a figure which you do not believe and I also do not believe. I give one other example. The other day the Hon'ble Chief Minister said that one of the reasons why we were short of food was that we were consuming 13 or 14 ounces now and that we were consuming 9 or 10 ounces before. But it is not the fact that we have consumed more; it is the inefficiency of the Government of India in entering into a pact with Pakistan in the years 55-56 and 56-57. In the years 55-56 and 56-57 there was a free trade pact between India and Pakistan when much food went out and nothing came in. But our Hon'bl- Chief Minister says that we have consumed more. I do not know how these people denied these true figures without going deep into things and without knowing what is actually happening.

There was a day when our Agricultural Department had made a name when one of the non-Agricultural graduates and an M.C.S. officer was in charge of the department. I do not think the Chair will object if I reveal the name. It is Sri T. G. Rama Iyer. We were seeing so many publications then by the department and contact with the villagers was more intimate, but we now think that the Agricultural Department has done something and is doing something inadequate. Our farmers cannot understand what exactly is being done by the officials in our Research farms. I do not see any publications in papers. A magazine called "ವ್ಯವಸಾಯದ ಸಂಶೋಧನ ಸಂಘ" is publishing some articles in this behalf. After all they are negligible.

I shall show why we should follow the Japanese method of agriculture. In America the extent of landholding per capita is 7.6 acres. In India it is two acres cultivable land and in Japan it is .27 acre. The number of people who are cultivating are 36 per cent in America, 76 per cent in India and 23 per cent in Japan. For an agriculturist family the per capita holding is 23.5 acres in America, 2.7 acres in India and 1.1 acres in Japan. In a family of five people the extent of land owned is 117.5 acres in America, 12 acres in India and 5.5 acres in Japan. In America they are following the extensive method of agriculture and there the cost of a tractor is Rs. 3,000 and the cost of fuel is ten annas a gallon for diesel oil and fourteen annas a gallon for petrol. In India a tractor costs from Rs. 8,000 to Rs. 10,000, diesel oil costs Rs. 2 per gallon and petrol costs Rs. 3-4 per gallon. The cost on these items in Japan is in between the American cost and the Indian cost. The Japanese have got improved agricultural implements. Where there is sufficient manpower, they are utilising only implements and not heavy machinery. Looking to the

(SRI C. K. RAJAIAH SETTY)

per capita holding of an agricultural family in India, it is desirable that we should follow Japan rather than America. We shoud follow Japan not only in Agriculture but also in fisheries and cottage industries.

Even in regard to fisheries, there are two types of fisheries. One is coastal fisheries and the other is inland fisheries. The inland fishery system is the most advanced in China and we have got to copy China in this respect.

Then, Sir, as regards the 'recoveries' I find that about Rs. 43 lakhs are to be recovered in the Agriculture Department. This shows the inefficient administration of the Agriculture Department. It is only about a week back I learnt that about Rs. 10,000 worth of ammonium sulphate had disappeared from the Chickmagalur District Depot and about Rs. 15,000 worth of ammonium sulphate was missing in Mandya Depot—about six months back. Then in reply to one of the questions the Minister said that the shortage in the Tumkur Depot was about Rs. 34,000 and he pleaded his inability to take any action. Investigation for the shortage has not been made because technical opinion has not been obtained. They want technical opinion to find out how much of the stock has become short due to evaporation. We know that Government has a factory at Belagola where there are so many experts. If a letter is written to that factory they can easily tell the rate of evaporation and from that they can find out the actual evaporation and the actual misappropriation. The demand as shown in the budget book shows that about Rs. 43 lakhs out of Rs. 2 crores has gone for 'recovery'. I do not know how much out of this sum of Rs. 43 lakhs can be recovered. If this is the state of affairs of the administration of the Department, I do not know how we can improve.

SRI H. S. RUDRAPPA.—What is this 'Rs. 43 lakhs'

SRI C. K. RAJAIAH SETTY.—It is shown as 'Recovery'. Even there no details have been given. It is very difficult far a layman to find out the details from the budget book. So I do not know how much has to be recovered from the depots where there is shortage and how much has to be recovered from the officials who might have misappropriated. I wish the Minister enlightens the House on this point.

7 P.M.

Coming to 'rural development', I want to say that the Amildar is the person who controls the taluka. There are so many wells which are not completed for the last ten years. Some of the half-constructed wells have collapsed. The village roads are abandoned. Government have invested about Rs. 75,000 in our taluk on certain works in the village improvement but owing to neglignce that amount is being wasted. I do not know whether an Amildar who neglects such things is fit to be in Government service.

Even in regard to budget allotments for the Depressed Classes, there is much leakage. These people do not get what is allotted for them. The budget provision for them is about Rs. 65 lakhs. I am sure that these people would not get even one-third of this amount provided for them. I have written about these things to the Deputy Commissioner and also to the Minister concerned. If a poor man is to be paid Rs. 50 as a grant, then out of that amount he has to forgo Rs. 20 immediately in favour of the person who gives it. When a certain person had occasion to complain about this to the Amildar, the Amildar told him that he would give him something for the purchase of bullocks and he asked him not to reveal such practices to anybody. I wrote about this to the Sub-Division Officer, but nothing has come out of it so far. This is the sorrowful state of affairs in our villages. Most of the budget allotments made for the poor people in the villages do not actually reach them. I would request the Hon'ble Minister to go to a dozen villages and see these things for himself. These practices have reached a

stage when they cannot be tolerated any longer. If the present Government do not remedy these things, then the Government which will surely follow this Government would take proper steps to mend these things and help the poor villagers.

Mr. SPEAKER.—How many more Members want to speak?

(*About twenty-six Members rose*).

ಅಧ್ಯಕ್ಷರು.—ಈಗ 20 ಜನ ಮಾತನಾಡಿದ್ದಾರೆ, ಇನ್ನೂ 26 ಜನ ಮಾತನಾಡುವವರಿದ್ದಾರೆ, ಬೆಳಗಾಗುವವರೆಗೆ ಕುಳಿತರೆ ಮುಗಿಯಬಹುದು. ಈ ದಿವಸ ಸಭೆ ಮುಂದಿರುವ ಡಿಮ್ಯಾಂಡ್ ಚರ್ಚೆ ಈ ದಿವಸವೇ ಮುಗಿಯಬೇಕೆಂದು ತೀರ್ಮಾನವಾಗಿತ್ತು, ಆದರೂ ಮಾತನಾಡಬೇಕೆಂದು ಅನೇಕರು ಹೇಳುತ್ತಿದ್ದಾರೆ. ಶ್ರೀ ಚನ್ನಬಸಪ್ಪನವರೂ ಸಹ ಮಾತನಾಡಬೇಕೆಂದು ಒಂದು ಸಲ ನಿಂತಿದ್ದರು. ಅವರಿಗೆ ಶ್ರೀ ಹುಚ್ಚಮಾಸ್ತಿಗೌಡರ ಮೂಲಕ ವಿನಂತಿ ಮಾಡಿಕೊಂಡ ಮೇಲೆ ಮಾತನಾಡದೆ ಉಪಕಾರ ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಯಾರೂ ನನಗೆ ಹೇಳಲಿಲ್ಲ, ನಾನೇ ಕುಳಿತುಕೊಂಡೆ.

ಅಧ್ಯಕ್ಷರು.—ಯಾರೂ ಹೇಳದೆ ತಾವೇ ಆ ರೀತಿ ಮಾಡಿದ್ದು ಬಹಳ ಒಳ್ಳೆಯ ಕೆಲಸ. ಈ ಸಂದರ್ಭದಲ್ಲೇನು ಮಾಡಬೇಕೋ ತಿಳಿಯದು. ನಾಳೆ ದಿವಸ ಮುಂದಿನ ಡಿಮ್ಯಾಂಡ್ ಹೇಗೆ ತೆಗೆದುಕೊಳ್ಳಬೇಕು, ಈಗಿರುವುದನ್ನು ಹೇಗೆ ಮುಗಿಸುವುದು ಎಂಬುದೇ ದೊಡ್ಡ ಯೋಚನೆಯಾಗಿದೆ. ಉಳಿದಿರುವುದು ಗಿಲೆಟಿನ್ ಆದರೆ ಆಗಲಿ, ನಾಳೆಯೂ ಇದನ್ನೇ ನಡೆಸೋಣ ಎಂದು ಹೇಳಿದರೆ ಪರವಾಗಿಲ್ಲ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

Dr. A. R. KARISIDDAPPA.—The number of days allotted for discussion of Demands should have been more, Sir. In the erstwhile Mysore Assembly, the number of days were limited because there were hardly 104 members. But the strength has now increased to 200 and therefore the period of discussion should also be enhanced. Of course this suggestion could hold good only for the next time, Sir. (*Laughter*).

Sri H. M. CHANNABASAPPA.—Problems connected with agriculture, food production are closely associated with land policy. Therefore I would suggest that if it is possible and permissible under the Rules, these subjects may be discussed alongside the land revenue. The suggestion may be considered for what it is worth, Sir.

Mr. SPEAKER.—I think it cannot be done at this stage.

ಅದು ತಮ್ಮ ಅಭಿಪ್ರಾಯವಾಗಿದ್ದರೆ ನಾನೇನು ಮಾಡಲಿ ? ಇಂತಹ ನಿರ್ಧಾರಮಾಡುವುದಕ್ಕೆ Leader of the Opposition ಅವರ ಅಭಿಪ್ರಾಯವನ್ನು ಕೇಳಿ ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ನಾನಾಗಲೇ ಹೇಳಿದ್ದೇನೆ. ಆಯಾ ದಿನದ ಡಿಮ್ಯಾಂಡುಗಳು ಪ್ರೋಗ್ರಾಂನಲ್ಲಿರುವಂತೆಯೇ ಹೋಗಬೇಕು.

Mr. SPEAKER.—My intention is to satisfy the members to an extent possible. But at the rate we are proceeding, I do not know how many Demands will be guillotined without discussion. We cannot eat the cake and at the same time demand that the wheat, jaggery, etc., should remain. The subjects under discussion will be continued tomorrow and as far as possible, Members would be given an opportunity.

ನಾಳೆ ದಿನ ಸರ್ಕಾರದ ಕೆಲಸವಿರುವುದರಿಂದ ಸಭೆಯನ್ನು ಬೆಳಿಗ್ಗೆ ಇಟ್ಟುಕೊಳ್ಳಬೇಕೆಂದು ಹೇಳಿದ್ದರಿಂದ special ಆಗಿ ನಾಳೆ ಬೆಳಗ್ಗೆ ಸಭೆ ನಡೆಯುತ್ತದೆ.

ಈಗ ಏನಾಗಿದೆ ಎಂದರೆ ನಾನು ಎರಡು ಮೂರು ಸಂದರ್ಭಗಳಲ್ಲಿ ಪ್ರಶ್ನೆಗಳ ವಿಚಾರವಾಗಿ ಕೇಳಿದಾಗ ಸರಿಯಾದ ಉತ್ತರ ಬರಲಿಲ್ಲ. ಇನ್ನು ಮೇಲೆ ಯಾರ ಅಭಿಪ್ರಾಯವನ್ನೂ ಕೇಳುವುದಿಲ್ಲ. ಯಾರ ಜವಾಬ್ದಾರಿಯನ್ನೂ ಕೇಳುವುದಿಲ್ಲ. ಈ ಹೌಸ್ ನಲ್ಲಿ ನನ್ನ ಜವಾಬ್ದಾರಿಯಮೇಲೆ ನಾನು ಇನ್ನು ಮುಂದೆ ಕೆಲಸ ನಡೆಸುತ್ತೇನೆ. ಸೀಟಿಂಗ್ arrangementsಗಳಲ್ಲಿ ಒಂದು ಗೊಂದಲವಾಯಿತು.

ಶ್ರೀ ಜಿ. ಶಿವಪ್ಪ.—ಹಿಂದೆ ಸಾಮಾನ್ಯವಾಗಿ ನಿರ್ದಿಷ್ಟವಾಗಿ ಕಾಲವನ್ನು ಗೊತ್ತುಮಾಡುತ್ತಿದ್ದರು. ಒಂದು ವೇಳೆ ಈ ಕಾಲವನ್ನು ಬದಲಾವಣೆಮಾಡುವುದಾಗಿದ್ದರೆ ಆಡಳಿತಪಕ್ಷ ಮತ್ತು ವಿರೋಧಪಕ್ಷಗಳ ಅಭಿಪ್ರಾಯವನ್ನು ಕೇಳಿ ಬದಲಾವಣೆಗೆ ಇಬ್ಬರೂ ಒಪ್ಪಿ ಒಂದು ಅಭಿಪ್ರಾಯಕ್ಕೆ ಬಂದರೆ ಆಗ ಅದರಂತೆ ಬದಲಾವಣೆ ಮಾಡುತ್ತಿದ್ದರು. ಶನಿವಾರ ಮಾತ್ರ ಬೆಳಿಗ್ಗೆ ಎಂಟೂವರೆಗಂಟೆಗೆ ಸಭೆ ಸೇರಬೇಕೆಂತಲೂ ಬೇರೆ ದಿವಸಗಳಲ್ಲಿ ಈಗಾಗಲೇ ನಿರ್ದಿಷ್ಟವಾಗಿರುವ ಕಾಲದಲ್ಲಿ ಸೇರಬೇಕೆಂತಲೂ ಸಭೆಯ ಅಭಿಪ್ರಾಯ ಬಂದಿದೆ......

ಅಧ್ಯಕ್ಷರು.—ಸಾಧಾರಣವಾಗಿ ಹಾಗೆಯೇ ನಡೆದುಕೊಂಡು ಬರುತ್ತಿದೆ. ಆದರೆ ನಾಳೆ ಮಾತ್ರ ಸ್ವಲ್ಪ ಬದಲಾವಣೆಯಾಗಿದೆ. ನಾನಾಗಲೇ ಹೇಳಿದ್ದೇನೆ.

Sri G. SIVAPPA.—At least, let us know the reason for changing the time.

Mr. SPEAKER.—The Hon'ble Member will please ask the Leader of the House for the reason, because, the reason is not completely disclosed to

(MR. SPEAKER)

me. He only said that there was some important work for all the Members of the Treasury Benches tomorrow. So, I shall bold the Assembly tomorrow in the morning. The Leader of the Opposition also was consulted. I thought it was not proper for me to ask for the reason. I am doing this on the request made by the Leader of the House and I suppose the Leader of the Opposition has also agreed to it. The House will meet tomorrow at 8-30. A.M.

The House adjourned at Twelve Minutes past Seven of the Clock to meet again at Thirty Minutes past eight on Friday the 26th July 1957.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ,
ಬೆಂಗಳೂರು. Bangalore.
ದಿನಾಂಕ Date..........
ಕ್ರಮಾಂಕ No...........
Karnataka Legislature Library.

WD 3860—GPB—900—3-1-58.